
# ಕಮಲ ಪಥ

RNI No.:KARKAN/2023/84034 | ಸಂಪುಟ : 04 | ಸಂಚಿಕೆ : 03 | ಜೂನ್ 2026 | ಬೆಂಗಳೂರು | ₹ : 10



# ವಿಶ್ವಾಸ, ವಿಕಾಸ ಮತ್ತು ಜನ ಕಲ್ಯಾಣಕ್ಕೆ 12 ವರ್ಷ ಸಂಭ್ರಮಾಚರಣೆ




ಬೆಂಗಳೂರು



ಹುಬ್ಬಳ್ಳಿ - ಧಾರವಾಡ



ಶಿವಮೊಗ್ಗ



ಕೊಪ್ಪಳ



ಗದಗ



ಬೀದರ್



ಬೆಳಗಾವಿ

# ಐತಿಹಾಸಿಕ ಮೈಲಿಗಲ್ಲು: ಹೆಮ್ಮೆಯ 12 ವರ್ಷಗಳ ಸುಶಾಸನ

ಭಾರತದ ರಾಜಕೀಯ ಇತಿಹಾಸದಲ್ಲೇ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಐತಿಹಾಸಿಕ ಕ್ಷಣಕ್ಕೆ ನಾವಿಂದು ಸಾಕ್ಷಿಯಾಗಿದ್ದೇವೆ. ನಮ್ಮ ಹೆಮ್ಮೆಯ ಜನಪ್ರಿಯ ಪ್ರಧಾನಮಂತ್ರಿ ಶ್ರೀ ನರೇಂದ್ರಮೋದಿಜೀಯವರು ದೇಶದ ಸುದೀರ್ಘ ಅವಧಿಗೆ ಚುನಾಯಿತ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಅಭೂತಪೂರ್ವ ಸಾಧನೆಯನ್ನು ಮಾಡಿದ್ದಾರೆ. ಶ್ರೀ ಮೋದಿಜೀಯವರ ಸಮರ್ಥ ನಾಯಕತ್ವವು, ಭಾರತವನ್ನು ಜಾಗತಿಕ ಮಟ್ಟದಲ್ಲಿ ಅಗ್ರಗಣ್ಯ ರಾಷ್ಟ್ರವನ್ನಾಗಿ ಮಾಡುವತ್ತ ಸ್ಪಷ್ಟ ಹೆಜ್ಜೆಗಳನ್ನಿಡುತ್ತಿದೆ. ಈ ಐತಿಹಾಸಿಕ ಸಂದರ್ಭದಲ್ಲಿ ವಿಶ್ವದ ಪ್ರಮುಖ ದೇಶಗಳ ನಾಯಕರು ಭಾರತದ ಪ್ರಧಾನಿಗಳಿಗೆ ಅಭಿನಂದನೆಗಳ ಸುರಿಮಳೆಗರೆದಿರುವುದು ಸಮಸ್ತ ಭಾರತೀಯರಿಗೆ ಹಾಗೂ ಭಾರತೀಯ ಜನತಾ ಪಾರ್ಟಿಯ ಪ್ರತಿಯೊಬ್ಬ ಕಾರ್ಯಕರ್ತನಿಗೂ ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

ಕಳೆದ ಹನ್ನೆರಡು ವರ್ಷಗಳ ಶ್ರೀ ಮೋದಿಯವರ ಸರಕಾರದ ಸಾಧನೆಗಳನ್ನು ಮನೆ ಮನೆಗಳಿಗೆ ತಲುಪಿಸಲು ಬಿಜೆಪಿ ವತಿಯಿಂದ ರಾಷ್ಟ್ರಾದ್ಯಂತ ವಿಶೇಷ ಮಹಾ ಸಂಪರ್ಕ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಪರಿಸರ ರಕ್ಷಣೆಯ ದೃಷ್ಟಿಯೊಂದಿಗೆ ವೃಕ್ಷಾರೋಪಣ, ವಿಶ್ವ ಯೋಗ ದಿನಾಚರಣೆಯಂತಹ ಕಾರ್ಯಕ್ರಮಗಳ ಜೊತೆಗೆ, 12 ವರ್ಷಗಳ ಶ್ರೀ ಮೋದಿ ಸರ್ಕಾರದ ಜನಕಲ್ಯಾಣ ಯೋಜನೆಗಳು ಮತ್ತು ದೇಶದ ಸರ್ವಾಂಗೀಣ ಅಭಿವೃದ್ಧಿಯ ಸಾಧನೆಗಳನ್ನು ಜನತೆಗೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಈ ಬಹು ಆಯಾಮದ ಅಭಿಯಾನವನ್ನು ರೂಪಿಸಲಾಗಿದೆ. ದೇಶದೆಲ್ಲೆಡೆಯಂತೆ ಕರ್ನಾಟಕದಲ್ಲೂ ಸಹ ರಾಜ್ಯ ಬಿಜೆಪಿ ಅಧ್ಯಕ್ಷರಾದ ಶ್ರೀ ಬಿ. ವೈ. ವಿಜಯೇಂದ್ರ ಅವರ ನಾಯಕತ್ವದಲ್ಲಿ ಈ ಅಭಿಯಾನವು ಅತ್ಯಂತ ಯಶಸ್ವಿಯಾಗಿ ಆರಂಭಗೊಂಡಿದ್ದು, ಹಳ್ಳಿ ಹಳ್ಳಿಗಳಲ್ಲೂ ಮೋದಿ ಜೀಯವರ 12 ವರ್ಷಗಳ ಈ ಸಾಧನೆಯನ್ನು ಕರ್ನಾಟಕದ ಉದ್ದಗಲಕ್ಕೆ ತಲುಪಿಸುವ ಕಾರ್ಯ ವೇಗ ಪಡೆದುಕೊಂಡಿದೆ.

## ಸಂಪಾದಕೀಯ

ಒಂದೆಡೆ ದೇಶವು ವಿಕಾಸದ ಹಾದಿಯಲ್ಲಿ ಮುನ್ನಡೆಯುತ್ತಿದ್ದರೆ, ಮತ್ತೊಂದೆಡೆ ಕರ್ನಾಟಕದಲ್ಲಿನ ಆಡಳಿತ ದಯನೀಯ ಕುಸಿತ ಕಂಡಿದೆ. ಕಳೆದ ಮೂರು ವರ್ಷಗಳಿಂದ ಅಧಿಕಾರಕ್ಕಾಗಿ ನಡೆದ ತೀವ್ರ ಆಂತರಿಕ ಸಂಘರ್ಷದ ಕಾರಣದಿಂದ ಸಿಎಂ ಗಾದಿಯ ಕುರ್ಚಿ ಬದಲಾಗಿದೆ. ಆದರೆ, ಮುಖ್ಯಮಂತ್ರಿ ಬದಲಾದರೂ ರಾಜ್ಯದ ಆಡಳಿತಾತ್ಮಕ ಪರಿಸ್ಥಿತಿ ಮಾತ್ರ ಬದಲಾಗದಿರುವುದು ರಾಜ್ಯದ ಜನತೆಯ ದೌರ್ಭಾಗ್ಯವಾಗಿದೆ. ಕಾಂಗ್ರೆಸ್ ಸರ್ಕಾರದ ಸಚಿವರ ನಡುವಿನ ಆಂತರಿಕ ಜಗಳ, ಹಗ್ಗಜಗ್ಗಾಟ ಮತ್ತು ರಾಜಕೀಯ ಅಸ್ಥಿರತೆಯ ಕಾರಣದಿಂದ ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣವಾಗಿ ಹಳಿ ತಪ್ಪಿದೆ. ಅದರಲ್ಲೂ ಬಿಡದಿ ಟೌನ್‌ಶಿಪ್ ನಿರ್ಮಾಣದಲ್ಲಿ ರೈತರ ದೃಷ್ಟಿಯಿಂದ ತೀರ್ಮಾನ ತೆಗೆದುಕೊಳ್ಳದಿದ್ದಲ್ಲಿ ಮುಂದಾಗುವ ಅನಾಹುತಗಳಿಗೆ ಕಾಂಗ್ರೆಸ್ ಸರಕಾರವೇ ಜವಾಬ್ದಾರಿ ಹೊರಬೇಕಾಗುತ್ತದೆ.

ರಾಷ್ಟ್ರೀಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಮಾನ್ಯ ಶ್ರೀ ನಿತಿನ್ ನಬಿನ್ ಜಿ ಅವರು ಪ್ರಥಮ ಬಾರಿಗೆ ಕರ್ನಾಟಕಕ್ಕೆ ಭೇಟಿ ನೀಡಿದ್ದು, ತಮ್ಮ ಎರಡು ದಿನಗಳ ಪ್ರವಾಸದ ಅವಧಿಯಲ್ಲಿ ವಿವಿಧ ಸಂಘಟನಾತ್ಮಕ ಚಟುವಟಿಕೆಗಳು ಮತ್ತು ಪಕ್ಷ ಬಲವರ್ಧನೆಯ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ರಾಜ್ಯದ ಸಂಘಟನೆಗೆ ಶಕ್ತಿ ತುಂಬುವ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಈ ಪ್ರವಾಸದ ವೇಳೆ ಅವರು ಬಿಜೆಪಿ ಬೆಂಗಳೂರು ಉತ್ತರ ಜಿಲ್ಲೆಯ ಪ್ರಶಿಕ್ಷಣ ಅಭಿಯಾನದಲ್ಲಿ ಭಾಗವಹಿಸಿದರಲ್ಲದೆ, ಉನ್ನತ ಮಟ್ಟದ ಕೋರ್ ಕಮಿಟಿ ಸಭೆ ಹಾಗೂ ರಾಜ್ಯ ಮಟ್ಟದ 'SIR' ನಿರ್ವಹಣೆ ಮತ್ತು ಉಸ್ತುವಾರಿ ತಂಡದೊಂದಿಗೆ ಪ್ರಮುಖ ಸಮಾಲೋಚನಾ ಸಭೆಗಳನ್ನು ಯಶಸ್ವಿಯಾಗಿ ನಡೆಸಿದರು. ರಾಜ್ಯದ ಪದಾಧಿಕಾರಿಗಳ ಜೊತೆ ವಿಶೇಷ ಸಭೆಯಲ್ಲಿ ಬಿಜೆಪಿ ಸಂಘಟನಾತ್ಮಕ ವಿಷಯಗಳನ್ನು ಆಮೂಲಾಗ್ರವಾಗಿ ಚರ್ಚಿಸಿದರು. ಇದರೊಂದಿಗೆ ಬೆಂಗಳೂರಿನ ಪ್ರಬುದ್ಧ ಯುವ ಮನಸ್ಸುಗಳೊಂದಿಗೆ (Young Minds) ಪ್ರತ್ಯೇಕ ಸಭೆ ನಡೆಸಿ ಸಂವಾದ ನಡೆಸುವ ಮೂಲಕ ಸಂಘಟನೆಯನ್ನು ಸರ್ವ ವ್ಯಾಪಿಯನ್ನಾಗಿಸುವತ್ತ ದೃಢವಾದ ಹೆಜ್ಜೆಗಳನ್ನಿಟ್ಟಿದ್ದಾರೆ. ಅವರ ಎರಡು ದಿನಗಳ ಪ್ರವಾಸೀ ಕಾರ್ಯಸೂಚಿಯು, ರಾಜ್ಯ ಬಿಜೆಪಿಯ ಕಾರ್ಯಕರ್ತರು ಮತ್ತು ನಾಯಕರಲ್ಲಿ ಅಭೂತಪೂರ್ವ ಉತ್ಸಾಹ ತುಂಬುವ ಕೆಲಸವಾಗಿ ಪರಿಣಮಿಸಿದೆ. ರಾಷ್ಟ್ರೀಯ ಅಧ್ಯಕ್ಷರ ಪ್ರವಾಸವನ್ನು ದಿಕ್ಸೂಚಿಯನ್ನಾಗಿಸಿಕೊಂಡು ಸಂಘಟನಾ ಕಾರ್ಯಗಳನ್ನು ಚುರುಕುಗೊಳಿಸುವ ಕಾರ್ಯವನ್ನು ನಿರ್ವಹಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ.

(ಬಿದರೆ ಪ್ರಕಾಶ್)
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಬಿವರೆ ಪ್ರಕಾಶ್
ಮೊ : 9513447961

**ಸುಭಾಷಿತ**



**ಹಿಂದಿರುಗಿ ನೋಡುವ ಅವಶ್ಯಕತೆ ಇಲ್ಲ.
ಮುಂದೆ ನೋಡಿ ನಮಗೆ ಅನಂತ ಶಕ್ತಿ,
ಉತ್ಸಾಹ ಹಾಗೂ ತಾಳ್ಮೆ ಬೇಕು.
ಆಗ ಮಾತ್ರ ಮಹತ್ಕಾರ್ಯಗಳನ್ನು
ನಾವು ಸಾಧಿಸಬಹುದು.**

**- ಸ್ವಾಮಿ ವಿವೇಕಾನಂದ**




**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999

email : bjpkamalapatha@gmail.com


#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞ ನಗರ, ಕಾಕ್ಸ್ ಟೌನ್,
ಬೆಂಗಳೂರು 560 005

**ಆತ್ಮೀಯ ಓದುಗರೆ,
ನಿಮ್ಮ ವಿಳಾಸದಲ್ಲಿ ಬದಲಾವಣೆ ಇದ್ದರೆ
ದಯವಿಟ್ಟು ತಿಳಿಸಿ. ನಿಮ್ಮ ಹೊಸ ವಿಳಾಸಕ್ಕೆ
ಮಾಸಪತ್ರಿಕೆ ಕಳುಹಿಸಲಾಗುವುದು.**

## ಈ ಸಂಚಿಕೆಯಲ್ಲಿ...

06

# ಇಬ್ಬರದ್ದೂ ವಿದೇಶೀ ಪ್ರವಾಸ ದಾಖಲೆಯೇ, ಆದರೆ . . .





- ದೀವಟಿಗೆ : ಉಸ್ತಾದ್ ಬಿಸ್ಮಿಲ್ಲಾ ಖಾನ್ ....05
- ಮೋದಿಯವರ ದೂರ ದೃಷ್ಟಿಕೋನದ ಆಡಳಿತ....09
- ವಿದೇಶಾಂಗ ನೀತಿಯಲ್ಲಿ ಮೋದಿ ಮೋಡಿ ....11
- ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ನಿತಿನ್ ನಬಿನ್ ರವರ ಕರ್ನಾಟಕ ಪ್ರವಾಸ....14
- 12 ವರ್ಷದ ಕೃಷಿ ಕ್ಷೇತ್ರದ ಸಾಧನೆ ....17
- ಇರಾನ್ - ಇಸ್ರೇಲ್ ಸಂಘರ್ಷ ಮತ್ತು ಭಾರತದ ಪಾತ್ರ ....21
- ಪ್ರಧಾನಿ ಮನ್ ಕಿ ಬಾತ್‌ನಲ್ಲಿ ಅಲ್ಪಸಂಖ್ಯಾತರ ಮೋರ್ಚಾ....23
- ಕೇಂದ್ರ ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರ ರಾಜ್ಯ ಪ್ರವಾಸ ......24
- ಸಿದ್ದರಾಮಯ್ಯನವರ ಆಡಳಿತ - ಕರುನಾಡಿನ ಕರಾಳ ಅಧ್ಯಾಯ, ಕರುನಾಡಿಗೆ ತಟ್ಟಿದ ಶಾಪ....26
- ಬೆಂಗಳೂರು ಉತ್ತರ ಜಿಲ್ಲಾ ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ವರ್ಗದಲ್ಲಿ ಶ್ರೀ ನಿತಿನ್ ನಬಿನ್ ರವರು ಮಾಡಿದ ಸಮಾರೋಪ ನುಡಿಗಳು ..29
- **ಹಿರಿಯ ಕಾರ್ಯಕರ್ತರ ಪರಿಚಯಮಾಲೆ :** ಕುಶಲ ಸಂಘಟಕ ಪದ್ಮಣ್ಣ ....31
- **ಚರ್ಚೆಗೊಂದು ಸಾಲು :** ಚುನಾವಣೆಯಲ್ಲಿನ ಗೆಲುವು ಜವಾಬ್ದಾರಿ, ಸೋಲು ಸವಾಲು .32
- **ಮಾಸದ ಮಾಧುರ್ಯ :** 110ನೇ ಕಾರ್ಯಕ್ರಮದಲ್ಲಿ ಶ್ರೀ ಜಿ.ಎಸ್. ಹೆಗಡೆ, ಸಪ್ತಕ ಬೆಂಗಳೂರು ಇವರ ಸಹಯೋಗದಲ್ಲಿ - ಸಂಗೀತ ಸಂಜೆ ....33
- **ಮನ್ ಕಿ ಬಾತ್ :** ಜನ ಶಕ್ತಿಯ ಮೂಲಕ ವಿಕಸಿತ ಭಾರತದತ್ತ ....34
- **ಸಮಷ್ಟಿ -** ಬೆಟ್ಟು ಮಾಡಿ ತೋರಿಸುವ ಕೃಪಾಚಾರ್ಯರಂತಹ ಪ್ರಜ್ಞರ ಅವಶ್ಯಕತೆ ....36

ದೀವಟಿಗೆ



# ಉಸ್ತಾದ್ ಬಿಸ್ಮಿಲ್ಲಾ ಖಾನ್

## ಸಾಮರಸ್ಯ ಹಾಗೂ ಹಿಂದೂ ಧರ್ಮದ ಮೇಲಿನ ಗೌರವದ ಸಂಕೇತ

ಡಾ. ಹರೀಶ್ ಆತ್ರೇಯ
ಕಾರ್ಯಕರ್ತರು

**ಭಾ**ರತದ ಶ್ರೇಷ್ಠ ಸಂಗೀತಗಾರರಲ್ಲಿ ಒಬ್ಬರಾದ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರು ಶಹನಾಯ್ ವಾದ್ಯವನ್ನು ಶಾಸ್ತ್ರೀಯ ಸಂಗೀತದ ಉತ್ತುಂಗಕ್ಕೇರಿಸಿದ್ದಕ್ಕಾಗಿ ಮಾತ್ರವಲ್ಲದೆ, ಭಾರತದ ವೈವಿಧ್ಯಮಯ ಧಾರ್ಮಿಕ ಸಂಪ್ರದಾಯಗಳ ಮೇಲಿನ ಅವರ ಅಪಾರ ಗೌರವಕ್ಕಾಗಿಯೂ ಆರಾಧಿಸಲ್ಪಡುತ್ತಾರೆ. ಧರ್ಮನಿಷ್ಠ ಮುಸ್ಲಿಂ ಆಗಿದ್ದರೂ, ಅವರು ಕೋಮು ಸಾಮರಸ್ಯ ಮತ್ತು ಧರ್ಮಗಳ ನಡುವಿನ ಪರಸ್ಪರ ಗೌರವಕ್ಕೆ ಅತ್ಯುತ್ತಮ ಉದಾಹರಣೆಯಾದವರು.

ಬಿಹಾರದ ಡುಮ್ರಾವ್‌ನಲ್ಲಿ ಜನಿಸಿ, ನಂತರ ಪವಿತ್ರ ನಗರವಾದ ವಾರಣಾಸಿಯಲ್ಲಿ (ಕಾಶಿ) ನೆಲೆಸಿದ ಬಿಸ್ಮಿಲ್ಲಾ ಖಾನ್ ಅವರು, ಹಿಂದೂ ಧರ್ಮದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯೊಂದಿಗೆ ಆಳವಾದ ನಂಟನ್ನು ಬೆಳೆಸಿಕೊಂಡರು. ಅವರ ಬಹುಪಾಲು ಸಂಗೀತ ಸಾಧನೆಯು ಪವಿತ್ರ ಗಂಗಾ ನದಿಯ ದಡದಲ್ಲಿ ಮತ್ತು ಪರಮ ಪವಿತ್ರ ಕಾಶಿ ವಿಶ್ವನಾಥ ದೇವಾಲಯದ ಆವರಣದಲ್ಲಿಯೇ ನಡೆಯುತ್ತಿತ್ತು. ಶ್ರದ್ಧಾವಂತ ಮುಸ್ಲಿಮರಾಗಿದ್ದರೂ, ಅವರು ಹಿಂದೂ ದೇವಾಲಯಗಳಲ್ಲಿ ಆಗಾಗ್ಗೆ ತಮ್ಮ ಸಂಗೀತವನ್ನು ಪ್ರಸ್ತುತಪಡಿಸುತ್ತಿದ್ದರು ಮತ್ತು ವಾರಣಾಸಿ ನಗರ ಹಾಗೂ ಗಂಗಾ ನದಿಯನ್ನು ತಮ್ಮ ಜೀವನ ಮತ್ತು ಸ್ಫೂರ್ತಿಯ ಅವಿಭಾಜ್ಯ ಅಂಗಗಳೆಂದು ಭಾವಿಸಿದ್ದರು.

### 'ಮಂಗಳ ವಾದ್ಯ'ದಿಂದ 'ಶಾಸ್ತ್ರೀಯ ಕಚೇರಿ'ಯತ್ತ . . .


ಐತಿಹಾಸಿಕವಾಗಿ ಶಹನಾಯ್ ಕೇವಲ ಮದುವೆ, ಶುಭ ಸಮಾರಂಭಗಳು ಮತ್ತು ದೇವಾಲಯಗಳ 'ನೌಬತ್ ಖಾನಾ'ಗಳಿಗೆ (ಗೌರವಾರ್ಥವಾಗಿ ವಾದ್ಯ ನುಡಿಸುವ ಸ್ಥಳ) ಸೀಮಿತವಾದ ಒಂದು 'ಮಂಗಳ ವಾದ್ಯ'ವಾಗಿತ್ತು. ಬಿಸ್ಮಿಲ್ಲಾ ಖಾನ್ ಅವರು ಶಹನಾಯಿಯಲ್ಲಿ 'ಗಾಯಕಿ ಅಂಗ್'ನ್ನು ಪರಿಪೂರ್ಣವಾಗಿ ಅಳವಡಿಸಿಕೊಂಡರು.

ಖಾನ್ ಅವರ ಸಂಗೀತದಲ್ಲಿನ ಮತ್ತೊಂದು ಪ್ರಮುಖ ತುಲನಾತ್ಮಕ ಅಂಶವೆಂದರೆ, ಕಠಿಣ ಶಾಸ್ತ್ರೀಯ ನಿಯಮಗಳಿಗೂ ಮತ್ತು ಜನಸಾಮಾನ್ಯರ ಭಾವನೆಗಳಿಗೂ ನಡುವೆ ಅವರು ನಿರ್ಮಿಸಿದ ಸೇತುವೆ. ರಾಗ್ ಭೈರವ್, ಯಮನ್, ಮಾಲ್ಕೌನ್ಸ್ ನಂತಹ ಗಂಭೀರ ರಾಗಗಳನ್ನು ನುಡಿಸುವಾಗ ಅವರು ಅತ್ಯಂತ ನಿಖರವಾದ ವ್ಯಾಕರಣ ಮತ್ತು ಶಾಸ್ತ್ರೀಯ ಶುದ್ಧತೆಯನ್ನು ಕಾಯ್ದುಕೊಳ್ಳುತ್ತಿದ್ದರು. ಅದೇ ಕಚೇರಿಯಲ್ಲಿ ಅವರು ಬನಾರಸ್ ಪ್ರಾಂತ್ಯದ ಅರೆ-ಶಾಸ್ತ್ರೀಯ ಹಾಗೂ ಜಾನಪದ ಶೈಲಿಗಳಾದ ಚೈತಿ, ಕಜ್ರಿ, ಹೋರಿ ಮತ್ತು ಧುನ್‌ಗಳನ್ನು ನುಡಿಸುವಾಗ ಸಂಪೂರ್ಣವಾಗಿ ಮಣ್ಣಿನ ಸೊಗಡಿನ ಭಾವನಾತ್ಮಕ ಮಾಧುರ್ಯಕ್ಕೆ ಹೊರಳಿಕೊಳ್ಳುತ್ತಿದ್ದರು.

'ಸಂಗೀತವೇ ಪ್ರಾರ್ಥನೆಯ ಒಂದು ರೂಪ' ಎಂಬುದು ಅವರು ಆಗಾಗ್ಗೆ ಹೇಳುತ್ತಿದ್ದ ಮಾತುಗಳಲ್ಲಿ ಒಂದಾಗಿತ್ತು. ನಮಾಜ್ ಮಾಡುವುದಕ್ಕೂ ಮತ್ತು ದೇವಾಲಯಗಳಲ್ಲಿ ಸಂಗೀತ ಸೇವೆ ಸಲ್ಲಿಸುವುದಕ್ಕೂ ನಡುವೆ ಅವರು ಎಂದಿಗೂ ಯಾವುದೇ ವಿರೋಧಾಭಾಸವನ್ನು ಕಾಣಲಿಲ್ಲ, ಬದಲಿಗೆ, ಅವೆರಡನ್ನೂ ಒಂದೇ ದೈವಿಕ ಸತ್ಯದತ್ತ ಕೊಂಡೊಯ್ಯುವ ಮಾರ್ಗಗಳೆಂದೇ ಅವರು ಪರಿಗಣಿಸಿದ್ದರು.

ಬೇರೊಂದು ಧರ್ಮವನ್ನು ಗೌರವಿಸುವುದರಿಂದ ತನ್ನ ಸ್ವಂತ ನಂಬಿಕೆಯು ಕಡಿಮೆಯಾಗುವುದಿಲ್ಲ, ಬದಲಿಗೆ ಅದು ಮಾನವೀಯತೆಯ ತಿಳುವಳಿಕೆಯನ್ನು ಇನ್ನಷ್ಟು ಶ್ರೀಮಂತಗೊಳಿಸುತ್ತದೆ ಎಂಬುದನ್ನು ಅವರ ಜೀವನವು ನಿರೂಪಿಸಿದೆ.

# ಇಬ್ಬರದ್ದೂ ವಿದೇಶೀ ಪ್ರವಾಸ ದಾಖಲೆಯೇ, ಆದರೆ . . .




ಸಂತೋಷ್ ತಮ್ಮಯ್ಯ
ಖ್ಯಾತ ಅಂಕಣಕಾರರು

## 12 ವರ್ಷಗಳ ಐತಿಹಾಸಿಕ ವಿದೇಶಾಂಗ ಪಯಣ ವಿಶ್ವಗುರು ಭಾರತದ ನಿರ್ಮಾಣದತ್ತ ದಿಟ್ಟ ಹೆಜ್ಜೆಗಳು

1953ರಲ್ಲಿ ಇಂಗ್ಲೆಂಡ್‌ನಲ್ಲಿ ಎರಡನೆಯ ಎಲಿಜಬೆತ್ ರಾಣಿಯ ಪಟ್ಟಾಭಿಷೇಕಕ್ಕೆ ತೆರಳಿದ ನೆಹರು ಅಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಹೊಗಳಿ ಬಂದಿದ್ದರು. ಅದೇ ವರ್ಷ ಈಜಿಪ್ಟ್, ಪಾಕಿಸ್ಥಾನ, ಇಟಲಿ ಮತ್ತು ಸ್ವಿಟ್ಜರ್ಲೆಂಡ್‌ಗೂ ತೆರಳಿದರು. ಇವಾವೂ ಅಧಿಕೃತ ರಾಜ್ಯ ಪ್ರವಾಸ (State visit)ಗಳಾಗಿರಲಿಲ್ಲ! ಪಾಕಿಸ್ಥಾನದ ಭೇಟಿಗೂ ಮಹತ್ವದ ಕಾರಣಗಳಿರಲಿಲ್ಲ. 1954ರಲ್ಲಿ ಶ್ರೀಲಂಕಾ ಮತ್ತು ಇಂಡೋನೇಷ್ಯಾದಲ್ಲಿ ಸಮ್ಮೇಳನಕ್ಕಾಗಿ ಪ್ರವಾಸ ಮಾಡಿದ್ದು ಬಿಟ್ಟರೆ ಉತ್ತರ ವಿಯೆಟ್ನಾಂ, ದಕ್ಷಿಣ ವಿಯೆಟ್ನಾಂ, ಲಾವೋಸ್, ಕಾಂಬೋಡಿಯಾ, ಚೀನಾ, ಹಾಂಗ್‌ಕಾಂಗ್, ಬರ್ಮಾ, ಥಾಯ್ಲೆಂಡ್, ಮಲೇಷ್ಯಾ ಭೇಟಿಗೆ ಅಧಿಕೃತ ಕಾರಣಗಳಿರಲಿಲ್ಲ. ಇಂಥ ವಿನಾ ಕಾರಣ ಪ್ರವಾಸಗಳಿಗೆ ನೆಹರು ನಾನಾ ಹೆಸರುಗಳನ್ನು ಕೊಟ್ಟುಕೊಳ್ಳುತ್ತಿದ್ದರು. ಮುಖ್ಯವಾಗಿ 'ಅಧ್ಯಯನ ಪ್ರವಾಸ'ದ ಹೆಸರಲ್ಲಿ ದೇಶ ಸುತ್ತುತ್ತಿದ್ದರು.

ಇಬ್ಬರ ಕಾಲಘಟ್ಟ, ಪರಿಸ್ಥಿತಿ, ಸವಾಲುಗಳು ಬೇರೆ. ಹಾಗಾಗಿ ದೀರ್ಘಾವಧಿಯವರೆಗೆ ಪ್ರಧಾನಮಂತ್ರಿಗಳಾಗಿದ್ದ ಇಬ್ಬರ ತುಲನೆ ಸಲ್ಲದು ಎಂಬ ಅಭಿಪ್ರಾಯ ಕೆಲವರದ್ದು. ಯಾರೇನೇ ಅಂದರೂ ಜನರಂತೂ ತುಲನೆ ಮಾಡಿಯೇ ಇರುತ್ತಾರೆ. ಆದ್ದರಿಂದ ಪ್ರಸ್ತುತ ದೀರ್ಘಾವಧಿಯ ಆಡಳಿತದ ಚರ್ಚೆ ನೆಹರು VS ಮೋದಿ ಆಗಿರುವುದು ಸತ್ಯ. ಅಸಲಿಗೆ ಹೇಳಬೇಕೆಂದರೆ ಅದಕ್ಕೆ ಮುಖ್ಯ ಕಾರಣ ನೆಹರು ಕಾಲದ ಎಡವಟ್ಟುಗಳೇ! ಏಕೆಂದರೆ ಗಾಂಧಿ ಕಂಡ ಭಾರತದ ಕನಸನ್ನು ಮೋದಿಯವರು ಒಂದೊಂದಾಗಿ ನನಸು ಮಾಡಿದ್ದಾರೆ. ವಾಸ್ತವವಾಗಿ ಅದನ್ನು ಮಾಡಬೇಕಿದ್ದಿದ್ದು ನೆಹರು! ಮೋದಿಯವರ ದೀರ್ಘಾವಧಿ ಆಡಳಿತದ ಸಂಗತಿ ಕಾಂಗ್ರೆಸಿಗೆ ಬೇಸರ ತರಿಸಿರಬಹುದು. ಆದರೆ  ನೆಹರು ದಾಖಲೆಯೊಂದು ಇಂದಿಗೂ ಜೀವಂತವಾಗಿದೆ ಎಂದು ಕಾಂಗ್ರೆಸಿಗರು ಖುಷಿ ಪಡುವ ಸಂಗತಿಯೊಂದಿದೆ. ನೆಹರು ತಮ್ಮ ಕಾಲದಲ್ಲಿ ಮಾಡಿದ ವಿದೇಶ ಪ್ರವಾಸ ಇಂದಿಗೂ ಒಂದು ದಾಖಲೆಯೇ! ಅದನ್ನು ಮೋದಿಯವರಿಗೆ ಮುರಿಯಲು ಸಾಧ್ಯವಾಗಿಲ್ಲ ಎಂದು ಕಾಂಗ್ರೆಸ್ ಹೆಮ್ಮೆ ಪಟ್ಟುಕೊಳ್ಳಬಹುದು! ನೆಹರು ಅವರ 'ದೀರ್ಘಾವಧಿ' ವಿದೇಶ ಪ್ರವಾಸದ ದಾಖಲೆ ಏನೆಂಬುದಕ್ಕೆ ಇತಿಹಾಸ ಸ್ಪಷ್ಟ ಸಾಕ್ಷಿಗಳನ್ನು ಕೊಡುತ್ತದೆ.

ಸ್ವಾತಂತ್ರ್ಯ ಲಭಿಸಿದ ಕೆಲವೇ ತಿಂಗಳಲ್ಲಿ ನೆಹರು ವಿದೇಶಿ ಪ್ರವಾಸವನ್ನು ಆರಂಭಿಸಿದ್ದರು. 1949ರಲ್ಲಿ ಅಮೆರಿಕ, ಕೆನಡಾ ಮತ್ತು ಐರ್ಲೆಂಡ್ ಪ್ರವಾಸಗೈದ ನೆಹರು 1950ರಲ್ಲಿ ಇಂಡೋನೇಷ್ಯಾಕ್ಕೆ ತೆರಳಿದರು. ವಿದೇಶಕ್ಕೆ ಹಾರುತ್ತಿದ್ದ ನೆಹರು ಮೇಲೆ ಆದಾಗಲೇ ವಿರೋಧಪಕ್ಷಗಳು ಟೀಕೆಗಳನ್ನು ಮಾಡಲಾರಂಭಿಸಿದ್ದವು. ಲೋಹಿಯಾರಂಥವರೇ, ದೇಶದ ಶೇ.95ರಷ್ಟು ಜನರು ದಿನಕ್ಕೆ ಮೂರು ಅಣಾ ಆದಾಯದಲ್ಲಿ ಬದುಕುತ್ತಿರುವಾಗ, ನೆಹರೂ ತನ್ನ ಮೇಲೆ ಪ್ರತಿದಿನ 25,000 ರೂಪಾಯಿ ಖರ್ಚು ಮಾಡುತ್ತಿದ್ದಾರೆ ಎಂದಿದ್ದರು. ಆದ್ದರಿಂದ 1951ರಲ್ಲಿ ನೇಪಾಳದ ಹೊರತಾಗಿ ಪ್ರಧಾನಮಂತ್ರಿಗಳು ಇನ್ನೆಲ್ಲೂ ತೆರಳಲಿಲ್ಲ. 1953ರಲ್ಲಿ ಇಂಗ್ಲೆಂಡ್‌ನಲ್ಲಿ ಎರಡನೆಯ ಎಲಿಜಬೆತ್ ರಾಣಿಯ ಪಟ್ಟಾಭಿಷೇಕಕ್ಕೆ ತೆರಳಿದ ನೆಹರು ಅಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಹೊಗಳಿ ಬಂದಿದ್ದರು. ಅದೇ ವರ್ಷ ಈಜಿಪ್ಟ್, ಪಾಕಿಸ್ತಾನ, ಇಟಲಿ ಮತ್ತು ಸ್ವಿಟ್ಜರ್ಲೆಂಡ್‌ಗಳಿಗೂ ತೆರಳಿದರು. ಇವಾವುವೂ ಅಧಿಕೃತ ರಾಜ್ಯ ಪ್ರವಾಸ (State visit)ಗಳಾಗಿರಲಿಲ್ಲ! ಪಾಕಿಸ್ತಾನದ ಭೇಟಿಗೂ ಮಹತ್ತ್ವದ ಕಾರಣಗಳಿರಲಿಲ್ಲ. 1954ರಲ್ಲಿ ಶ್ರೀಲಂಕಾ ಮತ್ತು ಇಂಡೋನೇಷ್ಯಾದಲ್ಲಿ ಸಮ್ಮೇಳನಕ್ಕಾಗಿ ಪ್ರವಾಸ ಮಾಡಿದ್ದು ಬಿಟ್ಟರೆ ಉತ್ತರ ವಿಯೆಟ್ನಾಂ, ದಕ್ಷಿಣ ವಿಯೆಟ್ನಾಂ, ಲಾವೋಸ್, ಕಾಂಬೋಡಿಯಾ, ಚೀನಾ, ಹಾಂಗ್‌ಕಾಂಗ್, ಬರ್ಮಾ, ಥಾಯ್ಲೆಂಡ್, ಮಲೇಷ್ಯಾ ಭೇಟಿಗೆ ಅಧಿಕೃತ ಕಾರಣಗಳಿರಲಿಲ್ಲ. ಇಂಥ ವಿನಾ ಕಾರಣ ಪ್ರವಾಸಗಳಿಗೆ ನೆಹರು ನಾನಾ ಹೆಸರುಗಳನ್ನು ಕೊಟ್ಟುಕೊಳ್ಳುತ್ತಿದ್ದರು. ಮುಖ್ಯವಾಗಿ 'ಅಧ್ಯಯನ ಪ್ರವಾಸ'ದ ಹೆಸರಲ್ಲಿ ದೇಶ ಸುತ್ತುತ್ತಿದ್ದರು. 1955ರಲ್ಲಿ ಈಜಿಪ್ಟ್, ಫ್ರಾನ್ಸ್. ಪೋಲ್ಯಾಂಡ್, ಯುಗೋಸ್ಲಾವಿಯಾ, ಆಸ್ಟ್ರಿಯಾ, ಇಟಲಿಗಳ ಭೇಟಿಗೆ ಕೂಡ ನಿಖರ ಕಾರಣಗಳಿರಲಿಲ್ಲ. ಆ ವರ್ಷದ ಸೌದಿ ಅರೇಬಿಯಾ ಮತ್ತು ರಷ್ಯಾ ಪ್ರವಾಸಗಳು ಮಾತ್ರ ಸ್ಟೇಟ್ ವಿಸಿಟ್ ಆಗಿದ್ದವು. ಆಶ್ಚರ್ಯವೆಂದರೆ ಅದೊಂದೇ ವರ್ಷ ನೆಹರು ಈಜಿಪ್ಟಿಗೆ ಎರಡೆರಡು ಬಾರಿ ಪ್ರವಾಸ ಮಾಡಿದ್ದರು. 1956ರಲ್ಲಿ ಅಮೆರಿಕ ಪ್ರವಾಸ ಮಾತ್ರ ಸ್ಟೇಟ್ ವಿಸಿಟ್ ಆಗಿದ್ದರೆ, ಉಳಿದಂತೆ ಐರ್ಲೆಂಡ್, ಫ್ರಾನ್ಸ್, ಯುಗೋಸ್ಲಾವಿಯಾ, ಗ್ರೀಸ್, ಈಜಿಪ್ಟ್, ಲೆಬನಾನ್, ಸಿರಿಯಾ, ಪಶ್ಚಿಮ ಜರ್ಮನಿಯ ಪ್ರವಾಸಗಳು 'ಅಧ್ಯಯನ ಪ್ರವಾಸ'ಗಳಾಗಿದ್ದವು. ಸುಯೆಜ್ ಯುದ್ಧದಿಂದ ನಲುಗಿ ಅಸ್ಥಿರಗೊಂಡಿದ್ದ ಸಿರಿಯಾದಲ್ಲಿ ಅಧ್ಯಯನ ನಡೆಸಬೇಕಾದ ಯಾವ ಸಂಗತಿ ನೆಹರುಗಿತ್ತೋ!?

1957ರಲ್ಲಿ ನೆಹರು 12 ದೇಶಗಳನ್ನು ಸುತ್ತಿದರು. ಆಗಲೂ ಗಲಭೆಗ್ರಸ್ತ ಸಿರಿಯಾಕ್ಕೆ ತೆರಳಿದ್ದರು. ಅದಕ್ಕೆ 'ಸೌಹಾರ್ದ ಭೇಟಿ' ಎಂಬ ಹೆಸರು ಕೊಟ್ಟುಕೊಂಡರು. 1959ರಲ್ಲಿ ನೇಪಾಳ ಮತ್ತು ಇರಾನಿಗೆ ತೆರಳಿದರೆ, 1960ರಲ್ಲಿ ಟರ್ಕಿ, ಲೆಬನಾನ್, ಈಜಿಪ್ಟ್, ಪಾಕಿಸ್ತಾನ ಮತ್ತು ಅಮೆರಿಕಾದಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ತೆರಳಿದ್ದರು. 1961ರಲ್ಲಿ ನಾಲ್ಕು ದೇಶಗಳು, 1962ರಲ್ಲಿ ಎರಡು ದೇಶಗಳಿಗೆ ತೆರಳಿದ್ದರು. 1962ರ ಭಾರತದ ಪರಿಸ್ಥಿತಿ ಹೇಗಿತ್ತು ಎಂಬುದನ್ನೊಮ್ಮೆ ನೆನಪು ಮಾಡಿಕೊಳ್ಳಬೇಕು. ನೆಹರು ಪ್ರವಾಸದ ಅಚ್ಚರಿಗಳು ಇವಿಷ್ಟೇ ಅಲ್ಲ, 1949ರ ಅಕ್ಟೋಬರ್ 10ರಂದು ಮೊಟ್ಟಮೊದಲ ಅಮೆರಿಕ ಪ್ರವಾಸದ ವಿವರಗಳು ಮಜವಾಗಿವೆ.

ಆ ಸಮಯದಲ್ಲಿ ಭಾರತದಿಂದ ನೇರವಾಗಿ ಅಮೆರಿಕಾಕ್ಕೆ ಹೋಗಬಲ್ಲ ವಿಮಾನಗಳು ಭಾರತದಲ್ಲಿರಲಿಲ್ಲ. ದೆಹಲಿಯಿಂದ ಲಂಡನಿಗೆ ತೆರಳಿದ ನೆಹರು ಅಲ್ಲಿ ಅಮೆರಿಕಾ ಅಧ್ಯಕ್ಷ ಹ್ಯಾರಿ ಟ್ರೂಮನ್ ಅವರ ವಿಮಾನವನ್ನು ಬಾಡಿಗೆಗೆ ಪಡೆದು ವಾಷಿಂಗ್ಟನ್ಗೆ ಹಾರಿದರು. ಅಕ್ಟೋಬರ್ 11ರಂದು ಅಮೆರಿಕಾ ತಲುಪಿದ ಪ್ರಧಾನಿ ಅವರು ವಿಮಾನ ನಿಲ್ದಾಣದಿಂದ ತೆರೆದ ಐಶಾರಾಮಿ ಬಾಡಿಗೆ ಕಾರಿನಲ್ಲಿ ಟ್ರೂಮನ್ ಅವರನ್ನು ಭೇಟಿಯಾಗಲು ಹೋದರು. ಅಂದರೆ ತಮ್ಮ ಭೇಟಿಗೆ ಬಂದ ನೆಹರುರನ್ನು ಟ್ರೂಮನ್ ಕ್ಯಾರೇ ಅನ್ನಲಿಲ್ಲ. ಅಧ್ಯಕ್ಷರ ಜೊತೆ 45 ನಿಮಿಷಗಳ ಕಾಲ ಮಾತುಕತೆ ನಡೆಸಿ ಹೊರಬಂದ ನೆಹರು

ಅವರನ್ನು ಮಾಧ್ಯಮ ಪ್ರತಿನಿಧಿಗಳು ಟ್ರೂಮನ್–ನೆಹರು ಮಾತುಕತೆಯ ವಿಷಯಗಳೇನಿದ್ದವು ಎಂದು ಪ್ರಶ್ನಿಸಿದಾಗ ನೆಹರು, I only talked about the general things. the rest of the important subjects, GS Bajpai (principal foreign affairs adviser) will see. ಎಂದು ನಿರ್ಲಜ್ಜವಾಗಿ ಉತ್ತರಿಸಿದರು!

ಅಧ್ಯಕ್ಷರ ಭೇಟಿಯ ನಂತರ ನೆಹರು ಅಮೆರಿಕಾ ಪ್ರವಾಸ ಮುಗಿಯಲಿಲ್ಲ, ಅವರೊಂದರೆ ಮಗಳು, ಕುಟುಂಬ ಸದಸ್ಯರು ಮತ್ತು ಸ್ನೇಹಿತರ ದೊಡ್ಡ ಹಿಂಡೇ ಇತ್ತು. ಬರೋಬ್ಬರಿ 6 ದಿನಗಳ ಕಾಲ ಅಮೆರಿಕ ಸುತ್ತಿ ಅಕ್ಟೋಬರ್ 16ರಂದು ಬಾಡಿಗೆ ಕಾರು ಹತ್ತಿ, ಬಾಡಿಗೆ ವಿಮಾನ ಏರಿ ಲಂಡನ್ ಮೂಲಕ ಭಾರತಕ್ಕೆ ಬಂದರು. ಅಮೆರಿಕದಿಂದ ಮರಳಿದ ನೆಹರು ಭಾರತದಲ್ಲಿ ನಾಲ್ಕು ದಿನ ಮಾತ್ರ ಇದ್ದರು. ಬಳಿಕ ಅದೇ ಹಿಂಡಿನೊಂದಿಗೆ ಕೆನಡಾಕ್ಕೆ ಹಾರಿದರು.

ಕೆನಡಾದಲ್ಲಿ ಘನಕಾರ್ಯಗಳೇನೂ ಇರಲಿಲ್ಲ. 1954ರಲ್ಲಿ ತಮ್ಮ ಪಟಾಲಂನೊಡನೆ ಮಾಡಿದ 10 ದಿನಗಳ ಚೀನಾ ಪ್ರವಾಸವನ್ನು ಅವರು ‘ಇಂಡೋ–ಚೀನಾ ಫಿಲಾಸಫಿಕಲ್ ಟೂರ್’ ಎಂದು ಕರೆದುಕೊಂಡರು. 1955ರ ಜೂನ್ 7ರಂದು ರಷ್ಯಾಕ್ಕೆ ತೆರಳಿದ ಅವರು ಭರ್ಜರಿ 17 ದಿನಗಳ ಕಾಲ ತಿರುಗಾಡಿದರು. ಬಹುಶ ಈ ‘ದೀರ್ಘಾವಧಿ’ಯ ದಾಖಲೆಯನ್ನು ಭಾರತದ ಯಾವ ಪ್ರಧಾನಮಂತ್ರಿಯೂ ಮುರಿಯಲಾರರು! ಈ ಪ್ರವಾಸದ ನಂತರ ನೆಹರು, ನಮ್ಮ ಯುವ ರಾಜತಾಂತ್ರಿಕ ಸೇವೆಯ ಸದಸ್ಯರು ಸಾಮಾನ್ಯವಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂಬ ಅನುಭವ ನನಗಾಯಿತು’ ಎಂದು ಬರೆದರು. ಅಂದರೆ ಅವರು ಮಾಡಿದ ಅಧ್ಯಯನ ಇಷ್ಟು!

ಅಧ್ಯಯನಕ್ಕೆ ಹೊರತಾಗಿ ನೆಹರು ಭೇಟಿಯ ಮೂಲಕ ಸ್ನೇಹ ಸೌಹಾರ್ದಗಳು ನೆಲೆಸಿತೇ ಎಂದರೆ ಅಲ್ಲೂ ವೈಫಲ್ಯಗಳೇ ಕಾಣಸುತ್ತವೆ. 1961ರ ಅಮೆರಿಕಾ ಪ್ರವಾಸದಲ್ಲಿ ಕೆನಡಿಯವರನ್ನು ಭೇಟಿಯಾದ ನೆಹರು ಆರ್ಥಿಕ ನೆರವು ಬೇಡಿದರು. ಶೀತಲ ಯುದ್ಧದ ಒತ್ತಡದಿಂದ ಕೆನಡಿ ಅದಕ್ಕೆ ತಾತ್ತ್ವಿಕ ಒಪ್ಪಿಗೆಯನ್ನು ಕೂಡ ನೀಡಿದ್ದರು.

ಆದರೆ ನೆಹರು ಅಮೆರಿಕಾದಲ್ಲಿದ್ದಾಗಲೇ ಲಂಡನಿನಿಂದ ಕೃಷ್ಣ ಮೆನನ್, ಅಮೆರಿಕಾದ ಅಪಾಯವನ್ನರಿತ ರಷ್ಯಾ ಹೊಸ ಪರಮಾಣು ಕಾರ್ಯಕ್ರಮವನ್ನು ಆಯೋಜಿಸಿದೆ ಎಂದು ಹೇಳಿಕೆಯನ್ನು ಕೊಟ್ಟರು. ಅದೊಂದು ಹೇಳಿಕೆಯಿಂದ ಕೆನಡಿ ಭಾರತಕ್ಕೆ ಆರ್ಥಿಕ ನೆರವು ನೀಡಲಾರೆ ಎಂದು ಘೋಷಿಸಿದರು. ಅದೇ ಭೇಟಿಯಲ್ಲಿ ನೆಹರು, ಬೋಸ್ಟನ್ ಎಂಐಟಿಯ ವೀಕ್ಷಣೆಗೆಂದು ತೆರಳಿದರು.


ಎಂಐಟಿಯಲ್ಲಿ 35 ಭಾರತೀಯ ಮೂಲದ ವಿದ್ಯಾರ್ಥಿಗಳಿದ್ದುದರಿಂದ ಕಾಲೇಜಿನ ಆಡಳಿತಾಧಿಕಾರಿ ಪುಟ್ಟ ಕಾರ್ಯಕ್ರಮವೊಂದನ್ನು ಏರ್ಪಡಿಸಿ ನೆಹರು ಅವರಿಂದ ಭಾಷಣ ಮಾಡಿಸಿದರು. ವಿದ್ಯಾರ್ಥಿಗಳ ಪರಿಚಯ ಮಾಡಿಕೊಂಡ ನೆಹರು ಭಾಷಣ ಮಾಡಿ ಎದ್ದು ಬಂದರು. ಸಭೆಯಲ್ಲಿ ಅದಾಗಲೇ ಹೆಸರುವಾಸಿಯಾಗಿದ್ದ ಬೋಸ್ ಕಂಪನಿಯ ಅಮರ್ ಬೋಸ್ ಮತ್ತು ಉದ್ಯಮಿ ಲಾರ್ಡ್ ಸ್ವರಾಜ್ ಪಾಲ್ ಇದ್ದರು. ಅವರೆಡೆಗೆ ಕಣ್ಣೆತ್ತಿಯೂ ನೋಡದ ನೆಹರು ಅವರನ್ನೆಂದೂ ಭಾರತದತ್ತ ಬರದಂತೆ ಮಾಡಿಬಿಟ್ಟರು! ಈ ಸನ್ನಿವೇಶ ಮತ್ತು ಮೋದಿಯವರ ವಿದೇಶಿ ಪ್ರವಾಸದಲ್ಲಿ ಭಾರತೀಯ ಸಂಜಾತರೊಡನೆ ಬೆರೆಯುವ, ಅವರನ್ನು ಭಾರತಕ್ಕೆ ಕರೆತರುವ ಪ್ರಯತ್ನವನ್ನೊಮ್ಮೆ ತುಲನೆ ಮಾಡಿಕೊಳ್ಳಬೇಕು.

ನೆಹರು ಕಾಲದಲ್ಲಿ ಸವಾಲುಗಳಿದ್ದವು. ಎಲ್ಲವನ್ನೂ ಹೊಸದಾಗಿ ಆರಂಭಿಸಬೇಕಾದ ಸಂದಿಗ್ಧತೆಯಿತ್ತು ಎನ್ನುವ ವಾದವನ್ನು ಹಲವರು ಮುಂದಿಡುತ್ತಾರೆ. ಏನಿರಲಿಲ್ಲ? ಕೇವಲ ಐದಾರು ಜಿಲ್ಲೆಗಳನ್ನು ಹೊಂದಿದ್ದ ಮೈಸೂರು ಸಂಸ್ಥಾನವೊಂದರಲ್ಲೇ ಎಲ್ಲವೂ ಇತ್ತು. ಅಂಥ ಅದೆಷ್ಟೋ ಪ್ರದೇಶಗಳು ದೇಶದಲ್ಲಿದ್ದವು. ಒಂದು ವೇಳೆ ಏನೇನೂ ಇರಲಿಲ್ಲ ಎಂದರೂ ನೆಹರು ನಂತರವಾದರೂ ಮಾಡಬೇಕಿತ್ತು. ಮೋದಿಯವರು ಅಧಿಕಾರಕ್ಕೆ ಬಂದ ಹೊತ್ತಲ್ಲೇನಿತ್ತು? ಯುಪಿಎ ಹಗರಣಗಳ ಸರಮಾಲೆಗಳನ್ನೇ ನಡೆಸಿ ದೇಶವನ್ನು ಬರಿದು ಮಾಡಿತ್ತು.

ಪ್ರಾದೇಶಿಕತೆ, ನಕ್ಸಲಿಸಂ, ಭಯೋತ್ಪಾದನೆಗಳು ವಿವಿಧ ರೂಪಗಳನ್ನು ತಳೆದು ದೇಶವನ್ನು ಬಿಕ್ಕಟ್ಟಿಗೆ ಸಿಲುಕಿಸಿದ್ದವು. ಸಮಾನತೆಯ ಘೋಷಣೆಗಳು ಅರ್ಥ ಕಳೆದುಕೊಂಡಿದ್ದವು. ಮಹಾಹತುಪ್ರಜ್ಞೆಯ ಕುಳಿಗೆ ಬಿದ್ದ ದೇಶ ಜಡಗೊಂಡಿತ್ತು. ಬಹುತಃ ಯಾವ ಪ್ರಧಾನಮಂತ್ರಿಯು ಎದುರು ಕೂಡ ಅಂಥ ಸವಾಲುಗಳಿರಲಿಲ್ಲ, ನೆಹರು ಕಾಲದಲ್ಲಂತೂ ಇರಲೇ ಇಲ್ಲ, ಹಾಗಾಗಿ ನೆಹರು ಮುಂದೆ ಮೋದಿ ಸಾಧನೆಯನ್ನು ಮುಂದಿಟ್ಟರೆ ಪ್ರಮಾದವೇನೂ ಇಲ್ಲ, ಅದು ಭಾರತವನ್ನು ಅಳೆಯುವ ಸರಿಯಾದ ಕ್ರಮ. ಗಳಿಸಿದ ಸ್ವಾತಂತ್ರ್ಯವನ್ನು ಅನುಭವಿಸುವೆಡೆಗೆ ತಂದ ಮಹಾಕಥನ.

ಇನ್ನುಳಿದಂತೆ ವಿದೇಶ ಪ್ರವಾಸದಲ್ಲಿ ನೆಹರು ಏನೇನು ಮಾಡಿದರೆಂಬುದಕ್ಕೆ ದಂತಕತೆಗಳು ಹಲವಿದೆ. ಏನೇ ಆದರೂ ನೆಹರು ವಿದೇಶ ಪ್ರವಾಸ ಮೋದಿಯವರ ವಿದೇಶ ಪ್ರವಾಸದಂತೆ ಇರಲಿಲ್ಲ, ಮೆಲೋನಿಗೆ ಮೆಲೋಡಿ ಕೊಟ್ಟಂತೆ ಖುಲ್ಲಂಖುಲ್ಲಾ ಇರಲಿಲ್ಲವೆಂಬುದು ಮಾತ್ರ ಸತ್ಯ. ಏಕೆಂದರೆ ಪ್ರವಾಸದಲ್ಲಿ ರಾಜತಾಂತ್ರಿಕತೆ ಇಲ್ಲದ ಮೇಲೆ ಬೇರೇನೂ ಒಂದು ಇರಲೇಬೇಕಲ್ಲ!





# ಮೋದಿಯವರ ದೂರ ದೃಷ್ಟಿಕೋನದ ಆಡಳಿತ

**ಜೂ**ನ್ 10, 2026 ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಒಂದು ದಾಖಲಿಸಬಹುದಾದ ದಿನ. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಅಧಿಕಾರಕ್ಕೇರಿ 4,399 ದಿನಗಳನನು ಪೂರೈಸಿದರು ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರ ಚುನಾಯಿತ ಅಧಿಕಾರಾವಧಿಯ ದಾಖಲೆಯನ್ನು ಮೀರಿ ನಿಂತರು. ಅವರು ಸತತವಾಗಿ 2014, 2019, 2024 ರ ಲೋಕಸಭಾ ಚುನಾವಣೆಗಳಲ್ಲಿ ಜಯಭೇರಿ ಗಳಿಸಿ, ಹೆಚ್ಚು ಕಾಲ ಆಡಳಿತದಲ್ಲಿ ಈ ದಾಖಲೆ ನಿರ್ಮಿಸಿದ್ದು ಮಾತ್ರವಲ್ಲ, ಒಂದೇ ನಾಯಕತ್ವ ನೇತೃತ್ವದಲ್ಲಿ ಸರ್ಕಾರ ಮುನ್ನಡೆಸಿದ ಅಪೂರ್ವದ ಕ್ಷಣವನ್ನೂ ನಿರ್ಮಾಣ ಮಾಡಿದರು.

ಸ್ವಾತಂತ್ರ್ಯ ನಂತರ ಜನಿಸಿದ ವ್ಯಕ್ತಿ ಪ್ರಧಾನಿಯಾಗಿದ್ದು ಇದೇ ಮೊದಲು. ಎರಡು ಪೂರ್ಣ ಅವಧಿ ಮುಗಿಸಿ ಮೂರನೇ ಬಾರಿ ಬಹುಮತದೊಂದಿಗೆ ಬಂದ ಮೊದಲ ಕಾಂಗ್ರೆಸ್ಸೇತರ ನಾಯಕ ಎಂಬ ಹೆಗ್ಗಳಿಕೆಯೂ ಶ್ರೀ ಮೋದಿಯವರದ್ದು, ಹಿಂದುಳಿದ ವರ್ಗಕ್ಕೆ ಸೇರಿದ ವ್ಯಕ್ತಿಯೊಬ್ಬರು ಇಷ್ಟೊಂದು ದೀರ್ಘ ಕಾಲ ಪ್ರಧಾನಿಯಾಗಿದ್ದೂ ವಿಶೇಷವೇ. ಶ್ರೀ ನರೇಂದ್ರಮೋದಿಯವರು ಅಧಿಕಾರದಲ್ಲಿದ್ದುದು ಅಂಕಿ ಸಂಖ್ಯೆಗಳ ಹೆಗ್ಗಳಿಕೆ ಮಾತ್ರವಲ್ಲ, ಅವರ ಆಡಳಿತ ವೈಖರಿಯೂ ದೇಶದೊಳಗೆ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಗೌರವವನ್ನು ಇಮ್ಮಡಿಗೊಳಿಸಿದೆ.

### ಮುಖ್ಯಮಂತ್ರಿಯಿಂದ ಪ್ರಧಾನಮಂತ್ರಿಯವರೆಗೆ

ಮೋದಿ ಅವರ ಆಡಳಿತ ಯಾನ 2001ರ ಅಕ್ಟೋಬರ್ 7ರಂದು ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಾರಂಭವಾಯಿತು. ಭೂಕಂಪ, ಬರ, ರಾಜಕೀಯ ಅಸ್ಥಿರತೆಯ ಸವಾಲುಗಳ ನಡುವೆ ಆರಂಭಗೊಂಡ ಆ ಪಯಣ, ಸತತ 13 ವರ್ಷಗಳ ಕಾಲ ಅವರನ್ನು ಗುಜರಾತ್‌ನ ಅತಿ ದೀರ್ಘಾವಧಿ ಮುಖ್ಯಮಂತ್ರಿಯಾಗಿಸಿತು. 2014ರ ಮೇ 26ರಂದು ರಾಷ್ಟ್ರ ರಾಜಕೀಯಕ್ಕೆ ಕಾಲಿಟ್ಟ ಬಳಿಕ, ಅಂದರೆ ಸಿಎಂ ಮತ್ತು ಪಿಎಂ ಎರಡೂ ಸೇರಿ ಒಟ್ಟು ಸುಮಾರು 24 ವರ್ಷಗಳ ಕಾರ್ಯಾಂಗದ ನೇತೃತ್ವಮೋದಿಯವರದ್ದು.

### ಜಾಗತಿಕ ವೇದಿಕೆಯಲ್ಲಿ ಭಾರತದ ಸ್ಥಾನ

ದೇಶದಲ್ಲಿನ ರಾಜಕೀಯ ಸ್ಥಿರತೆಯ ಹಿನ್ನೆಲೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ತನ್ನ ಛಾಪು ಮೂಡಿಸಿದೆ. ವಿಶ್ವ ಪ್ರಮುಖ ಆರ್ಥಿಕತೆಗಳ ಸಾಲಿನಲ್ಲಿ ಭಾರತ ಸ್ಥಾನ ಪಡೆದಿದೆ. ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳಲ್ಲಿ ದೇಶದ ಪಾತ್ರ ಹೆಚ್ಚು ಪ್ರಭಾವಶಾಲಿಯಾಗಿ ಪರಿಗಣಿಸಲ್ಪಡುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ದೇಶದ ಗಡಿಗಳನ್ನು ಮೀರಿ ಜಾಗತಿಕ ಮಟ್ಟದಲ್ಲೂ ಅಸಾಮಾನ್ಯವಾಗಿದೆ. ಕಳೆದ 12 ವರ್ಷಗಳಲ್ಲಿ ಶ್ರೀ ನರೇಂದ್ರ ಮೋದಿಯವರ ನೇತೃತ್ವ ಅಂಕಿಅಂಶಗಳ ದಾಖಲೆಯನ್ನಷ್ಟೇ ಪ್ರತಿಷ್ಠಾಪಿಸಲಿಲ್ಲ, ವಿವಿಧ ಕ್ಷೇತ್ರಗಳಲ್ಲಿ ಅಸಾಮಾನ್ಯ ಸಾಧನೆ ಮಾಡುವುದರ ಮೂಲಕ ಜನ ಮನ್ನಣೆ ಹಾಗೂ ಅಂತರರಾಷ್ಟ್ರೀಯ ಮನ್ನಣೆಯನ್ನು ಗಳಿಸಿಕೊಂಡಿತು. 50 ವರ್ಷಗಳ ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ ಪಾಕ್ ನೆಲದೊಳಗೆ ಸೇನಾ ಕಾರ್ಯಾಚರಣೆ ನಡೆಸಿ

ಭಯೋತ್ಪಾದಕರನ್ನು ಸದೆ ಬಡಿಯಲಾಯಿತು. ಪಾಕಿಸ್ತಾನವನ್ನು ರಾಜತಾಂತ್ರಿಕವಾಗಿ ಮಣಿಸಲು ಆರ್ಟಿಕಲ್ 370 ಯನ್ನು ರದ್ದುಪಡಿಸಲಾಯಿತು.

### ಬ್ರಿಟಿಷ್ ಕಾಲದ ಕಾನೂನುಗಳಿಗೆ ವಿದಾಯ

150 ವರ್ಷಗಳಷ್ಟು ಹಳೆಯ ಬ್ರಿಟಿಷ್ ಕಾಲದ ಕಾನೂನುಗಳ ಬದಲಿಗೆ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮದಂಥ ಹೊಸ ಕಾಯಿದೆಗಳು ಜಾರಿಗೆ ಬಂದಿದೆ. 1860ರ ಭಾರತೀಯ ದಂಡ ಸಂಹಿತೆಯ 511 ಸೆಕ್ಷನ್‌ಗಳ ಬದಲಿಗೆ ಈಗಿನ 358 ಸೆಕ್ಷನ್‌ಗಳು, 7 ವರ್ಷ ಅಥವಾ ಹೆಚ್ಚಿನ ಶಿಕ್ಷೆಯ ಪ್ರತಿ ಅಪರಾಧಕ್ಕೂ ವಿಧಿವಿಜ್ಞಾನ (ಫೋರೆನ್ಸಿಕ್) ತನಿಖೆಯನ್ನು ಕಡ್ಡಾಯಗೊಳಿಸಿರುವುದು, ತಂತ್ರಜ್ಞಾನವನ್ನು–ಡಿಜಿಟಲ್ ಜಗತ್ತನ್ನು ನಿಗದಿ ಪಡಿಸಿರುವುದು ಶಿಕ್ಷೆ ಅಲ್ಲ,ನ್ಯಾಯ ಎಂಬ ಆಶಯದ ಪ್ರಮುಖ ಎಂದು ಬಣ್ಣಿಸಲಾಗಿದೆ.

### ಮೊದಲ ಬಾರಿಗೆ ಗಡಿಯಾಚೆ ದಾಳಿ

ಉರಿ ದಾಳಿಯ ನಂತರದ ಸರ್ಜಿಕಲ್ ಸ್ಟ್ರೈಕ್ (2016), ಪುಲ್ವಾಮಾ ನಂತರದ ಬಾಲಾಕೋಟ್ ವಾಯುದಾಳಿ (2019) ಮತ್ತು ಆಪರೇಷನ್ ಸಂಕಲ್ಪ (2025) ಈ ಮೂರೂ ಭಾರತದ ಭದ್ರತೆಯ ದೃಷ್ಟಿಯಿಂದ ತೆಗೆದುಕೊಂಡ ದಿಟ್ಟ ಕ್ರಮಗಳು. ಮೊದಲ ಬಾರಿಗೆ ಭಾರತ ವಾಯುಪಡೆ ಗಡಿಯಾಚೆ ಎಲ್‌ಒಸಿ ದಾಟಿ ಮುನ್ನಡೆದು ಶತ್ರುಗಳ ಮೇಲೆ ನಡೆಸಿದ ವಾಯುದಾಳಿಯಾಗಿದೆ. ಆಪರೇಷನ್ ಸಂಕಲ್ಪದಡಿಯಲ್ಲಿ100ಕ್ಕೂ ಹೆಚ್ಚು ಭಯೋತ್ಪಾದಕ ಶಿಬಿರಗಳು ಮತ್ತು 9 ಅಡಗುದಾಣಗಳು ನಾಶವಾದವು, 11 ಸೇನಾ ಪಾಕಗಳ ಮೇಲೆ ನಿಖರ ದಾಳಿ ನಡೆದಿದೆ.

### ವಿದೇಶಾಂಗ ನೀತಿ ಮತ್ತು ಆಡಳಿತ ಸುಧಾರಣೆಯ ಪ್ರಥಮಗಳು

ವಿದೇಶಾಂಗ ನೀತಿಯು ಭಾರತದ ಸುರಕ್ಷತೆಯನ್ನು ಆದ್ಯತೆಯನ್ನಾಗಿಸುವ ಮೂಲಕ ಶ್ರೇಷ್ಟ ನಾಯಕತ್ವದ ದಾಹರಣೆಯಾಗಿದೆ. 125 ಅಭಿವೃದ್ಧಿಶೀಲ ರಾಷ್ಟ್ರಗಳ ಸಮಸ್ಯೆಗಳನ್ನು ಪ್ರತಿನಿಧಿಸಲು ವಾಯ್ಸ್ ಆಫ್ ಗ್ಲೋಬಲ್ ಸೌತ್ ಶೃಂಗಸಭೆಯನ್ನು ಆಯೋಜಿಸಿದ್ದು ದೇಶದ ನಾಯಕತ್ವಕ್ಕೊಂದು ಜ್ವಲಂತ ಉದಾಹರಣೆ.

### ವ್ಯಾಪಾರ ಒಪ್ಪಂದಗಳು ಮತ್ತು ಜಾಗತಿಕ ನೆರವು

ರಷ್ಯಾ–ಉಕ್ರೇನ್ ಸಂಘರ್ಷದ ವೇಳೆ ಆಪರೇಷನ್ ಗಂಗಾ ಮತ್ತು ಕೋವಿಡ್–19 ಸಾಂಕ್ರಾಮಿಕದ ವೇಳೆ ಜಾಗತಿಕ ಮೈತ್ರಿಯ ಮೂಲಕ 99 ರಾಷ್ಟ್ರಗಳಿಗೆ 30 ಕೋಟಿಗೂ ಹೆಚ್ಚು ಲಸಿಕೆ ಪೂರೈಸಿ ಭಾರತ ವಿಶ್ವದ ಔಷಧಾಲಯ ಎಂದು ಗುರುತಿಸಿಕೊಂಡ ಹೆಗ್ಗಳಿಕೆಯೂ ಭಾರತದ್ದು. ಭಾರತ–ಯುಎಇ ವ್ಯಾಪಾರ ಮತ್ತು ವ್ಯಾಪಾರ ಒಪ್ಪಂದದಲ್ಲಿ ಶೇ.100 ಸಂಪೂರ್ಣ ಮುಕ್ತವಾಗಿದೆ, ಭಾರತ–ಬ್ರಿಟನ್ ಒಪ್ಪಂದ ಎಫ್‌ಟಿಎ ಶೀಘ್ರದಲ್ಲಿ ಜಾರಿಯಾಗುವ ಪ್ರಕ್ರಿಯೆಯಲ್ಲಿದೆ. 99 ವ್ಯಾಪಾರ ಸಂಘಟನೆಯೊಂದಿಗೆ, 2026ರ ಹಾರ್ಮೋನಿ ಒಪ್ಪಂದದ ವೇಳೆ ಸ್ವದೇಶಿ ರಾಜತಾಂತ್ರಿಕತೆಯ ಮೂಲ ತತ್ವ ಪ್ರದರ್ಶಿಸಲ್ಪಟ್ಟಿತು.

### ಶೂನ್ಯ ನಕ್ಸಲ್ ಜಿಲ್ಲೆ, ಬಂದೂಕಿನ ಬದಲು ಅಭಿವೃದ್ಧಿ

2017ರಿಂದೀಚೆಗೆ ನಕ್ಸಲ್–ಪೀಡಿತ ಪ್ರದೇಶಗಳಲ್ಲಿ 15,100ಕ್ಕೂ ಹೆಚ್ಚು ಕಿ.ಮೀ ರಸ್ತೆ ನಿರ್ಮಾಣ, 9,600ಕ್ಕೂ ಹೆಚ್ಚು ಮೊಬೈಲ್ ಟವರ್ಗಳ ಮೂಲಕ ಸಂಪರ್ಕ, ಬ್ಯಾಂಕಿಂಗ್ ಸೇವೆಯೊಂದಿಗೆ 6,000ಕ್ಕೂ ಹೆಚ್ಚು ಅಂಚೆ ಕಚೇರಿಗಳು ಮತ್ತು ಸುಮಾರು 1,800 ಬ್ಯಾಂಕ್ ಶಾಖೆಗಳು ಆರಂಭವಾಗಿವೆ. 70 ವರ್ಷಗಳ ಕಾಲ ನಿರ್ಲಕ್ಷಿತವಾಗಿದ್ದ ಹಳ್ಳಿಗಳಿಗೆ ಈಗ ರಸ್ತೆ, 4ಜಿ, ಶಾಲೆ ಮತ್ತು ಮೂಲಸೌಕರ್ಯ ತಲುಪಿದೆ ಎಂಬುದು ಭದ್ರತೆ ಮತ್ತು ಅಭಿವೃದ್ಧಿ ಮಾದರಿಯ ಯಶಸ್ಸಿನ ಸಂಕೇತದ ಪ್ರತೀಕ.

### ರಕ್ಷಣಾ ಕ್ಷೇತ್ರದ ಪ್ರಥಮಗಳು: ಆಮದು ರಾಷ್ಟ್ರದಿಂದ ರಫ್ತು ರಾಷ್ಟ್ರದೆಡೆಗೆ

ಭಾರತದ ರಕ್ಷಣಾ ಕ್ಷೇತ್ರ ದಶಕಗಳ ಕಾಲ ಆಮದು ಎಂಬ ಪದದಿಂದಲೇ ಗುರುತಿಸಲ್ಪಟ್ಟಿತ್ತು. ಯುದ್ಧ ವಿಮಾನ, ಫಿರಂಗಿ, ಮದ್ದುಗುಂಡು ಸೇರಿದಂತೆ ಬಹುತೇಕ ಎಲ್ಲವೂ ವಿದೇಶದಿಂದ ಬರುತ್ತಿತ್ತು. 2014ರಲ್ಲಿ ಸುಮಾರು 686 ಕೋಟಿ ರೂ.ನಷ್ಟಿದ್ದ ರಕ್ಷಣಾ ರಫ್ತು 2026ರ ವೇಳೆಗೆ ಸುಮಾರು 38,400 ಕೋಟಿ ರೂ.ಗೆ ತಲುಪಿದೆ. ಅಂದರೆ ಸುಮಾರು 56 ಪಟ್ಟು ಪ್ರಗತಿ. ಇದು ಭಾರತ ಮೊದಲ ಬಾರಿಗೆ ತನ್ನ ಆಮದು ಮಾನಸಿಕತೆಯ ಬಿಡುಗಡೆ ಪಡೆದು ರಫ್ತು ಮಾಡುವ ದೇಶವಾಗಿ ಗುರುತಿಸಿಕೊಳ್ಳುವ ಕ್ಷಣವಾಗಿದೆ. ಇದಲ್ಲದೆ

83 ತೇಜಸ್ ಎಂಕೆ–1ಎ ಯುದ್ಧ ವಿಮಾನಗಳಿಗೆ ನೀಡಲಾದ ಆದೇಶ ಇದುವರೆಗಿನ ಅತಿ ದೊಡ್ಡ ಸ್ವದೇಶಿ ಯುದ್ಧ ವಿಮಾನ ಆದೇಶವಾಗಿದೆ. ಬ್ರಹ್ಮೋಸ್ ಏರೋಸ್ಪೇಸ್ ಆದಾಯ 2025–26ರ ಆರ್ಥಿಕ ವರ್ಷದಲ್ಲಿ 5,200 ಕೋಟಿ ರೂ. ತಲುಪಿದ್ದು, ಸುಮಾರು 4,000 ಕೋಟಿ ರೂ. ಮೌಲ್ಯದ ರಫ್ತು ಆದೇಶಗಳು ಬಂದಿವೆ. 41 ಆರ್ಡನೆನ್ಸ್ ಫ್ಯಾಕ್ಟರಿಗಳನ್ನು 7 ರಕ್ಷಣಾ ಸಾರ್ವಜನಿಕ ವಲಯದ ಸಂಸ್ಥೆಗಳಾಗಿ (ಡಿಪಿಎಸ್‌ಯು) ಪುನರ್ರಚಿಸಲಾಗಿದೆ. ಇದು ಸ್ವಾತಂತ್ರ್ಯ ನಂತರದ ರಕ್ಷಣಾ ಉತ್ಪಾದನಾ ರಚನೆಯಲ್ಲಿನ ಒಂದು ಬೃಹತ್ ಬದಲಾವಣೆಯಾಗಿದೆ.

ಕಳೆದ ಹತ್ತೆರಡು ವರ್ಷಗಳ ಆಡಳಿತದಲ್ಲಿ ಹಲವಾರು ವಿಷಯಗಳ ಬಗ್ಗೆ ತಾತ್ವಿಕ ಅಂತ್ಯದವರೆಗೆ ಕೊಂಡೊಯ್ಯುವಂತಹ ನಿರ್ಧಾರಗಳು ಈ ಸರಕಾರದಲ್ಲಿ ಕಾರ್ಯಗತವಾದವು. ರಕ್ಷಣಾ ರಫ್ತಿನಿಂದ ನಕ್ಸಲ್ ನಿರ್ಮೂಲನೆಯವರೆಗೆ, ಕಾಶ್ಮೀರದ ವಿಕೇಂದ್ರೀಕರಣದಿಂದ ಸ್ವದೇಶಿ ಕಾನೂನುಗಳವರೆಗೆ ಪ್ರತಿಯೊಂದು ನಿರ್ಧಾರಗಳು ಸಾಧ್ಯವಿಲ್ಲ ಎಂಬ ಹಳೆಯ ನಂಬಿಕೆಯನ್ನು ಮುರಿದ ಕ್ಷಣವಾಗಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ ಕೇಂದ್ರ ಸರ್ಕಾರ ರಾಷ್ಟ್ರಪ್ರಥಮ (ನೇಷನ್ ಫಸ್ಟ್) ಎಂಬ ಮಂತ್ರವನ್ನು ಮುನ್ನಿಟ್ಟುಕೊಂಡು ಇಂಥ ಹಲವು ಪ್ರಥಮಗಳನ್ನು ದಾಖಲಿಸಿದೆ ಎಂಬುದು ಹೆಗ್ಗಳಿಕೆಯ ವಿಷಯ.









# ವಿದೇಶಾಂಗ ನೀತಿಯಲ್ಲಿ ಮೋದಿ ಮೋಡಿ

**ಭಾರತದ ಭವಿಷ್ಯದ ಆರ್ಥಿಕ ಮತ್ತು ತಾಂತ್ರಿಕ ಭದ್ರತೆಗೆ ಮುನ್ನುಡಿ**



ಮಹೇಶ್ ಹೆಗಡೆ
ಕಾರ್ಯಕರ್ತರು

ಕೇಂದ್ರದಲ್ಲಿ ಶ್ರೀ ನರೇಂದ್ರ ಮೋದಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಭಾರತದ ವಿದೇಶಾಂಗ ನೀತಿ ಬದಲಾಗಿದ್ದು, ಜಾಗತಿಕ ರಾಜತಾಂತ್ರಿಕತೆಯಲ್ಲಿ ಭಾರತ ತನ್ನದೆ ಹೆಜ್ಜೆಗುರುತನ್ನು ಮೂಡಿಸಿದೆ. ಮೋದಿಯವರ ಪ್ರತಿಯೊಂದು ವಿದೇಶ ಪ್ರವಾಸವೂ ರಾಜತಾಂತ್ರಿಕ ಗೆಲುವಾಗಿ ಮಾರ್ಪಟ್ಟಿದೆ. ಅದರಲ್ಲೂ ಜಾಗತಿಕ ಭೌಗೋಳಿಕ ರಾಜಕೀಯ ವೇಗವಾಗಿ ಬದಲಾಗುತ್ತಿರುವ ಈ ಕಾಲಘಟ್ಟದಲ್ಲಿ, ಯುದ್ಧದ ಕರಿ ಛಾಯೆ ಆವರಿಸಿರುವ ಸಂದರ್ಭದಲ್ಲಿ ಮೋದಿಯವರ ಪಂಚ ರಾಷ್ಟ್ರಗಳ ಪ್ರವಾಸ ಅತ್ಯಂತ ಯಶಸ್ವಿಯಾಗಿದೆ.

ಯುಎಇ, ನೆದರ್‌ಲ್ಯಾಂಡ್ಸ್, ಸ್ವೀಡನ್, ನಾರ್ವೆ ಮತ್ತು ಇಟಲಿಯ ಪ್ರವಾಸವು ಭಾರತದ ರಾಜತಾಂತ್ರಿಕ ಹಾಗೂ ಆರ್ಥಿಕ ಆದ್ಯತೆಗಳ ದೃಷ್ಟಿಯಿಂದ ಅತ್ಯಂತ ಕಾರ್ಯತಂತ್ರದ ಹೆಜ್ಜೆಯಾಗಿದೆ. ಮಧ್ಯಪ್ರಾಚ್ಯದ ಪ್ರಭಾವಿ ರಾಷ್ಟ್ರ ಯುಎಇ ಯಿಂದ ಆರಂಭಗೊಂಡು, ಯುರೋಪಿನ ಪ್ರಮುಖ ಆರ್ಥಿಕ ಶಕ್ತಿಗಳಾದ ನೆದರ್‌ಲ್ಯಾಂಡ್ಸ್, ಸ್ವೀಡನ್, ನಾರ್ವೆ ಮತ್ತು ಕೊನೆಯದಾಗಿ ಜಿ-7 ಸದಸ್ಯ ರಾಷ್ಟ್ರವಾದ ಇಟಲಿಯವರೆಗಿನ ಈ ಪ್ರವಾಸವು ಕೇವಲ ಸೌಹಾರ್ದ ಭೇಟಿಯಾಗಿರದೆ, ಭಾರತದ ಭವ್ಯದ ಆರ್ಥಿಕ ಮತ್ತು ತಾಂತ್ರಿಕ ಭದ್ರತೆಗೆ ಮುನ್ನುಡಿ ಬರೆದಿದೆ.

### ಯುಎಇ-ಇಂಧನ ಭದ್ರತೆ ಮತ್ತು ಹೂಡಿಕೆಯ ಹೊಸ ಯುಗ



ಪ್ರವಾಸದ ಮೊದಲ ಹಂತವಾದ ಯುಎಇ ಭೇಟಿಯು ಭಾರತದ ಇಂಧನ ಭದ್ರತೆಯನ್ನು ಗಟ್ಟಿಗೊಳಿಸುವಲ್ಲಿ ಯಶಸ್ವಿಯಾಗಿದೆ. ಪಶ್ಚಿಮ ಏಷ್ಯಾದಲ್ಲಿ ಸಂಘರ್ಷದ ವಾತಾವರಣ ಇರುವ ನಡುವೆಯೂ ಈ ಭೇಟಿ ನಡೆದಿರುವುದು ವಿಶೇಷ. ಕಚ್ಚಾ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲ ದೀರ್ಘಾವಧಿ ಪೂರೈಕೆಗೆ ಒಪ್ಪಂದಗಳಾಗಿವೆ. ಭಾರತದ ವಿವಿಧ ವಲಯಗಳಲ್ಲಿ ಸುಮಾರು 5 ಶತಕೋಟಿ ಡಾಲರ್ ಹೂಡಿಕೆ ಮಾಡಲು ಒಪ್ಪಿಗೆ ಸೂಚಿಸಿದೆ. ಈ ಭೇಟಿಯು ಕೇವಲ ತೈಲ ವ್ಯಾಪಾರಕ್ಕೆ ಸೀಮಿತವಾಗಿರದೆ, ರಕ್ಷಣಾ ಕ್ಷೇತ್ರ ಮತ್ತು ನೌಕಾಯಾನ ಲಿಂಕ್‌ಗಳನ್ನು ಬಲಪಡಿಸುವ ಮೂಲಕ ಕಾರ್ಯತಂತ್ರದ ಪಾಲುದಾರಿಕೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ದಿದೆ.

### ನೆದರ್‌ಲ್ಯಾಂಡ್-ಹಸಿರು ಹೈಡ್ರೋಜನ್ ಮತ್ತು ಸೆಮಿಕಂಡಕ್ಟರ್ ಕ್ರಾಂತಿ

ನೆದರ್‌ಲ್ಯಾಂಡ್ಸ್ ತಂತ್ರಜ್ಞಾನ ಮತ್ತು ಸುಸ್ಥಿರ ಇಂಧನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ದೇಶ. ಮೋದಿಯವರ ಭೇಟಿಯ ವೇಳೆ ಉಭಯ ದೇಶಗಳ ಬಾಂಧವ್ಯವನ್ನು ಕಾರ್ಯತಂತ್ರದ ಪಾಲುದಾರಿಕೆಗೆ ಏರಿಸಲಾಯಿತು. ಸೆಮಿಕಂಡಕ್ಟರ್, ಕೃತಕ ಬುದ್ಧಿಮತ್ತೆ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್ ಒಳಗೊಂಡ ತಂತ್ರಜ್ಞಾನದ ಜಂಟಿ ಅಭಿವೃದ್ಧಿಗೆ ಒಪ್ಪಂದವಾಗಿದೆ. ಪರಿಸರ ಸ್ನೇಹಿ ಭವಿಷ್ಯಕ್ಕಾಗಿ ಅತ್ಯಂತ ಮಹತ್ವಾಕಾಂಕ್ಷೆಯ ಭಾರತ-ನೆದರ್‌ಲ್ಯಾಂಡ್ಸ್ ಹಸಿರು ಹೈಡ್ರೋಜನ್ ಅಭಿವೃದ್ಧಿ ರೋಡ್‌ಮ್ಯಾಪ್ ಅನ್ನು ಪ್ರಾರಂಭಿಸಲಾಗಿದೆ.

### ಸ್ವೀಡನ್ ಮತ್ತು ನಾರ್ವೆ



ಸ್ವೀಡನ್ ಮತ್ತು ನಾರ್ವೆ ಭೇಟಿಯು ಭಾರತದ ಹವಾಮಾನ ಬದಲಾವಣೆಯ ಹೋರಾಟ ಮತ್ತು ನವೋದ್ಯಮ ಸಂಸ್ಕೃತಿಗೆ ದೊಡ್ಡ ಬಲ ನೀಡಿದೆ. ನಾರ್ವೆಯಲ್ಲಿ ಪ್ರಧಾನಿ ಮೋದಿಯವರು ಶೃಂಗಸಭೆಯಲ್ಲಿ ಪಾಲ್ಗೊಂಡರು. ಸ್ವೀಡನ್ ಭೇಟಿಯ ವೇಳೆ ಭಾರತ-ಸ್ವೀಡನ್ ಸಂಬಂಧವನ್ನು ಕಾರ್ಯತಂತ್ರದ ಪಾಲುದಾರಿಕೆಗೆ ಮುನ್ನಡೆಸಲಾಯಿತು. ಅಲ್ಲದೆ ಮೋದಿಯವರಿಗೆ ಸ್ವೀಡನ್‌ನ ಪ್ರತಿಷ್ಠಿತ ಅತ್ಯುನ್ನತ ನಾಗರಿಕ ಗೌರವ ನೀಡಿ ಗೌರವಿಸಲಾಯಿತು.




ನಾರ್ವೆಯೊಂದಿಗೆ ಸಮುದ್ರ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಕ್ಲೀನ್ ಎನರ್ಜಿ ಕುರಿತು ಚರ್ಚಿಸಲಾಯಿತು. ನಾರ್ವೆ ದೇಶವು

ಮೋದಿಯವರಿಗೆ ತನ್ನ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಗ್ರಾಂಡ್ ಕ್ರಾಸ್ ಆಫ್ ದಿ ರಾಯಲ್ ನಾರ್ವೇಜಿಯನ್ ಆರ್ಡರ್ ಆಫ್ ಮೆರಿಟ್ ನೀಡಿ ಗೌರವಿಸಿತು. ಇದು 43 ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರ ಮೊದಲ ನಾರ್ವೆ ಭೇಟಿಯಾಗಿದೆ.

### ಇಟಲಿ-ಜಿ-7 ಒಕ್ಕೂಟದ ಒಡನಾಟ ಮತ್ತು ಕಾರ್ಯತಂತ್ರದ ಬಲವರ್ಧನೆ



ಪ್ರವಾಸವು ಇಟಲಿಯಲ್ಲಿ ಮುಕ್ತಾಯವಾಯಿತು. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಮತ್ತು ಪ್ರಧಾನಿ ಮೋದಿ ನಡುವಿನ ದ್ವಿಪಕ್ಷೀಯ ಮಾತುಕತೆಗಳು ಜಾಗತಿಕ ಗಮನ ಸೆಳೆದವು. ರಕ್ಷಣೆ, ಬಾಹ್ಯಾಕಾಶ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಕ್ರಿಟಿಕಲ್ ಮಿನರಲ್ (ವಿಶೇಷ ಖನಿಜಗಳು) ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲಿನ ರೋಡ್‌ಮ್ಯಾಪ್ ಸಿದ್ಧಪಡಿಸಲಾಯಿತು. ಪ್ರಧಾನಿ ಮೋದಿಯವರಿಗೆ ಜಾಗತಿಕ ಕೃಷಿ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಪ್ರತಿಷ್ಠಿತ ಅಗ್ರಿಕೋಲಾ ಪದಕ ನೀಡಿ ಗೌರವಿಸಲಾಯಿತು.

### ಸರಬರಾಜು ಸರಪಳಿಯ ಸುಧಾರಣೆ

ಕೋವಿಡ್ ಮತ್ತು ರಷ್ಯಾ-ಉಕ್ರೇನ್ ಯುದ್ಧದ ನಂತರ ಜಾಗತಿಕ ಸರಬರಾಜು ಸರಪಳಿ ಅಸ್ತವ್ಯಸ್ತಗೊಂಡಿದೆ. ಭಾರತವು ಯುರೋಪಿಯನ್ ರಾಷ್ಟ್ರಗಳೊಂದಿಗೆ ಸೆಮಿಕಂಡಕ್ಟರ್ ಮತ್ತು ಅಗತ್ಯ ಖನಿಜಗಳ ಒಪ್ಪಂದ ಮಾಡಿಕೊಳ್ಳುವ ಮೂಲಕ ಚೀನಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಹೆಜ್ಜೆ ಇಟ್ಟಿದೆ.

### ಹವಾಮಾನ ಬದಲಾವಣೆ ಮತ್ತು ಇಂಧನ ಸಂಕ್ರಮಣ

ಭಾರತವು ಕೇವಲ ಕರಗುವ ಇಂಧನಗಳ ಮೇಲೆ ಅವಲಂಬಿತವಾಗದೆ, ಉತ್ತರ ಯುರೋಪ್ ದೇಶಗಳ ತಂತ್ರಜ್ಞಾನದ ನೆರವಿನಿಂದ ಹಸಿರು ಹೈಡ್ರೋಜನ್ ಮತ್ತು ನವೀಕರಿಸಬಹುದಾದ ಇಂಧನದತ್ತ ವೇಗವಾಗಿ ಹೆಜ್ಜೆ ಇಡುತ್ತಿದೆ.

### ರಕ್ಷಣಾ ಸ್ವಾವಲಂಬನೆ

ತಂತ್ರಜ್ಞಾನ ಹಸ್ತಾಂತರ ಮತ್ತು ಭಾರತದಲ್ಲೇ ರಕ್ಷಣಾ ಉಪಕರಣಗಳ ಜಂಟಿ ಉತ್ಪಾದನೆಗೆ ಯುರೋಪಿಯನ್ ರಾಷ್ಟ್ರಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಇದು ಮೇಕ್ ಇನ್ ಇಂಡಿಯಾ ಯೋಜನೆಗೆ ಪೂರಕವಾಗಿದೆ. ಜಾಗತಿಕ ನಾಯಕತ್ವ: ಒಂದೆಡೆ ಮಧ್ಯಪ್ರಾಚ್ಯ, ಇನ್ನೊಂದೆಡೆ ಜಿ-7 ರಾಷ್ಟ್ರಗಳೊಂದಿಗೆ ಏಕಕಾಲದಲ್ಲಿ ಸಮತೋಲನದ ಸಂಬಂಧ ಕಾಯ್ದುಕೊಳ್ಳುವ ಮೂಲಕ ಭಾರತವು ಜಾಗತಿಕ ರಾಜತಾಂತ್ರಿಕತೆಯಲ್ಲಿ ತನ್ನ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡಿದೆ.



### ನಿಮ್ಮ ಬಳಿಗೇ ಚಾಯ್‌ವಾಲಾ

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ಶ್ರೀ ಮೋದಿ, ತಮ್ಮನ್ನು ಚಾಯ್‌ವಾಲಾ ಎಂದು ಉಲ್ಲೇಖಿಸಿಕೊಂಡಿದ್ದಾರೆ. ಚಹಾ ದಿನ ಆಚರಿಸಲು ಚಾಯ್‌ವಾಲಾ ಇಲ್ಲಿಗೆ ಬಂದಿದ್ದಾನೆ. ಭಾರತದ ಚಹಾ ತಳಿಗಳು ವೈವಿಧ್ಯಮಯವಾಗಿದೆ ಮತ್ತು ಭಾರತೀಯ ಚಹಾದ ಶಕ್ತಿಯೂ ಅಷ್ಟೇ ಅದ್ಭುತ ಎಂದು ತಿಳಿಸಿದರು.

### ವಿಶ್ಲೇಷಣೆ

ರಾಜತಾಂತ್ರಿಕತೆಯಲ್ಲಿ ಮೂರು ವಿಭಿನ್ನ ಮಾದರಿಗಳು ಸ್ಪಷ್ಟವಾಗುತ್ತಿವೆ. ಎಲ್ಲ ಶಕ್ತಿಕೇಂದ್ರಗಳೊಂದಿಗೆ ಸಮತೋಲನದ ಸಂಬಂಧವನ್ನು ಭಾರತ ಅನುಸರಿಸುತ್ತಿದೆ. ಅಮೆರಿಕಾ ಭದ್ರತೆ ಮತ್ತು ಆರ್ಥಿಕ ಒತ್ತಡದ ಮೂಲಕ ಪ್ರಭಾವ ಉಳಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದೆ. ಆರ್ಥಿಕ ಶಕ್ತಿಯ ಮೂಲಕ ರಾಷ್ಟ್ರಗಳನ್ನು ತನ್ನತ್ತ ಸೆಳೆಯುವುದು ಚೀನಾದ ತಂತ್ರವಾಗಿದೆ. ಈ ಹಿನ್ನೆಲೆಯಲ್ಲಿ ಮೋದಿ ಅವರ ಐದು ರಾಷ್ಟ್ರಗಳ ಪ್ರವಾಸವು ಭಾರತದ ಮಧ್ಯಸ್ಥ ಜಾಗತಿಕ ಶಕ್ತಿ (ಮಿಡ್ಲ್ ಪವರ್) ಸ್ಥಾನವನ್ನು ಬಲಪಡಿಸುವ ಪ್ರಯತ್ನದತ್ತ ಹೆಜ್ಜೆ ಹಾಕುತ್ತಿದೆ.

ಅಂದರೆ ಜಾಗತಿಕ ನಾಯಕರು ಚೀನಾ ಮತ್ತು ಅಮೆರಿಕದ ಧ್ರುವೀಕರಣದಲ್ಲಿ ಬ್ಯುಸಿಯಾಗಿದ್ದರೆ, ಭಾರತವು ಮಧ್ಯಪ್ರಾಚ್ಯ ಮತ್ತು ಯುರೋಪ್ ಜೊತೆಗಿನ ಸಂಬಂಧವನ್ನು ಗಟ್ಟಿಗೊಳಿಸುವ ಮೂಲಕ ಜಾಗತಿಕ ಶಕ್ತಿಯಾಗಿ ಸಮತೋಲನ ಕಾಯ್ದುಕೊಳ್ಳುತ್ತಿದೆ. ಟ್ರಂಪ್ ಅವರ ಚೀನಾ ಭೇಟಿಯು ಜಾಗತಿಕ ರಾಜತಾಂತ್ರಿಕತೆಯನ್ನು ಎಚ್ಚರಿಕೆಯಿಂದ ಗಮನಿಸುವಂತೆ ಭಾರತಕ್ಕೆ ಸಂದೇಶ ನೀಡಿದ್ದರೆ, ಮೋದಿಯವರ ಪ್ರವಾಸವು ಭಾರತದ ಆರ್ಥಿಕ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿದೆ.

ಒಟ್ಟಾರೆ ಭಾರತ ಈಗ ಕೇವಲ ಪ್ರಾದೇಶಿಕ ಶಕ್ತಿ ಅಲ್ಲ; ಜಾಗತಿಕ ಹೂಡಿಕೆ, ತಂತ್ರಜ್ಞಾನ ಹಾಗೂ ಇಂಧನ ವ್ಯವಸ್ಥೆಯ ಪ್ರಮುಖ ಭಾಗವಾಗುತ್ತಿದೆ ಎಂಬ ಸಂದೇಶ ರವಾನಿಸಲಾಗುತ್ತಿದೆ. ಟ್ರಂಪ್ ಯುಗದ ಅನಿಶ್ಚಿತ ಅಮೆರಿಕ ನೀತಿಯ ನಡುವೆ ಭಾರತ "Multi-Alignment" ತಂತ್ರ ಅನುಸರಿಸುತ್ತಿದೆ. ಚೀನಾದ ಆರ್ಥಿಕ ಪ್ರಭಾವಕ್ಕೆ ಪರ್ಯಾಯವಾಗಿ ಭಾರತ ತನ್ನನ್ನು ಉತ್ಪಾದನೆ, ತಂತ್ರಜ್ಞಾನ ಮತ್ತು ಸರಬರಾಜು ಸರಪಳಿ ಕೇಂದ್ರವಾಗಿ ರೂಪಿಸಿಕೊಳ್ಳಲು ಹೆಜ್ಜೆಹಾಕುತ್ತಿದೆ ಎಂದು ಮೋದಿಯವರ ಈ ಪ್ರವಾಸದಿಂದ ವಿಶ್ಲೇಷಿಸಬಹುದಾಗಿದೆ.



# ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ನಿತಿನ್ ನಬಿನ್‌ರವರ ಕರ್ನಾಟಕ ಪ್ರವಾಸ



ಅಜಿತ್ ಶೆಟ್ಟಿ ಹೆರಂಜೆ
ರಾಜ್ಯ ಸಹ-ಸಂಚಾಲಕರು
ಪ್ರಕಾಶನ ಪ್ರಕೋಷ್ಠ, ಬಿಜೆಪಿ ಕರ್ನಾಟಕ

**ಬಿ**ಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀನಿತಿನ್ ನಬಿನ್ ಅವರು ತಮ್ಮ ಅಧಿಕೃತ ಪ್ರವಾಸಕ್ಕಾಗಿ 23 ಮೇ 2026 ರಂದು ಬೆಂಗಳೂರು ವಿಮಾನ ನಿಲ್ದಾಣಕ್ಕೆ ತಲುಪಿದಾಗ ಅವರಿಗೆ ಅತ್ಯಂತ ಆತ್ಮೀಯ ಹಾಗೂ ಭವ್ಯವಾದ ಸ್ವಾಗತವನ್ನು ಕೋರಲಾಯಿತು. ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀಬಿ.ವೈ. ವಿಜಯೇಂದ್ರರವರು ರಾಷ್ಟ್ರೀಯ ಅಧ್ಯಕ್ಷರನ್ನು ಮಾಲಾರ್ಪಣೆ ಮಾಡಿ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ರಾಜ್ಯದ ಪ್ರಮುಖ ನಾಯಕರಾದ ವಿಧಾನಸಭೆಯ ಪ್ರತಿಪಕ್ಷ ನಾಯಕ ಶ್ರೀಆರ್. ಅಶೋಕ್, ವಿಧಾನ ಪರಿಷತ್ ವಿಪಕ್ಷ ನಾಯಕ ಶ್ರೀಛಲವಾದಿ ನಾರಾಯಣಸ್ವಾಮಿ, ರಾಜ್ಯ ಸಹ ಉಸ್ತುವಾರಿ ಶ್ರೀಸುಧಾಕರ್ ರೆಡ್ಡಿ, ವಿಧಾನಸಭಾ ವಿಪಕ್ಷ ಮುಖ್ಯ ಸಚೇತಕ ಶ್ರೀದೊಡ್ಡನಗೌಡ ಹೆಚ್. ಪಾಟೀಲ್, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಶ್ರೀಎನ್. ರವಿಕುಮಾರ್ ಮತ್ತು ರಾಜ್ಯ ಕಾರ್ಯದರ್ಶಿ ಶ್ರೀಶರಣು ತಳ್ಳಿಕೇರಿ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

24 ಮೇ 2026 ರ ಬೆಳಗ್ಗೆ ಶ್ರೀ ನಿತಿನ್ ನಬಿನ್ ಅವರು ಧವಳಗಿರಿ ನಿವಾಸಕ್ಕೆ ಭೇಟಿ ನೀಡಿ, ಬಿಜೆಪಿ ಕೇಂದ್ರ ಚುನಾವಣಾ ಸಮಿತಿ ಸದಸ್ಯ ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿಯಾದರು. ಈ ಸಂದರ್ಭದಲ್ಲಿ ನಡೆದ ಸಭೆಯಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ



ಯಡಿಯೂರಪ್ಪ ಅವರು ಉಪಸ್ಥಿತರಿದ್ದು ಹಿರಿಯ ಮುಖಂಡರೊಂದಿಗೆ ಜೊತೆಯಾದರು.

ನಂತರ 10:45 ಕ್ಕೆ ರಾಷ್ಟ್ರೀಯ ಅಧ್ಯಕ್ಷರು ಮಲ್ಲೇಶ್ವರಂನಲ್ಲಿರುವ ಐತಿಹಾಸಿಕ ಶ್ರೀಕಾಡು ಮಲ್ಲೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅವರೊಂದಿಗೆ ರಾಜ್ಯಾಧ್ಯಕ್ಷರಾದ





ಶ್ರೀಬಿ.ವೈ. ವಿಜಯೇಂದ್ರ ಯಡಿಯೂರಪ್ಪ, ವಿಧಾನಸಭೆಯ ಪ್ರತಿಪಕ್ಷ ನಾಯಕ ಶ್ರೀಆರ್. ಅಶೋಕ್, ವಿಧಾನ ಪರಿಷತ್ ವಿಪಕ್ಷ ನಾಯಕ ಶ್ರೀಛಲವಾದಿ ನಾರಾಯಣಸ್ವಾಮಿ, ರಾಜ್ಯ ಸಹ ಉಸ್ತುವಾರಿ ಶ್ರೀ ಸುಧಾಕರ್ ರೆಡ್ಡಿ, ವಿಧಾನಸಭಾ ವಿಪಕ್ಷ ಮುಖ್ಯ ಸಚೇತಕ ಶ್ರೀದೊಡ್ಡನಗೌಡ ಹೆಚ್. ಪಾಟೀಲ್, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಶ್ರೀಎನ್. ರವಿಕುಮಾರ್ ಮತ್ತು ರಾಜ್ಯ ಕಾರ್ಯದರ್ಶಿ ಶ್ರೀಶರಣು ತಳ್ಳಿಕೇರಿ ಸೇರಿದಂತೆ ಪ್ರಮುಖ ನಾಯಕರು ಜೊತೆಯಾಗಿದ್ದರು. ಅಲ್ಲಿ ಅವರು ದೇವಸ್ಥಾನದ ಅರ್ಚಕರ ಸಮ್ಮುಖದಲ್ಲಿ ವಿಶೇಷ ಪೂಜೆ ಮತ್ತು ದರ್ಶನ ಪಡೆದರು.

ಶ್ರೀನಿತಿನ್ ನಬಿನ್ ಅವರು ಮಲ್ಲೇಶ್ವರದ  ಬಿಜೆಪಿ ರಾಜ್ಯ ಕಾರ್ಯಾಲಯವಾದ ಜಗನ್ನಾಥ ಭವನಕ್ಕೆ ಆಗಮಿಸಿದಾಗ ಅವರಿಗೆ ರಾಜ್ಯಾಧ್ಯಕ್ಷರಾದ ಶ್ರೀಬಿ.ವೈ. ವಿಜಯೇಂದ್ರ, ಪಕ್ಷದ ಪದಾಧಿಕಾರಿಗಳು ಹಾಗೂ ನಾಯಕರುಗಳು ಪೂರ್ಣಕುಂಭ ಹಾಗೂ ಘೋಷಣೆಗಳೊಂದಿಗೆ ಅವರನ್ನು ಗೌರವ ಆದರದಿಂದ ಬರಮಾಡಿಕೊಂಡರು.

ಜಗನ್ನಾಥ ಭವನದಲ್ಲಿ ಅತ್ಯಂತ ಮಹತ್ವದ ಸಂಘಟನಾತ್ಮಕ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಸಂಘಟನಾತ್ಮಕ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ರಾಷ್ಟ್ರೀಯ ಅಧ್ಯಕ್ಷರೊಂದಿಗೆ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ಸೇರಿದಂತೆ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಪಕ್ಷದ ಪದಾಧಿಕಾರಿಗಳು ಭಾಗವಹಿಸಿದ್ದರು.

## ಕೋರ್ ಕಮಿಟಿ ಸಭೆ



ಮಧ್ಯಾಹ್ನ ಜಗನ್ನಾಥ ಭವನದಲ್ಲಿ ರಾಜ್ಯದ ಕೋರ್ ಕಮಿಟಿ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ರಾಷ್ಟ್ರೀಯ ಅಧ್ಯಕ್ಷರ ಸಮ್ಮುಖದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀಬಿ.ವೈ. ವಿಜಯೇಂದ್ರ ಯಡಿಯೂರಪ್ಪ ಮತ್ತು ಕೋರ್ ಕಮಿಟಿ ಸದಸ್ಯರು ಭಾಗವಹಿಸಿದ್ದರು.

## ಬೆಂಗಳೂರು ಉತ್ತರ ಜಿಲ್ಲಾ ಪ್ರಶಿಕ್ಷಣ ವರ್ಗದ ಸಮಾರೋಪ




ಸಾಯಂಕಾಲ ಶ್ರೀ ನಿತಿನ್ ನಬಿನ್ ಅವರು ಯಲಹಂಕದ ಸಿಂಗನಾಯಕನಹಳ್ಳಿಯಲ್ಲಿರುವ 'ರಮಡಾ ರೆಸಾರ್ಟ್'ನಲ್ಲಿ ಹಮ್ಮಿಕೊಳ್ಳಲಾಗಿದ್ದ ಬೆಂಗಳೂರು ಉತ್ತರ ಜಿಲ್ಲಾ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

ನಂತರ SIR ರಾಜ್ಯ ತಂಡದ ಸದಸ್ಯರೊಂದಿಗೆ ವಿಶೇಷ ಸಂವಾದ ಮತ್ತು ಚರ್ಚೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ರಾಷ್ಟ್ರೀಯ ಅಧ್ಯಕ್ಷರೊಂದಿಗೆ ರಾಜ್ಯಾಧ್ಯಕ್ಷರಾದ ಶ್ರೀಬಿ.ವೈ. ವಿಜಯೇಂದ್ರ ಮತ್ತಿತರ ನಾಯಕರುಗಳು ಭಾಗವಹಿಸಿದ್ದರು.

# ಬಿಜೆಪಿ ಯುವ ಮೋರ್ಚಾ ವತಿಯಿಂದ 'Young Minds' ವಿಶೇಷ ಸಂವಾದ






'ವಿಕಸಿತ ಭಾರತ'ದ ನಿರ್ಮಾಣದ ಹೊಣೆ ನಮ್ಮ ಯುವಶಕ್ತಿಯ ಹೆಗಲಮೇಲಿದೆ. ಈ ನಿಟ್ಟಿನಲ್ಲಿ 25 ಮೇ 2026ರಂದು ಬೆಂಗಳೂರಿನ ಹೆಬ್ಬಾಳದಲ್ಲಿರುವ ಹೈಯತ್ ಸೆಂಟ್ರಿಕ್ ಹೋಟೆಲಿನಲ್ಲಿ ಬಿಜೆಪಿ ಯುವ ಮೋರ್ಚಾ ವತಿಯಿಂದ  ನಮ್ಮ ಪ್ರಬುದ್ಧ ಯುವ ಜನತೆಯೊಂದಿಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಆದರಣೀಯ ಶ್ರೀ ನಿತಿನ್ ನಬಿನ್ ಜೀ ರವರ ಸಂವಾದ ಕಾರ್ಯಕ್ರಮ ನಡೆಸಲಾಯಿತು.

ಈ ವಿಶೇಷ ಸಂವಾದದಲ್ಲಿ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ನವೋದ್ಯಮ, ನಾಯಕತ್ವ, ಸುಶಾಸನ ಹಾಗೂ ವಿಕಸಿತ ಭಾರತದ ನಿರ್ಮಾಣದಲ್ಲಿ ಯುವಕರ ಪಾತ್ರ ಸೇರಿದಂತೆ ಹಲವು ಮಹತ್ವದ ವಿಷಯಗಳ ಕುರಿತು ಸುದೀರ್ಘ ಮತ್ತು ಮುಕ್ತ ಚರ್ಚೆ ನಡೆಸಿದರು. ಯುವಕರ ಆಲೋಚನೆಗಳು, ಕನಸುಗಳು ಮತ್ತು ಆಶಯಗಳನ್ನು ಆಲಿಸುವ ಮೂಲಕ ಅವರೊಂದಿಗೆ ನೇರವಾಗಿ ಸಂವಾದ ನಡೆಸಿದ ಅವರು, ಇಂದಿನ ಯುವಪೀಳಿಗೆಯೇ ದೇಶದ ಭವಿಷ್ಯವನ್ನು ರೂಪಿಸುವ ಪ್ರಮುಖ ಶಕ್ತಿಯಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಭಾರತೀಯ ಜನತಾ ಯುವ ಮೋರ್ಚಾ ()ಯಲ್ಲಿ ತಮ್ಮ ಸುದೀರ್ಘ ಸೇವಾ ಪಯಣ, ಸಂಘಟನಾ ಅನುಭವ, ಕಾರ್ಯಕರ್ತನಿಂದ ರಾಷ್ಟ್ರೀಯ ಮಟ್ಟದ ನಾಯಕತ್ವದವರೆಗೆ ಸಾಗಿದ ತಮ್ಮ ಜೀವನಾನುಭವಗಳನ್ನು ಹಂಚಿಕೊಂಡು ಯುವಕರಿಗೆ ಪ್ರೇರಣೆಯ ಸಂದೇಶ ನೀಡಿದರು. ರಾಜಕೀಯ, ಸಾಮಾಜಿಕ ಸೇವೆ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಯುವಕರು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂಬ ಸಂದೇಶವನ್ನು ಅವರು ನೀಡಿದ್ದು, ಯುವಜನತೆಯ ಪ್ರಶ್ನೆಗಳಿಗೆ ಮುಕ್ತವಾಗಿ ಉತ್ತರಿಸುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಮತ್ತು ಜವಾಬ್ದಾರಿಯ ಮನೋಭಾವವನ್ನು ಬೆಳೆಸುವ ಪ್ರಯತ್ನ ಮಾಡಿದರು. ಬೆಂಗಳೂರಿನ ಯುವಜನತೆಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು, ಹೊಸ ದೃಷ್ಟಿಕೋನಗಳನ್ನು ಅರಿಯಲು ಹಾಗೂ ನಾಯಕತ್ವದ ಮೌಲ್ಯಗಳನ್ನು ತಿಳಿದುಕೊಳ್ಳಲು ಈ ಸಂವಾದವು ಅತ್ಯುತ್ತಮ ವೇದಿಕೆಯಾಗಿದ್ದು, ಯುವಶಕ್ತಿಯನ್ನು ರಾಷ್ಟ್ರದ ಅಭಿವೃದ್ಧಿಯ ದಿಕ್ಕಿನಲ್ಲಿ ಮತ್ತಷ್ಟು ಪ್ರೇರೇಪಿಸಿದ ಅರ್ಥಪೂರ್ಣ ಕಾರ್ಯಕ್ರಮವಾಗಿ ಮೂಡಿಬಂತು.ಯುವ ಚಿಂತಕರು ಹಾಗೂ ಐಟಿ ಉದ್ಯೋಗಿಗಳ 'Young Minds' ಸಂವಾದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ನಿತಿನ್ ನಬಿನ್ ರವರು ಭಾಗವಹಿಸಿದರು.

ಈ ವಿಶೇಷ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಅಧ್ಯಕ್ಷರೊಂದಿಗೆ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಯಡಿಯೂರಪ್ಪ, ಸಂಸದ ಶ್ರೀ ತೇಜಸ್ವಿ ಸೂರ್ಯ, ಪ್ರತಿಪಕ್ಷ ನಾಯಕ ಶ್ರೀ ಆರ್. ಅಶೋಕ್, ವಿಧಾನ ಪರಿಷತ್ ವಿಪಕ್ಷ ನಾಯಕ ಶ್ರೀ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಸಹ ಉಸ್ತುವಾರಿ ಶ್ರೀ ಸುಧಾಕರ್ ರೆಡ್ಡಿ, ಮತ್ತು ಬಿಜೆಪಿ ಯುವ ಮೋರ್ಚಾದ ರಾಜ್ಯ ಪ್ರಮುಖರು ಹಾಗೂ ನೂರಾರು ಯುವ ತಜ್ಞರು ಉಪಸ್ಥಿತರಿದ್ದರು.






**ಡಾ. ಬಿ.ಸಿ. ನವೀನ್ ಕುಮಾರ್**
ರಾಜ್ಯ ಪ್ರಧಾನ ಕಾರ್ಯದರ್ಶಿ
ರೈತ ಮೋರ್ಚಾ, ಬಿಜೆಪಿ - ಕರ್ನಾಟಕ

**ಭಾ**ರತ ದೇಶದ ಮೂಲ ಸಂಸ್ಕೃತಿ ಕೃಷಿ ಸಂಸ್ಕೃತಿಯನ್ನು ಉಳಿಸಲು ಮತ್ತು ಬೆಳೆಸಲು ಶ್ರೀ ನರೇಂದ್ರ ಮೋದಿ ಅವರ ಸರ್ಕಾರ ಮಣ್ಣು, ನೀರು, ದೇಶೀಯ ಕೃಷಿ ಸಂಸ್ಕೃತಿ, ಮಾರುಕಟ್ಟೆ, ಸಂಸ್ಕರಣೆ, ದಾಸ್ತಾನು, ರಫ್ತು, ಮೌಲ್ಯವರ್ಧನೆ, ಹೀಗೆ ಹಲವು ಹತ್ತು ವಿಚಾರವನ್ನು ದೇಶದ ಸಣ್ಣ ರೈತರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಕೆಲಸ ಮಾಡಿದೆ ಅವರ ಆರೋಗ್ಯ, ಸಾಮಾಜಿಕ ಭದ್ರತೆ, ಸಬಲೀಕರಣ, ರೈತರು ಹೊಂದಿರುವ ತುಂಡು ಭೂಮಿಗಳ ಸಂರಕ್ಷಣೆ ಮತ್ತು ಯುವ ರೈತರಿಗೆ ಪ್ರೋತ್ಸಾಹ, ತಂತ್ರಜ್ಞಾನ, ಹೊಸತನ ಮತ್ತು ಸಂಶೋಧನೆ ಈ ವಿಚಾರಗಳಿಗೆ ಗಮನ ಕೊಡುವುದರೊಂದಿಗೆ ಮುಂದಿನ ಜನಾಂಗಕೆ ನೈಸರ್ಗಿಕ ಸಂಪನ್ಮೂಲವನ್ನು ಸಂರಕ್ಷಣೆ ಮಾಡುವ ಕಾರ್ಯಕ್ರಮಗಳನ್ನು ನೀಡಿದೆ.

ರೈತರಲ್ಲಿ ವೃತ್ತಿಪರತೆ, ಸಹಕಾರ ವಿಚಾರಗಳು, ಕಾರ್ಪೊರೇಟ್ ವಿಚಾರಧಾರೆಯಲ್ಲಿ ರೈತರು ಆಲೋಚಿಸುವಂತೆ ಮಾಡಿದೆ, ಮಾರುಕಟ್ಟೆಯಲ್ಲಿ ಇರುವ ಮಧ್ಯವರ್ತಿಗಳಿಂದ ಆಗುವ ಶೋಷಣೆ ತಪ್ಪಿಸುವ ಕ್ರಮಗಳು, ಕೃಷಿಯಲ್ಲಿ ಜೇನು ನೊಣಗಳ ಸದ್ಬಳಕೆ ಮಾಡುವ ಕಾರ್ಯಕ್ರಮಗಳು, ಜನರ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಸಿರಿ ಧಾನ್ಯಗಳ ಬೆಳವಣಿಗೆ ಮತ್ತು ಬಳಕೆಗೆ ಉತ್ತೇಜನ, ಬಂಜರು ಭೂಮಿಯಲ್ಲಿ ಸೋಲಾರ್ ಉತ್ಪಾದನೆ, ರೈತರನ್ನು ಸಾಲ ನೀಡುವವರ ಶೋಷಣೆಯಿಂದ ತಪ್ಪಿಸಲು ಬಡ್ಡಿ ಸಹಾಯ ಧನ ಯೋಜನೆ, ಮಾರುಕಟ್ಟೆ ಅನಿಶ್ಚಿತತೆಯನ್ನು ನಿರ್ವಹಣೆ ಮಾಡುವ ಯೋಜನೆಗಳು, ಹನಿ ನೀರಾವರಿ ಯೋಜನೆ, ಕೃಷಿ ಉಪವಲಯಗಳಿಗೆ ಪ್ರೋತ್ಸಾಹ, ಕೃಷಿಯಲ್ಲಿ ಡಿಜಿಟಲ್ ಕ್ರಾಂತಿ, ಕೃಷಿ ಅರಣ್ಯದ ಮುಖಾಂತರ ರೈತರ ಆರ್ಥಿಕ ಸಬಲೀಕರಣ ಮತ್ತು ಪರಿಸರ ಸಂರಕ್ಷಣೆಯಂತಹ ಪರಿಣಾಮಕಾರಿ ಕ್ರಮಗಳನ್ನು ಕೇಂದ್ರ ಸರಕಾರ ಅನುಷ್ಠಾನಗೊಳಿಸಿದೆ. ರೈತರ ಆದಾಯವನ್ನು ಹೆಚ್ಚಿಸಲು, ಉತ್ಪಾದಕತೆಯನ್ನು ಸುಧಾರಿಸಲು ಮತ್ತು ಕೃಷಿ ಮೂಲಸೌಕರ್ಯಗಳನ್ನು ಬಲಪಡಿಸಲು ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಯ ಬಜೆಟ್ ಅನ್ನು 2013–14ರಲ್ಲಿ 21,933.50 ಕೋಟಿ ಇದ್ದದ್ದನ್ನು 2025–26ರ ವೇಳೆಗ 1,27,290.16 ಕೋಟಿಗೆ ಗಣನೀಯವಾಗಿ ಹೆಚ್ಚಿಸಿದೆ.

### ಪ್ರಮುಖ ಯೋಜನೆಗಳ ವಿವರಗಳು

- **ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (PM-KISAN)** : ಸಾಗುವಳಿ ಭೂಮಿ ಹೊಂದಿರುವ ರೈತರಿಗೆ ವಾರ್ಷಿಕ 6,000 ರೂ ಆದಾಯ ಬೆಂಬಲ ನೀಡುವ ಯೋಜನೆ. ಈ ಮೊತ್ತವನ್ನು ತಲಾ 2,000 ರಂತೆ 3 ಸಮಾನ ಕಂತುಗಳಲ್ಲಿ ನೇರವಾಗಿ ರೈತರ ಖಾತೆಗೆ ಜಮಾವಣೆ ಮಾಡಲಾಗುತ್ತದೆ.

- **ಪ್ರಧಾನ ಮಂತ್ರಿ ಕಿಸಾನ್ ಮಾನ್ ಧನ್ ಯೋಜನೆ (PM-KMY):** ಇದು 18 ರಿಂದ 40 ವರ್ಷ ವಯಸ್ಸಿನ ಕೃಷಿಕರಿಗಾಗಿ ಇರುವ ಸ್ವಯಂಪ್ರೇರಿತ ಮತ್ತು ವಂತಿಗೆ ಆಧಾರಿತ ಪಿಂಚಣಿ ಯೋಜನೆಯಾಗಿದೆ. ಈ ಯೋಜನೆಯಡಿ ರೈತರಿಗೆ 60 ವರ್ಷ ತುಂಬಿದ ನಂತರ ತಿಂಗಳಿಗೆ 3,000 ರೂ ಪಿಂಚಣಿ ನೀಡಲಾಗುತ್ತದೆ.
- **ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (PMFBY):** ಕಡಿಮೆ ಪ್ರೀಮಿಯಂ ದರದಲ್ಲಿ ರೈತರ ಬೆಳೆಗಳಿಗೆ ನೈಸರ್ಗಿಕ ವಿಕೋಪಗಳಿಂದಾಗುವ ನಷ್ಟಕ್ಕೆ ಸಮಗ್ರ ವಿಮಾ ರಕ್ಷಣೆ ಒದಗಿಸಲು ಈ ಯೋಜನೆ ತರಲಾಗಿದೆ. ಪ್ರತಿ ವರ್ಷ ದೇಶಾದ್ಯಂತ 4 ಕೋಟಿಗೂ ಹೆಚ್ಚು ರೈತರು ಇದರಡಿ ವಿಮೆ ಪಡೆಯುತ್ತಿದ್ದಾರೆ.
- **ಮಾರ್ಪಡಿಸಿದ ಬಡ್ಡಿ ಸಹಾಯಧನ ಯೋಜನೆ (MISS):** ಬೆಳೆ ಕೃಷಿ ಮತ್ತು ಪಶುಸಂಗೋಪನೆ, ಹೈನುಗಾರಿಕೆ, ಮೀನುಗಾರಿಕೆಯಂತಹ ಚಟುವಟಿಕೆಗಳಲ್ಲಿ ತೊಡಗಿರುವ ರೈತರಿಗೆ ವಾರ್ಷಿಕ 7% ಬಡ್ಡಿ ದರದಲ್ಲಿ 3.00 ಲಕ್ಷ ರೂವರೆಗೆ ಅಲ್ಪಾವಧಿ ಕೃಷಿ ಸಾಲವನ್ನು ಒದಗಿಸುವ ಯೋಜನೆ ಇದಾಗಿದೆ.
- **ಕೃಷಿ ಮೂಲಸೌಕರ್ಯ ನಿಧಿ (Agriculture Infrastructure Fund - AIF):** ಸುಗ್ಗಿಯ ನಂತರದ ನಿರ್ವಹಣೆ, ಗೋದಾಮುಗಳು, ಕೋಲ್ಡ್ ಸ್ಟೋರೇಜ್ ಮತ್ತು ಸಮುದಾಯ ಕೃಷಿ ಆಸ್ತಿಗಳ ನಿರ್ಮಾಣಕ್ಕಾಗಿ ಸಾಲ ಸೌಲಭ್ಯ ಒದಗಿಸುವ 1 ಲಕ್ಷ ಕೋಟಿ ರೂ ವೆಚ್ಚದ ಬೃಹತ್ ಯೋಜನೆ. ಇದರಡಿ 2 ಕೋಟಿಯವರೆಗಿನ ಸಾಲಕ್ಕೆ ವಾರ್ಷಿಕ 3% ಬಡ್ಡಿ ಸಹಾಯಧನ(ಗರಿಷ್ಠ 7 ವರ್ಷಗಳವರೆಗೆ) ಸಿಗುತ್ತದೆ.
- **10,000 ಹೊಸ ರೈತ ಉತ್ಪಾದಕ ಸಂಸ್ಥೆಗಳ (FPOs) ರಚನೆ :** ರೈತರು ತಮ್ಮ ಉತ್ಪನ್ನಗಳನ್ನು ಒಟ್ಟುಗೂಡಿಸಿ ಉತ್ತಮ ಮಾರುಕಟ್ಟೆ ಬೆಲೆ ಪಡೆಯಲು, ಉತ್ಪಾದನಾ ವೆಚ್ಚ ತಗ್ಗಿಸಲು ಮತ್ತು ಚೌಕಾಶಿ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು 10,000 ಹೊಸ ಎಫ್‌ಪಿಒಗಳನ್ನು ರಚಿಸುವ ಕೇಂದ್ರ ವಲಯದ ಯೋಜನೆ.
- **ರಾಷ್ಟ್ರೀಯ ಜೇನುಸಾಕಣೆ ಮತ್ತು ಜೇನು ಮಿಷನ್ (NBHM) :** ದೇಶದಲ್ಲಿ ವೈಜ್ಞಾನಿಕ ಜೇನುಸಾಕಣೆಯನ್ನು ಉತ್ತೇಜಿಸಲು ಮತ್ತು ಸಿಹಿ ಕ್ರಾಂತಿ **(Sweet Revolution)** ಯ ಗುರಿಯನ್ನು ಸಾಧಿಸಲು ಆತ್ಮನಿರ್ಭರ ಭಾರತ ಅಭಿಯಾನದ ಭಾಗವಾಗಿ ಇದನ್ನು ಜಾರಿಗೊಳಿಸಲಾಗಿದೆ.
- **ನಮೋ ಡ್ರೋನ್ (NAMO Drone Didi):** ಆಯ್ದ 15,000 ಮಹಿಳಾ ಸ್ವಸಹಾಯ ಗುಂಪುಗಳಿಗೆ (SHGs) ಡ್ರೋನ್ ತಂತ್ರಜ್ಞಾನವನ್ನು ಒದಗಿಸಿ, ರೈತರಿಗೆ ದ್ರವ ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಸಿಂಪಡಿಸುವ ಬಾಡಿಗೆ ಸೇವೆ ನೀಡಲು ತರಬೇತಿ ಕೊಡುವ ಯೋಜನೆ.
- **ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್ (NMNF) :** ದೇಶದಲ್ಲಿ ರಾಸಾಯನಿಕ ಮುಕ್ತ ನೈಸರ್ಗಿಕ ಕೃಷಿಯನ್ನು ಉತ್ತೇಜಿಸಲು 7.5 ಲಕ್ಷ ಹೆಕ್ಟೇರ್ ಪ್ರದೇಶವನ್ನು ಒಳಗೊಂಡ 15,000 ಕ್ಲಸ್ಟರ್‌ಗಳನ್ನು ಅಭಿವೃದ್ಧಿಪಡಿಸುವುದು ಮತ್ತು 10,000 ಬಯೋ-ಇನ್‌ಪುಟ್ ಸಂಪನ್ಮೂಲ ಕೇಂದ್ರಗಳನ್ನು (ಬಿಆರ್‌ಸಿ) ಸ್ಥಾಪಿಸುವ ಗುರಿ ಹೊಂದಿದೆ.
- **ಪ್ರಧಾನ ಮಂತ್ರಿ ಅನ್ನದಾತ ಆಯ್ ಸಂರಕ್ಷಣ ಅಭಿಯಾನ (PM-AASHA) :** ಎಂಎಸ್‌ಪಿ(ಬೆಂಬಲ) ವ್ಯವಸ್ಥೆಯನ್ನು ಬಲಪಡಿಸುವ ಮೂಲಕ ರೈತರಿಗೆ ಲಾಭದಾಯಕ ಬೆಲೆ ಸಿಗುವಂತೆ ಮಾಡುವುದು. ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು ಮತ್ತು ಕೊಬ್ಬರಿ ಬೆಳೆಗಾರರಿಗೆ ಬೆಂಬಲ ಬೆಲೆ ನೀಡಿ ಮಾರುಕಟ್ಟೆ ನಷ್ಟದಿಂದ ರಕ್ಷಿಸುವುದು ಇದರ ಮುಖ್ಯ ಉದ್ದೇಶ.
- **ಅಗ್ರಿಶೂರ್ ನಿಧಿ (AgriSURE):** ಕೃಷಿ ಮತ್ತು ಗ್ರಾಮೀಣ ಉದ್ಯಮಶೀಲತೆಯಲ್ಲಿ ನಾವೀನ್ಯತೆಯನ್ನು ಉತ್ತೇಜಿಸಲು ಸ್ಥಾಪಿಸಲಾದ 750 ಕೋಟಿ ರೂ ವೆಚ್ಚದ ಮಿಶ್ರ ಬಂಡವಾಳ ನಿಧಿ. ಇದು ಕೃಷಿ ಆಧಾರಿತ ನವೋದ್ಯಮಗಳಿಗೆ (ಸ್ಟಾರ್ಟ್‌ಅಪ್) ಈಕ್ವಿಟಿ ಮತ್ತು ಸಾಲದ ಹಣಕಾಸು ಒದಗಿಸುತ್ತದೆ.
- **ಪ್ರತಿ ಹನಿಗೆ ಹೆಚ್ಚು ಬೆಳೆ (Per Drop More Crop & PDMC) :** ಹನಿ ನೀರಾವರಿ ಮತ್ತು ಸಿಂಪಡಣೆ (ಸ್ಪ್ರಿಂಕ್ಲರ್) ನೀರಾವರಿ ತಂತ್ರಜ್ಞಾನಗಳ ಮೂಲಕ ಕೃಷಿ ಭೂಮಿಯಲ್ಲಿ ನೀರಿನ ಬಳಕೆಯ ದಕ್ಷತೆಯನ್ನು ಹೆಚ್ಚಿಸುವ ಯೋಜನೆ.
- **ಕೃಷಿ ಯಾಂತ್ರೀಕರಣ ಉಪ-ಅಭಿಯಾನ (SMAM) :** ಕೃಷಿ ಚಟುವಟಿಕೆಗಳನ್ನು ಆಧುನೀಕರಿಸಲು ಮತ್ತು ಕೃಷಿ ಕಾರ್ಮಿಕರ ಮೇಲಿನ ಅವಲಂಬನೆ ಹಾಗೂ ದೈಹಿಕ ಶ್ರಮವನ್ನು ಕಡಿಮೆ ಮಾಡಲು ಕೃಷಿ ಯಂತ್ರೋಪಕರಣಗಳಿಗೆ ಪ್ರೋತ್ಸಾಹ ಕೊಡುವ ಯೋಜನೆ.
- **ಪರಂಪರಾಗತ್ ಕೃಷಿ ವಿಕಾಸ್ ಯೋಜನೆ (PKVY) :** ದೇಶದಲ್ಲಿ ಸಾವಯವ ಕೃಷಿಯನ್ನು (Organic Farming) ಕ್ಲಸ್ಟರ್ ಆಧಾರಿತವಾಗಿ ವ್ಯವಸ್ಥಿತವಾಗಿ ಉತ್ತೇಜಿಸಲು ಜಾರಿಗೆ ತರಲಾದ ಮೊದಲ ಸಮಗ್ರ ಯೋಜನೆ.
- **ಮಣ್ಣಿನ ಆರೋಗ್ಯ ಮತ್ತು ಫಲವತ್ತತೆ (SHF) :** ಮಣ್ಣಿನ ಆರೋಗ್ಯ ಕಾರ್ಡ್ (Soil Health Card) ಮೂಲಕ ಸಮತೋಲಿತ ಗೊಬ್ಬರ ಬಳಕೆಯನ್ನು ಉತ್ತೇಜಿಸುವುದು. ಇದರ ಭಾಗವಾಗಿ ಶಾಲೆಗಳಲ್ಲಿ 1,020 ಮಿನಿ ಮಣ್ಣು ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ (ಇದನ್ನು 5,000 ಪಿಎಂ ಶ್ರೀ ಶಾಲೆಗಳಿಗೆ ವಿಸ್ತರಿಸಲಾಗುತ್ತಿದೆ).

- **ಮಳೆ ಆಶ್ರಿತ ಪ್ರದೇಶ ಅಭಿವೃದ್ಧಿ (RAD) :** ಸುಸ್ಥಿರ ಕೃಷಿಗಾಗಿ ರಾಷ್ಟ್ರೀಯ ಮಿಷನ್ (NMSA) ಅಡಿಯಲ್ಲಿ ಜಾರಿಯಾಗುತ್ತಿದ್ದು, ಹವಾಮಾನ ವೈಪರೀತ್ಯದ ಅಪಾಯಗಳನ್ನು ಎದುರಿಸಲು ಸಮಗ್ರ ಕೃಷಿ ಪದ್ಧತಿ (Integrated Farming System - IFS) ಯ ಮೇಲೆ ಇದು ಗಮನಹರಿಸುತ್ತದೆ.
- **ಕೃಷಿ ಅರಣ್ಯ ಯೋಜನೆ (Agroforestry) :** ಹರ್ ಮೇಢ್ ಪರ್ ಪೇಡ್ (ಪ್ರತಿ ಬದುವಿನ ಮೇಲೂ ಮರ) ಎಂಬ ಘೋಷವಾಕ್ಯದೊಂದಿಗೆ ರೈತರು ತಮ್ಮ ಕೃಷಿ ಭೂಮಿಯ ಬದುಗಳ ಮೇಲೆ ಮರಗಳನ್ನು ಬೆಳೆಸಿ ಹೆಚ್ಚುವರಿ ಆದಾಯ ಪಡೆಯುವಂತೆ ಉತ್ತೇಜಿಸುವ ಉಪ-ಅಭಿಯಾನವು ರೈತರ ನಿವೃತ್ತಿ ಜೀವನದಲ್ಲಿ ಆರ್ಥಿಕ ಬೆಂಬಲವನ್ನು ನೀಡುತ್ತವೆ.
- **ಬೆಳೆ ವೈವಿಧ್ಯೀಕರಣ ಕಾರ್ಯಕ್ರಮ (CDP) :** ಹೆಚ್ಚು ನೀರು ಬೇಡುವ ಭತ್ತದಂತಹ ಬೆಳೆಗಳಿಂದ ರೈತರನ್ನು ಹೆಚ್ಚು ಲಾಭದಾಯಕ ಮತ್ತು ಸುಸ್ಥಿರ ಪರ್ಯಾಯ ಬೆಳೆಗಳಾದ ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು ಮತ್ತು ಒರಟು ಧಾನ್ಯಗಳನ್ನು ಬೆಳೆಯಲು (Coarse Cereals) ಯೋಜನೆ ರೂಪಿಸಲಾಗಿದೆ.
- **ಕೃಷಿ ವಿಸ್ತರಣೆ ಉಪ-ಅಭಿಯಾನ (SMAE) :** ಹೊಸ ತಂತ್ರಜ್ಞಾನಗಳನ್ನು ರೈತರಿಗೆ ತಲುಪಿಸಲು ಜಿಲ್ಲಾ ಮಟ್ಟದಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ (ಆತ್ಮ) ಮೂಲಕ ಕೃಷಿ ವಿಸ್ತರಣಾ ಸುಧಾರಣೆಗಳನ್ನು ಜಾರಿಗೆ ತರುವುದರೊಂದಿಗೆ ಕೃಷಿ ಕ್ಷೇತ್ರದಲ್ಲಿ ಇರುವ ಕಾರ್ಮಿಕರ ಲಭ್ಯತೆ ಸಮಸ್ಯೆಗೆ ಪರಿಹಾರ ನೀಡುತ್ತದೆ
- **ಬೀಜ ಮತ್ತು ನಾಟಿ ಸಾಮಗ್ರಿ ಉಪ-ಅಭಿಯಾನ (SMSP) :** ರೈತರಿಗೆ ಉತ್ತಮ ಗುಣಮಟ್ಟದ ಮತ್ತು ಪ್ರಮಾಣೀಕೃತ ಬೀಜಗಳ ಪೂರೈಕೆಯನ್ನು ಖಚಿತಪಡಿಸುವುದು ಹಾಗೂ ನೈಸರ್ಗಿಕ ವಿಕೋಪಗಳ ಸಂದರ್ಭಕ್ಕಾಗಿ ಪ್ರತ್ಯೇಕ ರಾಷ್ಟ್ರೀಯ ಬೀಜ ಬ್ಯಾಂಕ್ ಅನ್ನು ಸ್ಥಾಪಿಸುವುದರಿಂದ ರೈತರಿಗೆ ಅನುಕೂಲವಾಗಿದೆ.
- **ರಾಷ್ಟ್ರೀಯ ಆಹಾರ ಭದ್ರತೆ ಮತ್ತು ಪೌಷ್ಟಿಕಾಂಶ ಮಿಷನ್ (NFSNM) :** ದೇಶದ ಆಯ್ದ ಜಿಲ್ಲೆಗಳಲ್ಲಿ ಭತ್ತ, ಗೋಧಿ, ದ್ವಿದಳ ಧಾನ್ಯಗಳು ಮತ್ತು ಪೌಷ್ಟಿಕ ಧಾನ್ಯಗಳ (Nutri-Cereals) ವಿಸ್ತೀರ್ಣ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಮುಖಾಂತರ ಕೃಷಿ ವೈವಿಧ್ಯತೆ ಮತ್ತು ಆಹಾರ ಭದ್ರತೆಗೆ ಸಹಾಯ ಮಾಡುವ ಯೋಜನೆಯಾಗಿದೆ.
- **ಕೃಷಿ ಮಾರುಕಟ್ಟೆ ಸಮಗ್ರ ಯೋಜನೆ (ISAM) :** ಮಾರುಕಟ್ಟೆ ಮೂಲಸೌಕರ್ಯಗಳ ಸೃಷ್ಟಿ, ಸಾಮರ್ಥ್ಯ ವೃದ್ಧಿ ಮತ್ತು ರೈತರಿಗೆ ಮಾರುಕಟ್ಟೆ ಬೆಲೆಯ ಮಾಹಿತಿ ಸುಲಭವಾಗಿ ಸಿಗುವಂತೆ ಮಾಡಲು ರಾಜ್ಯ ಸರ್ಕಾರಗಳಿಗೆ ಬೆಂಬಲ ನೀಡುವ ಯೋಜನೆ. ದೇಶದ ಕೆಲ ರಾಜ್ಯ ಸರ್ಕಾರಗಳು ಮಾರುಕಟ್ಟೆ ಅನಿಶ್ಚಿತೆ ಸಮಸ್ಯೆಗಳನ್ನು ಈ ಯೋಜನೆಯ ಮುಖಾಂತರ ಪರಿಹಾರ ಕಂಡುಕೊಂಡಿವೆ.
- **ತೋಟಗಾರಿಕೆ ಸಮಗ್ರ ಅಭಿವೃದ್ಧಿ ಅಭಿಯಾನ (MIDH) :** ಹಣ್ಣುಗಳು, ತರಕಾರಿಗಳು, ಗೆಡ್ಡೆ ಗೆಣಸುಗಳು, ಅಣಬೆ, ಸಾಂಬಾರ ಪದಾರ್ಥಗಳು, ಹೂವುಗಳು, ತೆಂಗು, ಗೋಡಂಬಿ ಮತ್ತು ಬಿದಿರು ಸೇರಿದಂತೆ ತೋಟಗಾರಿಕೆ ಕ್ಷೇತ್ರದ ಸಮಗ್ರ ಬೆಳವಣಿಗೆಗೆ ಉತ್ತೇಜನ ನೀಡುವ ಯೋಜನೆಯಾಗಿದೆ ಈ ಯೋಜನೆಯು ಕೃಷಿ ಕ್ಷೇತ್ರದ ಉಪವಲಯಗಳ ಪ್ರೋತ್ಸಾಹ ನೀಡುವ ಮುಖಾಂತರ ರೈತರ ಆರ್ಥಿಕ ಸಬಲೀಕರಣವಾಗಿದೆ.
- **ರಾಷ್ಟ್ರೀಯ ಖಾದ್ಯ ತೈಲಗಳ ಮಿಷನ್ - ಆಯಿಲ್ ಪಾಮ್ (NMEO-OP) :** ಖಾದ್ಯ ತೈಲಗಳಲ್ಲಿ ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡಲು ಆಯಿಲ್ ಪಾಮ್ (ತಾಳೆ ಎಣ್ಣೆ) ಕೃಷಿಯನ್ನು ಉತ್ತೇಜಿಸುವ ಯೋಜನೆ. ಇದಕ್ಕೆ ಈಶಾನ್ಯ ರಾಜ್ಯಗಳು ಮತ್ತು ಅಂಡಮಾನ್ ನಿಕೋಬಾರ್ ದ್ವೀಪಗಳ ಮೇಲೆ ವಿಶೇಷ ಗಮನ ಹರಿಸಲಾಗಿದೆ.
- **ರಾಷ್ಟ್ರೀಯ ಖಾದ್ಯ ತೈಲಗಳ ಮಿಷನ್ - ಎಣ್ಣೆಕಾಳುಗಳು (NMEO-Oilseeds) :** ಭಾರತದ ಖಾದ್ಯ ತೈಲ ಆಮದು ಅವಲಂಬನೆಯನ್ನು ಕಡಿಮೆ ಮಾಡಲು ದೇಶೀಯ ಎಣ್ಣೆಕಾಳುಗಳ (ಸಾಸಿವೆ, ಶೇಂಗಾ ಇತ್ಯಾದಿ) ಉತ್ಪಾದನೆ, ಗುಣಮಟ್ಟದ ಬೀಜಗಳ ವಿತರಣೆ ಮತ್ತು ಮೌಲ್ಯವರ್ಧನೆ ಮೂಲಸೌಕರ್ಯವನ್ನು ಬಲಪಡಿಸುವುದು. ದೇಶದಲ್ಲಿ ಒಂದು ಕೋಟಿ ಎಪ್ಪತ್ತು ಸಾವಿರ ಮೌಲ್ಯದ ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ, ಈ ಆಮದನ್ನು ತಪ್ಪಿಸಲು ಈ ಯೋಜನೆ ಸಹಕಾರಿ ಆಗುತ್ತದೆ.
- **ಈಶಾನ್ಯ ವಲಯದ ಸಾವಯವ ಮೌಲ್ಯವರ್ಧನೆ ಅಭಿವೃದ್ಧಿ ಮಿಷನ್ (MOVCDNER) :** ಈಶಾನ್ಯ ಭಾರತದ ರಾಜ್ಯಗಳಲ್ಲಿ ಪ್ರಮಾಣೀಕೃತ ಸಾವಯವ ಕೃಷಿ ಕ್ಲಸ್ಟರ್‌ಗಳನ್ನು ಅಭಿವೃದ್ಧಿಪಡಿಸಿ, ರೈತರನ್ನು ನೇರವಾಗಿ ಗ್ರಾಹಕರೊಂದಿಗೆ ಜೋಡಿಸಲು ಇಡೀ ಮೌಲ್ಯ ಸರಣಿಯನ್ನು (Value Chain) ಬಲಪಡಿಸುವುದು. ಸಿಕ್ಕಿಂ ರಾಜ್ಯವನ್ನು ನೈಸರ್ಗಿಕ ಕೃಷಿ ರಾಜ್ಯ ಎಂದು ಘೋಷಿಸಲಾಗಿದೆ.
- **ಡಿಜಿಟಲ್ ಕೃಷಿ ಮಿಷನ್ (Digital Agriculture Mission)** : ಮುಕ್ತ ಮತ್ತು ಇಂಟರ್ ಆಪರೇಬಲ್ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವನ್ನು ಸೃಷ್ಟಿಸುವುದು. ಇದರ ಮೂಲಕ ರೈತರಿಗೆ ಬೆಳೆ ಯೋಜನೆ, ಸಾಲ, ವಿಮೆ, ಬೆಳೆ ಅಂದಾಜು ಮತ್ತು ಮಾರುಕಟ್ಟೆ ಮಾಹಿತಿಯನ್ನು ಡಿಜಿಟಲ್ ಆಗಿ ಒದಗಿಸಿ



ಅಗ್ರಿ-ಟೆಕ್ ನವೋದ್ಯಮಗಳಿಗೆ ಬೆಂಬಲ ನೀಡುವುದರೊಂದಿಗೆ ತಂತ್ರಜ್ಞಾನದ ಮಹತ್ವವನ್ನು ಸಮಾಜದ ಕಟ್ಟಾ ಕಡೆಯ ವ್ಯಕ್ತಿಗೆ ತಲುಪಿಸಲಾಗಿದೆ.

- **ರಾಷ್ಟ್ರೀಯ ಬಿದಿರು ಮಿಷನ್ (NBM) :** ದೇಶದ 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬಿದಿರು ಕ್ಷೇತ್ರದ ಸಂಪೂರ್ಣ ಮೌಲ್ಯ ಸರಣಿಯನ್ನು (ಬೆಳೆಸುವಿಕೆ ತರುವುದು, ಸಂಸ್ಕರಣೆ ಮತ್ತು ಮಾರುಕಟ್ಟೆ) ಅಭಿವೃದ್ಧಿಪಡಿಸುವ ಯೋಜನೆಯಾಗಿದೆ.
- **ಕೃಷಿ ಸಂಶೋಧನೆ :** ಭಾರತೀಯ ಕೃಷಿ ಸಂಶೋಧನಾ ಮಂಡಳಿ (ICAR) ಸೇರಿದಂತೆ ಕೃಷಿ ಶಿಕ್ಷಣ ಮತ್ತು ಸಂಶೋಧನೆಗಾಗಿ 9,967 ಕೋಟಿ ನಿಗದಿಪಡಿಸಲಾಗಿದೆ.
- **ಗೊಬ್ಬರ ಸಬ್ಸಿಡಿ (Fertiliser Subsidy) :** ರೈತರ ಉತ್ಪಾದನಾ ವೆಚ್ಚವನ್ನು ತಗ್ಗಿಸಲು ಮತ್ತು ಕೈಗೆಟುಕುವ ದರದಲ್ಲಿ ರಸಗೊಬ್ಬರಗಳನ್ನು ಒದಗಿಸಲು 1,70,944 ಕೋಟಿ ರೂ ಬೃಹತ್ ಸಬ್ಸಿಡಿಯನ್ನು ಘೋಷಿಸಲಾಗಿದೆ.

### ರೈತರ ಆದಾಯವನ್ನು ದ್ವಿಗುಣಗೊಳಿಸಲು ಕೃಷಿ ವೈವಿಧ್ಯತೆಯನ್ನು ಪೋಷಿಸಲು ಹೆಚ್ಚಿನ ಮೌಲ್ಯದ ಬೆಳೆಗಳು ಮತ್ತು ವಿಶೇಷ ಯೋಜನೆಗಳು

- **ರಾಷ್ಟ್ರೀಯ ನಾರು ಯೋಜನೆ (National Fibre Scheme) :** ರೇಷ್ಮೆ, ಉಣ್ಣೆ ಮತ್ತು ಸೆಣಬು (Jute) ಬೆಳೆಯುವ ರೈತರಿಗೆ ಈ ಯೋಜನೆಯಡಿ ನೇರ ಸೌಲಭ್ಯ ಸಿಗಲಿದೆ.
- **ಔಷಧೀಯ ಸಸ್ಯಗಳು :** ಆಯುಷ್ (AYUSH) ಸಚಿವಾಲಯದ ಅಡಿಯಲ್ಲಿ ಔಷಧೀಯ ಸಸ್ಯಗಳ ಪ್ರಮಾಣೀಕರಣ ಮತ್ತು ರಫ್ತಿಗೆ ಒತ್ತು ನೀಡಲಾಗಿದ್ದು, ಇದರಿಂದ ರೈತರ ಆದಾಯ ಹೆಚ್ಚಲಿದೆ.
- **ಹೆಚ್ಚಿನ ಮೌಲ್ಯದ ಬೆಳೆಗಳು :** ತೆಂಗು, ಕೋಕೋ, ಗೋಡಂಬಿ ಮತ್ತು ಶ್ರೀಗಂಧದ ಕೃಷಿಗೆ ಬಜೆಟ್ನಲ್ಲಿ ಸ್ಪಷ್ಟ ನಿಬಂಧನೆಗಳನ್ನು ತರಲಾಗಿದೆ. ಹಳೆಯ ತೆಂಗಿನ ತೋಟಗಳ ಪುನಶ್ಚೇತನ ಮತ್ತು ಹೊಸ ತೋಟಗಳ ನಿರ್ಮಾಣಕ್ಕೆ ವ್ಯವಸ್ಥೆ ಮಾಡಲಾಗಿದೆ.
- **ಹಣ್ಣು ಮತ್ತು ತರಕಾರಿ :** ಹಣ್ಣು ಹಾಗೂ ತರಕಾರಿಗಳ ಉತ್ಪಾದನೆ ಹೆಚ್ಚಿಸಲು ಮತ್ತು ಅವುಗಳನ್ನು ಸುಲಭವಾಗಿ ಗ್ರಾಹಕರಿಗೆ ತಲುಪಿಸಲು ಪ್ರತ್ಯೇಕ ಸಾರಿಗೆ ಹಾಗೂ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ರೈತರಿಗೆ ಉತ್ತಮ ಬೆಲೆ ಸಿಗಲಿದೆ.

ಕೇಂದ್ರ ಸರ್ಕಾರದ ದೂರ ದೃಷ್ಟಿ, ಅಂತ್ಯೋದಯ ವಿಚಾರಧಾರೆ ಮತ್ತು ದೇಶದ ಎಲ್ಲ ವರ್ಗದ ಮತ್ತು ಭೂ ಭಾಗಗಳ ರೈತರನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ,

ಈ ಕಾರ್ಯಕ್ರಮಗಳು ರೈತರ ಜೀವನ ಮಟ್ಟವನ್ನು ಸುಧಾರಿಸಲು ಸಹಕಾರಿ ಆಗುತ್ತಿವೆ ಮತ್ತು ಪಕ್ಷದ ಜನಪ್ರತಿನಿಧಿಗಳು ಮತ್ತು ಕಾರ್ಯಕರ್ತರು ಈ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ವಿಮರ್ಶೆ ಮತ್ತು ವಿಶ್ಲೇಷಣೆಗಳನ್ನು ಮಾಡುವ ಮುಖಾಂತರ, ಪಕ್ಷದ, ಪರಿವಾರದ ಮತ್ತು ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಆಶಯಗಳನ್ನು ಈಡೇರಿಸುವಂತಹ ಜವಾಬ್ದಾರಿಯು ನಮ್ಮೆಲ್ಲರ ಮೇಲಿದೆ.



# ಇರಾನ್-ಇಸ್ರೇಲ್ ಸಂಘರ್ಷ ಮತ್ತು ಭಾರತದ ಪಾತ್ರ





ಪೂರ್ಣ ದೀಕ್ಷಿತ್
ಕಾರ್ಯಕರ್ತರು, ತೀರ್ಥಹಳ್ಳಿ

ಮಧ್ಯಪ್ರಾಚ್ಯ ಪ್ರದೇಶವು ವಿಶ್ವದ ರಾಜಕೀಯ, ಆರ್ಥಿಕ ಮತ್ತು ಭದ್ರತಾ ದೃಷ್ಟಿಯಿಂದ ಅತ್ಯಂತ ಮಹತ್ವವಾದ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಇರಾನ್ ಮತ್ತು ಇಸ್ರೇಲ್ ನಡುವಿನ ವೈಮನಸ್ಸು ಹಲವು ದಶಕಗಳಿಂದ ಮುಂದುವರೆಯುತ್ತಾ ಬಂದಿದೆ.

ಇತ್ತೀಚಿನ ವರ್ಷಗಳಲ್ಲಿ ಈ ಸಂಘರ್ಷವು ಮತ್ತಷ್ಟು ತೀವ್ರಗೊಂಡಿದ್ದು, ವಿಶ್ವದ ಗಮನವನ್ನು ಸೆಳೆದಿದೆ. ಈ ಸಂಘರ್ಷವು ಕೇವಲ ಎರಡು ರಾಷ್ಟ್ರಗಳ ನಡುವಿನ ಸಮಸ್ಯೆಯಾಗಿರದೆ, ಜಾಗತಿಕ ರಾಜಕೀಯ, ತೈಲ ಮಾರುಕಟ್ಟೆ, ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಭದ್ರತೆಯ ಮೇಲೆಯೂ ಭಾರಿ ಪ್ರಮಾಣದಲ್ಲಿ ಪರಿಣಾಮ ಬೀರುತ್ತಿದೆ.ಇರಾನ್ ಮತ್ತು ಇಸ್ರೇಲ್ ನಡುವಿನ ವೈಮನಸ್ಸಿನ ಮೂಲ 1979ರ ಇರಾನಿನ ಇಸ್ಲಾಮಿಕ್ ಕ್ರಾಂತಿಯ ನಂತರ ಆರಂಭವಾಯಿತು. ಅದಕ್ಕೂ ಮೊದಲು ಎರಡೂ ದೇಶಗಳ ನಡುವೆ ಉತ್ತಮ ಸಂಬಂಧಗಳಿದ್ದವು. ಆದರೆ ಕ್ರಾಂತಿಯ ನಂತರ ಇರಾನ್ ತನ್ನ ವಿದೇಶಾಂಗ ನೀತಿಯನ್ನು ಬದಲಾಯಿಸಿಕೊಂಡು ಇಸ್ರೇಲ್ ವಿರುದ್ಧ ಕಠಿಣ ನಿಲುವು ತಾಳಿತು. ನಂತರದಿಂದ ಎರಡೂ ರಾಷ್ಟ್ರಗಳು ಪರೋಕ್ಷವಾಗಿ ಮತ್ತು ಕೆಲವೊಮ್ಮೆ ನೇರವಾಗಿ ಸಂಘರ್ಷಗಳಲ್ಲಿ ತೊಡಗಿಕೊಂಡಿವೆ.

ಇತ್ತೀಚಿನ ವರ್ಷಗಳಲ್ಲಿ ಇರಾನ್‌ನ ಅಣು ಕಾರ್ಯಕ್ರಮವು ಇಸ್ರೇಲ್‌ಗೆ ಪ್ರಮುಖ ಚಿಂತೆಯ ವಿಷಯವಾಗಿದೆ. ಇರಾನ್ ತನ್ನ ಅಣು ಯೋಜನೆ ಶಾಂತಿಯುತ ಉದ್ದೇಶಗಳಿಗಾಗಿ ಎಂದು ಹೇಳುತ್ತಿದ್ದರೂ, ಇಸ್ರೇಲ್ ಮತ್ತು ಪಾಶ್ಚಾತ್ಯ ರಾಷ್ಟ್ರಗಳು ಅದು ಅಣ್ವಸ್ತ್ರ ಅಭಿವೃದ್ಧಿಯತ್ತ ಸಾಗುತ್ತಿದೆ



ಎಂದು ಶಂಕಿಸುತ್ತಿವೆ. ಇವರ ಪರಿಣಾಮವಾಗಿ ಪರಸ್ಪರ ಆರೋಪಗಳು, ನಿರ್ಬಂಧಗಳು ಮತ್ತು ಸೇನಾ ಉದ್ವಿಗ್ನತೆಗಳು ಹೆಚ್ಚಾಗಿವೆ.

2026ರಲ್ಲಿ ಪರಿಸ್ಥಿತಿ ಮತ್ತಷ್ಟು ಗಂಭೀರಗೊಂಡಿತು. ಇಸ್ರೇಲ್ ಮತ್ತು ಅದರ ಮಿತ್ರ ರಾಷ್ಟ್ರಗಳ ಕ್ರಮಗಳಿಗೆ ಪ್ರತಿಯಾಗಿ ಇರಾನ್ ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳನ್ನು ನಡೆಸಿತು. ಇದರಿಂದ ಮಧ್ಯಪ್ರಾಚ್ಯದಲ್ಲಿ ಭದ್ರತಾ ಪರಿಸ್ಥಿತಿ ಹದಗೆಟ್ಟಿದ್ದು, ಹಲವು ರಾಷ್ಟ್ರಗಳು ಆತಂಕ ವ್ಯಕ್ತಪಡಿಸಿವೆ. ಈ ಸಂಘರ್ಷದ ಪರಿಣಾಮವಾಗಿ ತೈಲ ಬೆಲೆಗಳಲ್ಲಿ ಏರಿಳಿತ ಕಂಡುಬಂದಿದ್ದು, ಜಾಗತಿಕ ಆರ್ಥಿಕತೆಯ ಮೇಲೂ ಪರಿಣಾಮ ಬೀರಿದೆ.

ಈ ಸಂದಿಗ್ಧ ಸಂದರ್ಭದಲ್ಲಿ ಭಾರತದ ಪಾತ್ರವು ಅತ್ಯಂತ ಮಹತ್ವದ್ದಾಗಿದೆ. ಭಾರತವು ಇರಾನ್ ಮತ್ತು ಇಸ್ರೇಲ್ ಎರಡೂ ರಾಷ್ಟ್ರಗಳೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿದೆ. ಇಸ್ರೇಲ್ ಭಾರತದ ಪ್ರಮುಖ ರಕ್ಷಣಾ ಹಾಗೂ ತಂತ್ರಜ್ಞಾನ ಪಾಲುದಾರ ರಾಷ್ಟ್ರವಾಗಿದೆ. ಕೃಷಿ, ಜಲ ನಿರ್ವಹಣೆ, ಭದ್ರತೆ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಎರಡೂ ದೇಶಗಳು ನಿಕಟವಾದ ಸಹಕಾರವನ್ನು ಹೊಂದಿವೆ. ಭಾರತ–ಇಸ್ರೇಲ್ ವ್ಯಾಪಾರ ಮತ್ತು ತಂತ್ರಜ್ಞಾನ ಸಹಭಾಗಿತ್ವವು ಕಳೆದ ಕೆಲವು ದಶಕಗಳಲ್ಲಿ ಗಮನಾರ್ಹವಾಗಿ ವೃದ್ಧಿಯಾಗಿದೆ.

ಇನ್ನೊಂದೆಡೆ, ಇರಾನ್ ಕೂಡ ಭಾರತದ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ಭಾರತದ ಇಂಧನ ಭದ್ರತೆ, ಪಶ್ಚಿಮ ಏಷ್ಯಾದ ಸಂಪರ್ಕ ಮತ್ತು ಚಾಬಹಾರ್ ಬಂದರು ಯೋಜನೆಗಳಲ್ಲಿ ಇರಾನ್ ಪ್ರಮುಖ ಪಾತ್ರ ವಹಿಸುತ್ತದೆ. ಭಾರತವು ಮಧ್ಯ ಏಷ್ಯಾ ಮತ್ತು ಅಫ್ಘಾನಿಸ್ತಾನಕ್ಕೆ ಸಂಪರ್ಕ ಸಾಧಿಸಲು ಇರಾನ್ನ ಭೌಗೋಳಿಕ ಸ್ಥಾನವನ್ನು ಮಹತ್ವಪೂರ್ಣವಾಗಿ ಪರಿಗಣಿಸುತ್ತದೆ.

ಈ ಕಾರಣಗಳಿಂದ ಭಾರತವು ಇರಾನ್–ಇಸ್ರೇಲ್ ಸಂಘರ್ಷದಲ್ಲಿ ಯಾವುದೇ ಒಂದು ರಾಷ್ಟ್ರದ ಪರವಾಗಿ ನಿಲ್ಲದೆ, ಸಮತೋಲನದ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿದೆ. ಭಾರತವು ನಿರಂತರವಾಗಿ ಸಂವಾದ, ರಾಜತಾಂತ್ರಿಕ ಮಾತುಕತೆ ಮತ್ತು ಶಾಂತಿಯುತ ಪರಿಹಾರಕ್ಕೆ ಒತ್ತು ನೀಡುತ್ತಿದೆ. ಭಾರತದ ಪ್ರಧಾನಮಂತ್ರಿಯವರೂ ಸೇರಿದಂತೆ ಹಲವು ನಾಯಕರು ಸಂಘರ್ಷವನ್ನು ಶಾಂತಿಯುತವಾಗಿ ಪರಿಹರಿಸಬೇಕೆಂದು ಕರೆ ನೀಡಿದ್ದಾರೆ.

ಭಾರತದ ದೃಷ್ಟಿಯಿಂದ ಈ ಸಂಘರ್ಷದ ಮತ್ತೊಂದು ಪ್ರಮುಖ ಅಂಶವೆಂದರೆ ವಿದೇಶಗಳಲ್ಲಿ ಕೆಲಸ ಮಾಡುತ್ತಿರುವ ಭಾರತೀಯರ ಸುರಕ್ಷತೆ. ಲಕ್ಷಾಂತರ ಭಾರತೀಯರು ಗಲ್ಫ್ ರಾಷ್ಟ್ರಗಳಲ್ಲಿ ಉದ್ಯೋಗದಲ್ಲಿದ್ದು, ಯಾವುದೇ ದೊಡ್ಡ ಯುದ್ಧವು ಅವರ ಜೀವನ ಮತ್ತು ಉದ್ಯೋಗದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಜೊತೆಗೆ ಮಧ್ಯಪ್ರಾಚ್ಯದಿಂದ ಭಾರತಕ್ಕೆ ಬರುವ ತೈಲ ಮತ್ತು ಅನಿಲ ಸರಬರಾಜಿನ ಮೇಲೆಯೂ ಪರಿಣಾಮ ಉಂಟಾಗಿದೆ.

ಒಟ್ಟಾರೆಯಾಗಿ, ಇರಾನ್–ಇಸ್ರೇಲ್ ಸಂಘರ್ಷವು ಜಾಗತಿಕ ಮಟ್ಟದಲ್ಲಿ ಅತ್ಯಂತ ಮಹತ್ವದ ಪರಿಣಾಮಗಳನ್ನು ಉಂಟುಮಾಡುವ ಸಮಸ್ಯೆಯಾಗಿದೆ. ಭಾರತವು ತನ್ನ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುತ್ತಾ, ಎರಡೂ ರಾಷ್ಟ್ರಗಳೊಂದಿಗೆ ಸ್ನೇಹಪೂರ್ಣ ಸಂಬಂಧಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಶಾಂತಿ, ಸಂವಾದ ಮತ್ತು ರಾಜತಾಂತ್ರಿಕತೆ ಮಾತ್ರ ಈ ಸಂಘರ್ಷಕ್ಕೆ ಶಾಶ್ವತ ಪರಿಹಾರ ಒದಗಿಸಬಲ್ಲವು. ಆದ್ದರಿಂದ ವಿಶ್ವ ಸಮುದಾಯವು ಯುದ್ಧಕ್ಕಿಂತ ಶಾಂತಿಯ ಮಾರ್ಗವನ್ನು ಅನುಸರಿಸುವುದು ಅತ್ಯಗತ್ಯವಾಗಿದೆ.





# ಪ್ರಧಾನಿ ಮನ್ ಕಿ ಬಾತ್‌ನಲ್ಲಿ ಅಲ್ಪಸಂಖ್ಯಾತರ ಮೋರ್ಚಾ

(ವರದಿ)



ಡಾ.ಅನಿಲ್ ಥಾಮಸ್,
ರಾಜ್ಯಾಧ್ಯಕ್ಷರು,
ಅಲ್ಪಸಂಖ್ಯಾತ ಮೋರ್ಚಾ, ಬಿಜೆಪಿ

**ಕ**ಳೆದ ಮೇ.31ರಂದು ದೇಶವ್ಯಾಪಿ ಬಿತ್ತರಗೊಂಡ ಪ್ರಧಾನಮಂತ್ರಿ ನರೇಂದ್ರ ಮೋದಿಯವರ 134ನೇ ಮನ್ ಕಿ ಬಾತ್'' ಹೊಸದೊಂದು ಭಾಷ್ಯ ಬರೆದಿದೆ. ವಿಶೇಷವಾಗಿ ಕರ್ನಾಟಕವನ್ನು ಕೇಂದ್ರೀಕರಿಸಿ ಬಿತ್ತರಗೊಂಡ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದ ಉಡುಪಿಯ ಕ್ರಿಶ್ಚಿಯನ್ ಸಮುದಾಯದ ಧಾರ್ಮಿಕ ಭಕ್ತಿ ಕೇಂದ್ರವಾದ ಅನುಗ್ರಹದಲ್ಲಿ ಅನುರಣಿಸಿತು.

ಅಲ್ಪಸಂಖ್ಯಾತರೂ ಕೂಡ ಈ ನೆಲದ ಅಸ್ಮಿತೆ ಕಾಪಾಡುವವರು, ಅಂತಹ ಸುಶಿಕ್ಷಿತ ಸಮುದಾಯವೊಂದರ ಹಿಂದೆ ಕೇಂದ್ರದಲ್ಲಿರುವ ಬಿಜೆಪಿ ಆಡಳಿತಾರೂಢ ಸರ್ಕಾರ ಇದೆ ಎಂಬ ಸಂದೇಶ ಈ ಮೂಲಕ ವ್ಯಕ್ತವಾಯಿತು. ಇದು ಸಹಜವಾಗಿಯೇ ಕ್ರೈಸ್ತ ಸಮುದಾಯದಲ್ಲಿ ಹೊಸತೊಂದು ಚೈತನ್ಯ ಮೂಡಿಸಿತು. ಉಡುಪಿ ಜಿಲ್ಲಾ ಬಿಜೆಪಿ ಘಟಕ ಹಾಗೂ ಅಲ್ಪಸಂಖ್ಯಾತ ಮೋರ್ಚಾದ ಸಹಯೋಗದೊಂದಿಗೆ ಆಯೋಜನೆ ಮಾಡಲಾಗಿದ್ದ ಮೋದಿಯವರ ಮನ್ ಕಿ ಬಾತ್ ಕಾರ್ಯಕ್ರಮದ ನೇರಪ್ರಸಾರದಲ್ಲಿ ಶ್ರೀ ನರೇಂದ್ರ ಮೋದಿಯವರ ಆಡಳಿತದ ನಿಖರತೆ, ದಕ್ಷತೆ ಹಾಗೂ ಸಬ್ ಕಾ ಸಾತ್ ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್ ಎಂಬ ನಿರ್ಣಯಗಳಿಗೆ ಕ್ರೈಸ್ತ ಸಮುದಾಯ ತಲೆದೂಗಿತು.

ಕ್ರೈಸ್ತ ಸಮುದಾಯ ಪಕ್ಷವೊಂದರ ಪರವಾಗಿದೆ ಎಂಬ ಹಣೆಪಟ್ಟಿಯನ್ನು ಮೋದಿಯವರ ಮನ್ ಕಿ ಬಾತ್ ಕಾರ್ಯಕ್ರಮ ಕಳಚಿ ಹಾಕಿತ್ತು. ಈ ನೆಲ, ಜಲ, ದೇಶ, ರಾಷ್ಟ್ರೀಯತೆಯ ವಿಚಾರದಲ್ಲಿ ನಮ್ಮ ನಿರ್ಧಾರ ಅಚಲ ಎಂಬ ಸಂದೇಶ ಉಡುಪಿಯ ಅನುಗ್ರಹದ ಮೂಲಕ ನಾಡಿಗೆ ಪಸರಿಸಿತ್ತು. ಅದಕ್ಕೆ ಕ್ರೈಸ್ತ ಧರ್ಮಗುರುಗಳು, ಧರ್ಮಭಗಿನಿಯರು, ಭಾರತೀಯ ಜನತಾ ಪಕ್ಷದ ಮುಖಂಡರು, ಜನಪ್ರತಿನಿಧಿಗಳು, ಸ್ಥಳೀಯ ಶಾಸಕರು, ಕಾರ್ಯಕರ್ತರು ಸಾಕ್ಷಿಯಾದರು. ದೇಶಕ್ಕಾಗಿ ದುಡಿಯುವ ಪಕ್ಷಕ್ಕಾಗಿ, ಸಮರ್ಪಣಾ ಭಾವನೆ ಹೊಂದಿರುವ ವ್ಯಕ್ತಿಗಳ ಹಿಂದೆ ನಮ್ಮದೊಂದು ಕಿರುಕೊಡುಗೆ ಎಂಬಂತೆ ಅನುಗ್ರಹ'ದಲ್ಲಿ ನೆರೆದಿದ್ದವರ ಮನದಲ್ಲಿ ಹೊಸ ಮೊಳಕೆಯೊಂದು ಚಿಗುರೊಡೆದಿತ್ತು. ಅದನ್ನು ಅಗಣಿತ ಮಂದಿಯ ಉಪಸ್ಥಿತಿ ಸಮಾಜಕ್ಕೆ ಸಾರಿತ್ತು.

ಸ್ಥಳೀಯ ಶಾಸಕರಾದ ಶ್ರೀ ಸುರೇಶ್ ಶೆಟ್ಟಿ ಗುರ್ಮೆ, ಶ್ರೀ ಕಿರಣ್ ಕುಮಾರ್ ಕೊಡ್ಗಿ, ಶ್ರೀ ಗುರುರಾಜ್ ಗಂಟಿಹೊಳೆ, ವಿಧಾನ ಪರಿಷತ್ ಸದಸ್ಯರಾದ ಡಾ.ಧನಂಜಯ ಸರ್ಜಿ, ಕಿಶೋರ್ ಕುಮಾರ್ ಬೊಟ್ಯಾಡಿ, ಮಾಜಿ ವಿಭಾಗ ಪ್ರಭಾರಿ ಕೆ.ಉದಯ ಕುಮಾರ್ ಶೆಟ್ಟಿ, ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ಜಿಲ್ಲಾಧ್ಯಕ್ಷ ಶ್ರೀ ರುಡಾಲ್ಫ್ ಡಿ'ಸೋಜಾ, ರಾಜ್ಯ ಕಾರ್ಯದರ್ಶಿ ಶ್ರೀ ಜೆಸೇಲ್ ಡಿಸೋಜ, ಮಹಿಳಾ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಿಲ್ಪಾ ಜಿ. ಸುವರ್ಣ, ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯೆ ಶ್ರೀಮತಿ ಶ್ಯಾಮಲಾ ಎಸ್ ಕುಂದರ್, 'ಮನ್ ಕೀ ಬಾತ್' ಜಿಲ್ಲಾ ಸಂಚಾಲಕ ಶ್ರೀ ಶಿವಕುಮಾರ್ ಅಂಬಲಪಾಡಿ, ಮತ್ತು ಹಲವಾರು ಧರ್ಮಗುರುಗಳು ಭಾಗವಹಿಸಿದ್ದರು. ಭಾರತೀಯ ಜನತಾ ಪಕ್ಷ ಹಾಗೂ ಈ ನೆಲದ ಅಸ್ಮಿತೆಯಂತಿರುವ, ನೂರು ವರ್ಷ ತುಂಬಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದೊಂದಿಗೆ ಹೆಜ್ಜೆ ಹಾಕಿದರೆ ಭವಿಷ್ಯದಲ್ಲಿ ಬದುಕಿನ ಚಿತ್ರಣ ಹೇಗಿರಬಹುದೆಂಬ ಕಲ್ಪನೆ ಹಾಗೂ ವಾಸ್ತವತೆಯ ಅರಿವು ಮನ್ ಕಿ ಬಾತ್ ನಲ್ಲಿ ವ್ಯಕ್ತವಾಯಿತಲ್ಲದೆ, ನೆರೆದಿದ್ದವರ ಅಬಾಲವೃದ್ಧರ ಮನಸ್ಸನ್ನು ತಟ್ಟಿತು.



# ಕೇಂದ್ರ ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರ ರಾಜ್ಯ ಪ್ರವಾಸದ ವರದಿ

ಪ್ರಧಾನಿ ಮೋದಿ ಅವರ 12 ವರ್ಷಗಳ ದಾಖಲೆ ಅಧಿಕಾರಾವಧಿಯನ್ನು ಮುಗಿಸಿದ ಕಾರಣ, ಸರ್ಕಾರದ ಸಾಧನೆಗಳನ್ನು ಪ್ರಚಾರದ ದೃಷ್ಟಿಯಿಂದ ಎರಡು ದಿನಗಳ ವಿಶೇಷ ರಾಜ್ಯ ಪ್ರವಾಸ ಕೈಗೊಂಡ ಕೇಂದ್ರ ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಜೂನ್ 13ರಂದು ಉಡುಪಿಯಿಂದ ತಮ್ಮ ಪ್ರವಾಸವನ್ನು ಆರಂಭಿಸಿದರು.

ಅವರು ಉಡುಪಿ ಜಿಲ್ಲೆಯ ಉಚ್ಚಿಲದಲ್ಲಿ ವರಾಹ ಲಕ್ಷ್ಮಿ ದೇವಸ್ಥಾನದ ಆವರಣದಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರಶಿಕ್ಷಣ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಇದೇ ಸಂದರ್ಭದಲ್ಲಿ ಅವರು 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನದ ಅಂಗವಾಗಿ ಅಲ್ಲಿನ ದೇವಸ್ಥಾನದ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾಧ್ಯಕ್ಷರು, ಸ್ಥಳೀಯ ಶಾಸಕರು ಹಾಗೂ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

14 ಜೂನ್ ರಂದು ಅವರು ಬೆಂಗಳೂರು ಉತ್ತರ ಪ್ರವಾಸದ ವೇಳೆ, ಶ್ರೀ ನರೇಂದ್ರ ಮೋದಿ ಅವರ ಸರ್ಕಾರದ 12 ವರ್ಷಗಳ ಅವಧಿಯ ಸಾಧನೆಗಳನ್ನು ತಿಳಿಸುವ ಉದ್ದೇಶದಿಂದ ಐದು ಪ್ರಮುಖ ಗಣ್ಯ ವ್ಯಕ್ತಿಗಳನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಈ ವೇಳೆ ಅವರು ಸುಮಂಗಲಿ ಸೇವಾಶ್ರಮದ ಸ್ಥಾಪಕರೂ ಹಾಗೂ ಪದ್ಮ ಪ್ರಶಸ್ತಿ ಪುರಸ್ಕೃತರೂ ಆದ ಶ್ರೀಮತಿ ಸುಮಲತಾ ಅವರನ್ನು ಭೇಟಿಯಾಗಿ ಚರ್ಚಿಸಿದರು. ಅದರೊಂದಿಗೆ ಪದ್ಮ ಪ್ರಶಸ್ತಿ ಪುರಸ್ಕೃತ ಖ್ಯಾತ ಪ್ಯಾರಾ ಒಲಿಂಪಿಕ್ ಕ್ರೀಡಾಪಟು ಶ್ರೀ ಕೆ. ವಿ. ವೆಂಕಟೇಶ್, ಅರ್ಜುನ ಪ್ರಶಸ್ತಿ ಪುರಸ್ಕೃತ ಶ್ರೀ ಅರ್ಜುನ ದೇವಯ್ಯ ಮತ್ತು ಮಾಜಿ ಒಲಿಂಪಿಯನ್ ಶ್ರೀ ಬಿ. ದಿಲೀಪ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಇದಲ್ಲದೆ, ಇನ್ನರ್‌ವೀಲ್ ಅಧ್ಯಕ್ಷೆ ಶ್ರೀಮತಿ ವಿನುತಾ ಹರೀಶ್ ಮತ್ತು ಅಸೋಸಿಯೇಷನ್ ಸದಸ್ಯರನ್ನು ಭೇಟಿ ಮಾಡಿದ ಸಚಿವರು,


















KASSIA ಹಾಗೂ ಪೀಣ್ಯ ಇಂಡಸ್ಟ್ರಿ ಅಸೋಸಿಯೇಷನ್ ಸೇರಿದಂತೆ ಹಲವಾರು ಕೈಗಾರಿಕೋದ್ಯಮಿಗಳ ಜೊತೆಗೆ ಮಹತ್ವವಾದ ಸಂವಾದವನ್ನು ನಡೆಸಿದರು.

ಬೆಂಗಳೂರು ಕೇಂದ್ರದಲ್ಲಿ ನಡೆದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸಚಿವರು, ಇಲ್ಲೂ 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನದ ಅಂಗವಾಗಿ ಬನ್ನಪ್ಪ ಪಾರ್ಕಿನಲ್ಲಿ ಸಸಿ ನೆಟ್ಟರು ಮತ್ತು ದೇವರ ದಾಸಿಮಯ್ಯ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ.ವಿಜಯೇಂದ್ರ ಹಾಗೂ ಸಂಸದರಾದ ಶ್ರೀ ಪಿ. ಸಿ. ಮೋಹನ್ ಭಾಗವಹಿಸಿದ್ದರು. ನಂತರ, ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಆಯೋಜಿಸಿದ್ದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅಲ್ಲಿನ ಪೌರಕಾರ್ಮಿಕರೊಂದಿಗೆ ಸಂವಾದವನ್ನು ನಡೆಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಮುಖಂಡರುಗಳು ಭಾಗವಹಿಸಿದ್ದರು.

ಬೆಂಗಳೂರು ದಕ್ಷಿಣ ಜಿಲ್ಲೆ ವತಿಯಿಂದ ಜಯನಗರದಲ್ಲಿ ಆಯೋಜಿಸಲಾಗಿದ್ದ ವಿಕಸಿತ ಭಾರತ ಸಂಕಲ್ಪ ಸಮಾವೇಶದಲ್ಲಿ ಕೇಂದ್ರ ಸಚಿವರು ಭಾಗವಹಿಸಿದ್ದರು. ಈ ಸಮಾವೇಶದಲ್ಲಿ ಅವರು ಪಿ.ಎಂ. ಸ್ವನಿಧಿ ಮತ್ತು ಪಿ.ಎಂ. ವಿಶ್ವಕರ್ಮ ಯೋಜನೆಗಳ ಫಲಾನುಭವಿಗಳೊಂದಿಗೆ ನೇರ ಸಂವಾದ ನಡೆಸಿದರು. ಜೊತೆಗೆ, ಮೋದಿ ಸರ್ಕಾರದ ಸಾಧನೆಗಳು ಮತ್ತು ಕರ್ನಾಟಕಕ್ಕೆ ಕೇಂದ್ರ ಸರ್ಕಾರ ನೀಡಿರುವ ಕೊಡುಗೆಗಳ ಬಗ್ಗೆ ಸಚಿವರು ವಿವರವಾಗಿ ಉಲ್ಲೇಖಿಸಿದರು.

ಈ ಸಂದರ್ಭದಲ್ಲಿ ಸಂಸದ ಶ್ರೀ ತೇಜಸ್ವಿ ಸೂರ್ಯ, ವಿರೋಧ ಪಕ್ಷದ ನಾಯಕರಾದ ಶ್ರೀ ಆರ್ ಅಶೋಕ್ ಮತ್ತು ಶಾಸಕ ಶ್ರೀ ಸಿ.ಕೆ. ರಾಮಮೂರ್ತಿ ಅವರು ಉಪಸ್ಥಿತರಿದ್ದರು.

ಬೆಂಗಳೂರು ಗ್ರಾಮಾಂತರ ಪ್ರವಾಸದ ಭಾಗವಾಗಿ ಸಚಿವರು 'ಪ್ರಗತಿ ಪಥ ಯಾತ್ರೆ, ದರ್ಶನ'ದ ಅಂಗವಾಗಿ ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ಹೈವೇಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತದನಂತರ ದೇವನಹಳ್ಳಿಯ ಬಿಜೆಪಿ ಕಾರ್ಯಾಲಯಕ್ಕೆ ಭೇಟಿ ನೀಡಿ ಪಕ್ಷದ ಕಾರ್ಯಕರ್ತರೊಂದಿಗೆ ಸಂವಾದವನ್ನು ನಡೆಸಿದರು. ಕೊನೆಯದಾಗಿ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಸಂವಾದ ವನ್ನು ನಡೆಸಿದರು.

# ಸಿದ್ದರಾಮಯ್ಯನವರ ಆಡಳಿತ,




# ಕರುನಾಡಿನ ಕರಾಳ ಅಧ್ಯಾಯ, ಕರುನಾಡಿಗೆ ತಟ್ಟಿದ ಶಾಪ



ಹರೀಶ್ ಆತ್ರೇಯ
ಕಾರ್ಯಕರ್ತರು

**ಕ**ರ್ನಾಟಕದ ಇತಿಹಾಸದಲ್ಲಿ ಆಡಳಿತ ಯಂತ್ರವು ಸಂಪೂರ್ಣವಾಗಿ ಕುಸಿದು, ಆರ್ಥಿಕತೆ ದಿವಾಳಿಯಾಗಿ, ಅಭಿವೃದ್ಧಿ ಶೂನ್ಯವಾದ ಕಾಲಘಟ್ಟವೊಂದಿದ್ದರೆ ಅದು ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದ ಅವಧಿ. ಪ್ರಜಾಪ್ರಭುತ್ವದಲ್ಲಿ ಜನಾದೇಶ ಸಿಗುವುದು ನಾಡನ್ನು ಕಟ್ಟಲು, ಭವಿಷ್ಯದ ತಲೆಮಾರಿಗೆ ಭದ್ರ ಬುನಾದಿ ಹಾಕಲು. ಆದರೆ, ಕೇವಲ ಅಧಿಕಾರದ ಲಾಲಸೆ, ವೋಟ್ ಬ್ಯಾಂಕ್ ರಾಜಕಾರಣ ಮತ್ತು ಉಚಿತಗಳ ಭ್ರಮೆಯನ್ನು ಬಿತ್ತಿ ಅಧಿಕಾರಕ್ಕೆ ಬಂದ ಈ ಸರ್ಕಾರ, ರಾಜ್ಯವನ್ನು ದಶಕಗಳಷ್ಟು ಹಿಂದಕ್ಕೆ ತಳ್ಳಿದೆ.

ಬೊಕ್ಕಸದ ಹಣವನ್ನು ಅಭಿವೃದ್ಧಿಗೆ ಬಳಸುವ ಬದಲು ಕೇವಲ ರಾಜಕೀಯ ಅಸ್ತಿತ್ವಕ್ಕಾಗಿ ಪೋಲು ಮಾಡಿದ, ಮೂಲಸೌಕರ್ಯಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ ಹಾಗೂ ಅಹಂಕಾರದ ಪರಮಾವಧಿಯಾಗಿ ಮೆರೆದ ಈ ಆಡಳಿತದ ಪ್ರತಿಯೊಂದು ಪ್ರಮಾದಗಳ (Blunders) ಮತ್ತು ಆಡಳಿತ ವೈಫಲ್ಯಗಳ ಆಳವಾದ ವಿಶ್ಲೇಷಣೆ

ಇಲ್ಲಿದೆ. ಅಂಕಿ-ಅಂಶಗಳು ಮತ್ತು ವಾಸ್ತವಿಕ ದತ್ತಾಂಶಗಳ ಆಧಾರದ ಮೇಲೆ ಈ ಸರ್ಕಾರದ ವೈಫಲ್ಯಗಳನ್ನು ಎಳೆಎಳೆಯಾಗಿ ಬಿಡಿಸಿಡಲಾಗಿದೆ.

### ಆಡಳಿತಾತ್ಮಕ ನಿಷ್ಕ್ರಿಯತೆ: 'ಕಾಯ್ದಿರಿಸಿದ' ದಿನಗಳು ಮತ್ತು ಸಮಯದ ಘೋರ ಅಪವ್ಯಯ

ಒಬ್ಬ ಮುಖ್ಯಮಂತ್ರಿಯ ಕಾರ್ಯವೈಖರಿಯು ರಾಜ್ಯದ ಆಡಳಿತ ಯಂತ್ರದ ವೇಗವನ್ನು ನಿರ್ಧರಿಸುತ್ತದೆ. ಆದರೆ, ಸಿದ್ದರಾಮಯ್ಯನವರ ಅಧಿಕೃತ ದಿನಚರಿಯೇ ಅವರ ಆಡಳಿತದ ಅಣಕದಂತಿದೆ. ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳ ಒಟ್ಟು 90 ದಿನಗಳ ದತ್ತಾಂಶವನ್ನು ಗಮನಿಸಿದರೆ, ಬರೋಬ್ಬರಿ 33 ದಿನಗಳನ್ನು (ಮಾರ್ಚ್ 9, ಏಪ್ರಿಲ್ 12, ಮೇ 12 ದಿನಗಳು) ಕೇವಲ 'ಕಾಯ್ದಿರಿಸಲಾಗಿದೆ' (Reserved) ಎಂದು ನಮೂದಿಸಲಾಗಿದೆ. ಅಂದರೆ, ಶೇಕಡಾ 36% ರಷ್ಟು ಸಮಯವನ್ನು ಯಾವುದೇ ಅಧಿಕೃತ ಆಡಳಿತಾತ್ಮಕ ಸಭೆಗಳಿಲ್ಲದೆ ಕಳೆಯಲಾಗಿದೆ. ಉಳಿದ ದಿನಗಳಲ್ಲಿ 11 ದಿನಗಳನ್ನು ಮದುವೆ ಸಮಾರಂಭಗಳಿಗೆ ಮೀಸಲಿಡಲಾಗಿದೆ. ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕಾದ ಸದನದಲ್ಲಿ ಕಳೆದದ್ದು ಕೇವಲ 12 ದಿನಗಳು ಮಾತ್ರ. ಮೇ 19, 20, 23, 24 ರ ಅಧಿಕೃತ ಪ್ರವಾಸ ಪಟ್ಟಿಗಳನ್ನು ನೋಡಿದರೆ, ಬುಧವಾರದಂತಹ ಪ್ರಮುಖ ಕೆಲಸದ ದಿನವೂ (ಮೇ 20) ಕೇವಲ ಒಂದು ಸಭೆ ನಡೆಸಿ ಇಡೀ ದಿನವನ್ನು 'ಕಾಯ್ದಿರಿಸಲಾಗಿದೆ'. ಭಾನುವಾರಗಳಂತೂ ಅರಮನೆ ಮೈದಾನದ ಮದುವೆ, ರೆಸಾರ್ಟ್ ಭೇಟಿಗಳಿಗೇ ಸೀಮಿತವಾಗಿವೆ. ರಥೋತ್ಸವ, ಕಂಬಳ, ಹೋಟೆಲ್ ಉದ್ಘಾಟನೆ ಮತ್ತು ಚುನಾವಣಾ ಪ್ರಚಾರಕ್ಕೇ ಇವರ ಬಹುಪಾಲು ಸಮಯ ವ್ಯಯವಾಗಿವೆ. ಮುಖ್ಯಮಂತ್ರಿಯ ಕಚೇರಿ ಕೇವಲ ರಿಬ್ಬನ್ ಕತ್ತರಿಸುವ ಮತ್ತು ಫೋಟೋ ತೆಗೆಸಿಕೊಳ್ಳುವ ಕೇಂದ್ರವಾಗಿ ಮಾರ್ಪಟ್ಟಿತ್ತು.

### ಆರ್ಥಿಕ ದಿವಾಳಿತನ ಮತ್ತು 'ಭಾಗ್ಯ'ಗಳೆಂಬ ಅವೈಜ್ಞಾನಿಕ ಪ್ರಮಾದ (Economic Blunders)

ಸಿದ್ದರಾಮಯ್ಯನವರ ಸರ್ಕಾರದ ಅತಿ ದೊಡ್ಡ ಪ್ರಮಾದವೆಂದರೆ ರಾಜ್ಯದ ಆರ್ಥಿಕತೆಯನ್ನು ಸಂಪೂರ್ಣವಾಗಿ ನಾಶ ಮಾಡಿದ್ದು. ಕರ್ನಾಟಕವು ಒಂದು ಕಾಲದಲ್ಲಿ ಆರ್ಥಿಕ ಶಿಸ್ತಿಗೆ ಹೆಸರಾಗಿತ್ತು. ಆದರೆ, ಈ ಸರ್ಕಾರದ ಅವಧಿಯಲ್ಲಿ ರಾಜ್ಯದ ಒಟ್ಟು ಸಾಲದ ಹೊರೆ 5.4 ಲಕ್ಷ ಕೋಟಿ ರೂಪಾಯಿಗಳನ್ನು (ಅಂದಾಜು) ದಾಟಿದೆ. ಕೇವಲ ಒಂದು ವರ್ಷದಲ್ಲಿ ಬರೋಬ್ಬರಿ 85,000 ದಿಂದ 90,000 ಕೋಟಿ ರೂಪಾಯಿಗಳಷ್ಟು ಸಾಲವನ್ನು ಎತ್ತುವ ಮೂಲಕ ಭವಿಷ್ಯದ ತಲೆಮಾರಿನ ಮೇಲೆ ಆರ್ಥಿಕ ಹೊರೆಯನ್ನು ಹೇರಲಾಗಿದೆ.

**ಉಚಿತ ಯೋಜನೆಗಳ ಹೊರೆ :** 5 ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕವಾಗಿ ಅಂದಾಜು 50,000 ದಿಂದ 60,000 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಈ ಹಣವನ್ನು ಹೊಂದಿಸಲು ಯಾವುದೇ ವೈಜ್ಞಾನಿಕ ಮಾರ್ಗಸೂಚಿಗಳಿಲ್ಲ, ಇದರಿಂದಾಗಿ ರಾಜ್ಯದ ಬಂಡವಾಳ ವೆಚ್ಚ (Capital Expenditure) ಸಂಪೂರ್ಣವಾಗಿ ಪಾತಾಳಕ್ಕೆ ಕುಸಿದಿದೆ.

**ಅಭಿವೃದ್ಧಿ ಅನುದಾನ ಕಡಿತ :** ಶಾಸಕರ ಪ್ರದೇಶಾಭಿವೃದ್ಧಿ ನಿಧಿ, ಲೋಕೋಪಯೋಗಿ ಇಲಾಖೆ, ನೀರಾವರಿ ಯೋಜನೆಗಳಿಗೆ ನೀಡಬೇಕಾದ ಅನುದಾನವನ್ನು ಶೇ. 60% ರಿಂದ 70% ರಷ್ಟು ಕಡಿತಗೊಳಿಸಲಾಗಿದೆ. ರಸ್ತೆ ಗುಂಡಿ ಮುಚ್ಚಲೂ ಸರ್ಕಾರದ ಬಳಿ ಹಣವಿಲ್ಲದಂತಹ ದುಸ್ಥಿತಿ ನಿರ್ಮಾಣವಾಗಿದೆ. ಉಚಿತಗಳನ್ನು ಕೊಡಲು ಹೋಗಿ, ಪೆಟ್ರೋಲ್, ಡೀಸೆಲ್, ಮದ್ಯ, ವಿದ್ಯುತ್ ದರ, ವಾಹನಗಳ ನೋಂದಣಿ ಶುಲ್ಕ, ಆಸ್ತಿ ನೋಂದಣಿ ಮಾರ್ಗಸೂಚಿ ದರ (Guidance Value) ಮತ್ತು ಹಾಲಿನ ದರಗಳನ್ನು ಮನಬಂದಂತೆ ಏರಿಸಲಾಗಿದೆ. ಒಂದೆಡೆ 2000 ರೂಪಾಯಿ ಕೊಟ್ಟು, ಇನ್ನೊಂದೆಡೆ ತೆರಿಗೆಯ ರೂಪದಲ್ಲಿ 4000 ರೂಪಾಯಿಗಳನ್ನು ಜನಸಾಮಾನ್ಯರ ಜೇಬಿನಿಂದ ಕೀಳುವ ಹಗಲು ದರೋಡೆ ನಡೆದಿದೆ.

### ಮೂಲಸೌಕರ್ಯಗಳ ನಾಶ

#### ಬೆಂಗಳೂರು ಮತ್ತು ರಾಜ್ಯದ ಕಡೆಗಣನೆ (Infrastructure Failures)

ಕರ್ನಾಟಕದ ಆರ್ಥಿಕತೆಯ ಎಂಜಿನ್ ಆಗಿರುವ ಸಿಲಿಕಾನ್ ಸಿಟಿ ಬೆಂಗಳೂರನ್ನು ಮತ್ತು ರಾಜ್ಯದ ಮೂಲಸೌಕರ್ಯವನ್ನು ಈ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಗಾರ್ಡನ್ ಸಿಟಿ, ಐಟಿ-ಬಿಟಿ ಸಿಟಿಯಾಗಿದ್ದ ಬೆಂಗಳೂರು ಸಿದ್ದರಾಮಯ್ಯನವರ ಕಾಲದಲ್ಲಿ ಟ್ರಾಫಿಕ್ ಸಿಟಿ ಮತ್ತು ಕಸದ ಸಿಟಿ ಯಾಗಿ ಮಾರ್ಪಟ್ಟಿತು. ಬಿಬಿಎಂಪಿ ಗುತ್ತಿಗೆದಾರರಿಗೆ ಅಂದಾಜು 7000 ಕೋಟಿ ರೂಪಾಯಿಗಳಿಗೂ ಹೆಚ್ಚು ಬಾಕಿ ಉಳಿಸಿಕೊಳ್ಳಲಾಯಿತು. ಬಿಲ್ ಪಾವತಿಯಾಗದೆ ಯಾವುದೇ ಹೊಸ ಕಾಮಗಾರಿಗಳು ನಡೆಯಲಿಲ್ಲ.

**ಕುಡಿಯುವ ನೀರಿನ ಹಾಹಾಕಾರ :** ಬೇಸಿಗೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಕುಡಿಯುವ ನೀರಿನ ಭೀಕರ ಹಾಹಾಕಾರ ಸೃಷ್ಟಿಯಾದರೂ, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಲ್ಲಿ ಸರ್ಕಾರ ವಿಫಲವಾಯಿತು. ಟ್ಯಾಂಕರ್ ಮಾಫಿಯಾಗೆ ಕಡಿವಾಣ ಹಾಕದೆ ಜನಸಾಮಾನ್ಯರನ್ನು ಶೋಷಣೆಗೆ ದೂಡಲಾಯಿತು. ಮೂಲಸೌಕರ್ಯಗಳ ಕೊರತೆ, ವಿದ್ಯುತ್ ಸಮಸ್ಯೆ ಮತ್ತು ಸರ್ಕಾರದ ಅಸಹಕಾರದಿಂದಾಗಿ ಅನೇಕ ಪ್ರತಿಷ್ಠಿತ ಕಂಪನಿಗಳು ತಮಿಳುನಾಡು, ತೆಲಂಗಾಣ ಮತ್ತು ಮಹಾರಾಷ್ಟ್ರದ ಕಡೆಗೆ ಮುಖ ಮಾಡಿದವು. ಹೊಸ ಉದ್ಯೋಗ ಸೃಷ್ಟಿ ಸಂಪೂರ್ಣವಾಗಿ ಸ್ತಬ್ಧವಾಯಿತು.

### ರೈತ ವಿರೋಧಿ ನೀತಿ ಮತ್ತು ಬರ ನಿರ್ವಹಣೆಯಲ್ಲಿ ವಿಫಲತೆ (Agricultural Mismanagement)

ತಮ್ಮನ್ನು ರೈತಪರ, ಅಹಿಂದ ನಾಯಕ ಎಂದು ಬಿಂಬಿಸಿಕೊಳ್ಳುವ ಸಿದ್ದರಾಮಯ್ಯನವರ ಆಡಳಿತದಲ್ಲಿ ಅತಿ ಹೆಚ್ಚು ಕಣ್ಣೀರು ಹಾಕಿದ್ದು ಅನ್ನದಾತ. ರಾಜ್ಯದ 200 ಕ್ಕೂ ಹೆಚ್ಚು ತಾಲೂಕುಗಳು ಭೀಕರ

ಬರಗಾಲಕ್ಕೆ ತುತ್ತಾದರೂ, ಸರ್ಕಾರ ಮಾತ್ರ ದೆಹಲಿಯ ಕಡೆ ಬೊಟ್ಟು ಮಾಡಿ ಕಾಲಹರಣ ಮಾಡಿತೇ ಹೊರತು, ತನ್ನ ಬೊಕ್ಕಸದಿಂದ ರೈತರಿಗೆ ತಕ್ಷಣದ ಪರಿಹಾರ ನೀಡುವ ಗೋಜಿಗೆ ಹೋಗಲಿಲ್ಲ. ಬೆಳೆ ನಷ್ಟ, ಸಾಲದ ಬಾಧೆ ಮತ್ತು ಸರ್ಕಾರದ ಸ್ಪಂದನೆಯ ಕೊರತೆಯಿಂದಾಗಿ ನೂರಾರು ರೈತರು ಆತ್ಮಹತ್ಯೆಗೆ ಶರಣಾದರು. ಕಬ್ಬು ಬೆಳೆಗಾರರು, ಈರುಳ್ಳಿ ಬೆಳೆಗಾರರಿಗೆ ವೈಜ್ಞಾನಿಕ ಬೆಲೆ ಸಿಗದೆ ಬೀದಿಪಾಲಾದರು. ಕೃಷ್ಣಾ ಮೇಲ್ದಂಡೆ ಯೋಜನೆ, ಮೇಕೆದಾಟು, ಮಹದಾಯಿ, ಭದ್ರಾ ಮೇಲ್ದಂಡೆಯಂತಹ ಬಹುಮುಖ್ಯ ನೀರಾವರಿ ಯೋಜನೆಗಳಿಗೆ ಬಿಡಿಗಾಸನ್ನೂ ಮೀಸಲಿಡದೆ ದ್ರೋಹ ಬಗೆಯಲಾಯಿತು.

### ಕಾನೂನು ಸುವ್ಯವಸ್ಥೆ ಕುಸಿತ ಮತ್ತು ಓಲೈಕೆ ರಾಜಕಾರಣ

ರಾಜ್ಯದ ಭದ್ರತೆ ಮತ್ತು ಕಾನೂನು ಸುವ್ಯವಸ್ಥೆಯ ವಿಚಾರದಲ್ಲಿ ಸಿದ್ದರಾಮಯ್ಯನವರ ಸರ್ಕಾರ ಎಸಗಿದ ಪ್ರಮಾದಗಳು ಅಕ್ಷಮ್ಯ. ಕೇವಲ ವೋಟ್ ಬ್ಯಾಂಕ್‌ಗಾಗಿ ಒಂದು ನಿರ್ದಿಷ್ಟ ಕೋಮಿನ ಓಲೈಕೆಗೆ ಸರ್ಕಾರ ಇಳಿಯಿತು. ಪಿಎಫ್‌ಐ (PFI) ಮತ್ತು ಕೆಎಫ್‌ಡಿ (KFD) ಯಂತಹ ಸಂಘಟನೆಗಳ ಮೇಲಿದ್ದ ಪ್ರಕರಣಗಳನ್ನು ಹಿಂಪಡೆಯುವಂತಹ ಆತುರದ ನಿರ್ಧಾರಗಳು ಸಮಾಜಘಾತುಕ ಶಕ್ತಿಗಳಿಗೆ ಕುಮ್ಮಕ್ಕು ನೀಡಿದವು. ರಾಜಕೀಯ ಹಸ್ತಕ್ಷೇಪ, ವರ್ಗಾವಣೆ ದಂಧೆ (Transfer Mafia) ಯಿಂದಾಗಿ ಪ್ರಾಮಾಣಿಕ ಅಧಿಕಾರಿಗಳು ಮೂಲೆಗುಂಪಾದರು. ಅಪರಾಧ ಪ್ರಕರಣಗಳು, ಕೊಲೆ, ಸುಲಿಗೆಗಳು ರಾಜ್ಯದಲ್ಲಿ ಮಿತಿಮೀರಿದವು. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿಗಳನ್ನು ರಕ್ಷಿಸುವಂತಹ ಘಟನೆಗಳು ಜರುಗಿದವು. ಸರ್ಕಾರದ ಮೃದು ಧೋರಣೆಯಿಂದಾಗಿ ಹುಬ್ಬಳ್ಳಿ, ಶಿವಮೊಗ್ಗ, ಮಂಗಳೂರು ಸೇರಿದಂತೆ ಹಲವೆಡೆ ಕೋಮು ಘರ್ಷಣೆಗಳು ನಡೆದು ರಾಜ್ಯದ ಶಾಂತಿ ಕದಡಿತು. ನಮ್ಮ ಸರ್ಕಾರವಿದ್ದಾಗ ನಾವೇನು ಬೇಕಾದರೂ ಮಾಡಬಹುದು ಎಂಬ ಉದ್ಧಟತನ ಸಮಾಜಘಾತುಕ ಶಕ್ತಿಗಳಲ್ಲಿ ಮೂಡಲು ಈ ಓಲೈಕೆ ರಾಜಕಾರಣವೇ ನೇರ ಕಾರಣ.

### ಭ್ರಷ್ಟಾಚಾರ, ವರ್ಗಾವಣೆ ದಂಧೆ ಮತ್ತು ಹಗರಣಗಳು

ಪಾರದರ್ಶಕ ಆಡಳಿತದ ಭರವಸೆ ನೀಡಿ ಅಧಿಕಾರಕ್ಕೆ ಬಂದ ಸರ್ಕಾರ, ಭ್ರಷ್ಟಾಚಾರದ ಕೂಪವಾಗಿ ಮಾರ್ಪಟ್ಟಿತು. ಪ್ರತಿಯೊಂದು ಸರ್ಕಾರಿ ಹುದ್ದೆಗೂ, ವರ್ಗಾವಣೆಗೂ ಇಂತಿಷ್ಟು ಎಂದು ರೇಟ್ ಫಿಕ್ಸ್ ಮಾಡಲಾಗಿತ್ತು ಎಂಬ ಗಂಭೀರ ಆರೋಪಗಳು ಕೇಳಿಬಂದವು. ವಿಧಾನಸೌಧದ ಮೊಗಸಾಲೆಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಕ್ಯಾಶ್ ಫಾರ್ ಪೋಸ್ಟಿಂಗ್ (Cash for Posting) ಹಗರಣಗಳು ಆಡಳಿತ ಯಂತ್ರವನ್ನು ದುರ್ಬಲಗೊಳಿಸಿದವು. ಹಿಂದಿನ ಸರ್ಕಾರದ ಮೇಲೆ 40% ಕಮಿಷನ್ ಎಂದು ಆರೋಪ ಮಾಡಿ ಅಧಿಕಾರಕ್ಕೆ ಬಂದವರು, ತಮ್ಮ ಆಡಳಿತದಲ್ಲಿ ಅದನ್ನೇ ಮುಂದುವರೆಸಿದರು ಎಂಬ ಆರೋಪಗಳನ್ನು ಗುತ್ತಿಗೆದಾರರ ಸಂಘಗಳೇ ಮಾಡಿದವು. ಕಮಿಷನ್ ನೀಡದೆ ಬಿಲ್ ಪಾಸ್ ಆಗುವುದಿಲ್ಲ ಎಂಬ ಅಲಿಖಿತ ನಿಯಮ ಜಾರಿಯಲ್ಲಿತ್ತು. ದಲಿತರು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಮೀಸಲಿದ್ದ ಹಣವನ್ನು ಬೇರೆಡೆಗೆ ವರ್ಗಾಯಿಸಿದ ಮತ್ತು ಅಕ್ರಮವಾಗಿ ನಿವೇಶನಗಳನ್ನು ಹಂಚಿಕೊಂಡ ಹಗರಣಗಳು ಸಿದ್ದರಾಮಯ್ಯನವರ ಆಹಿಂದ ಕಾಳಜಿಯ ಮುಖವಾಡವನ್ನು ಕಳಚಿಹಾಕಿದವು.

### ಗರ್ವ, ಅಹಂಕಾರ ಮತ್ತು ಸರ್ವಾಧಿಕಾರಿ ಧೋರಣೆ

ಒಬ್ಬ ಮುಖ್ಯಮಂತ್ರಿಯ ನಾಲಿಗೆಯ ಮೇಲಿನ ಹಿಡಿತ ಮತ್ತು ವಿನಯಶೀಲತೆ ಅವರ ವ್ಯಕ್ತಿತ್ವವನ್ನು ತೋರುತ್ತದೆ. ಆದರೆ ಸಿದ್ದರಾಮಯ್ಯನವರ ನಡವಳಿಕೆ ಪ್ರಜಾಪ್ರಭುತ್ವಕ್ಕೆ ಒಪ್ಪುವಂತಿರಲಿಲ್ಲ. ಮಾಧ್ಯಮಗಳು, ಪ್ರತಿಪಕ್ಷಗಳು ಅಥವಾ ಜನಸಾಮಾನ್ಯರು ಪ್ರಶ್ನೆ ಕೇಳಿದರೆ, ನಾನು ಹೇಳಿದ್ದೇ ಶಾಸನ, ನಿಮ್ಮನ್ನೇನು ಮಾಡಿಕೊಳ್ಳಲು ಆಗುವುದಿಲ್ಲ, ನೀನ್ಯಾವನ್ರಿ ಕೇಳೋಕೆ ಎಂಬಂತಹ ಅಹಂಕಾರದ, ಗರ್ವದ ಮಾತುಗಳು ನಿರಂತರವಾಗಿ ಹೊರಬರುತ್ತಿದ್ದವು. ಕೇವಲ ಜಾತಿಗಳ ನಡುವೆ ಕಂದಕ ಸೃಷ್ಟಿಸುವ, ಒಡೆದು ಆಳುವ ನೀತಿಯನ್ನು ಅನುಸರಿಸಿದರು. ಹಿಂದೂ ಧರ್ಮದ ಆಚರಣೆಗಳನ್ನು, ನಂಬಿಕೆಗಳನ್ನು ಲಘುವಾಗಿ ಮಾತನಾಡುವ ಮೂಲಕ ಬಹುಸಂಖ್ಯಾತರ ಭಾವನೆಗಳಿಗೆ ನಿರಂತರವಾಗಿ ಘಾಸಿ ಮಾಡಿದರು.

### ಕರುನಾಡಿಗೆ ತಟ್ಟಿದ ಶಾಪ

ಒಟ್ಟಾರೆಯಾಗಿ ವಿಶ್ಲೇಷಿಸುವುದಾದರೆ, ಸಿದ್ದರಾಮಯ್ಯನವರ ಈ ಅಧಿಕಾರಾವಧಿಯು ಕೇವಲ ಆಡಳಿತಾತ್ಮಕ ವೈಫಲ್ಯವಲ್ಲ, ಇದೊಂದು ಐತಿಹಾಸಿಕ ಪ್ರಮಾದ.

**ಆರ್ಥಿಕವಾಗಿ :** ರಾಜ್ಯವನ್ನು ಸಾಲದ ಶೂಲಕ್ಕೇರಿಸಿ ದಿವಾಳಿ ಮಾಡಿದರು.

**ಮೂಲಸೌಕರ್ಯದಲ್ಲಿ :** ಅಭಿವೃದ್ಧಿಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿ ರಾಜ್ಯವನ್ನು 20 ವರ್ಷಗಳಷ್ಟು ಹಿಂದಕ್ಕೆ ತಳ್ಳಿದರು.

**ಸಾಮಾಜಿಕವಾಗಿ :** ಜಾತಿ-ಧರ್ಮಗಳ ನಡುವೆ ವಿಷಬೀಜ ಬಿತ್ತಿ, ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡಿದರು.

**ಆಡಳಿತಾತ್ಮಕವಾಗಿ :** ದಿನಚರಿಯಲ್ಲಿ 33 ದಿನಗಳನ್ನು 'ಕಾಯ್ದಿರಿಸಿ', ಮಂಮಂವೆ, ರೆಸಾರ್ಟ್‌ಗಳಿಗೆ ಅಲೆದಾಡಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರು.

ಒಬ್ಬ ಮುಖ್ಯಮಂತ್ರಿ ಹೇಗಿರಬಾರದು ಮತ್ತು ಒಂದು ಸರ್ಕಾರ ಹೇಗೆ ಆಡಳಿತ ನಡೆಸಬಾರದು ಎಂಬುದಕ್ಕೆ ಸಿದ್ದರಾಮಯ್ಯನವರ ಆಡಳಿತ ಜ್ವಲಂತ ಉದಾಹರಣೆಯಾಗಿ ನಿಲ್ಲುತ್ತದೆ. ಅಭಿವೃದ್ಧಿಯ ಕನಸು ಕಂಡಿದ್ದ ಕನ್ನಡಿಗರ ಪಾಲಿಗೆ ಇವರ ಆಡಳಿತವು, ಮುಗಿಯದ ದುಸ್ವಪ್ನವಾಗಿ, ಇತಿಹಾಸದ ಪುಟಗಳಲ್ಲಿ ಎಂದೆಂದಿಗೂ ಅಳಿಸಲಾಗದ ಕಪ್ಪುಮಚ್ಚೆಯಾಗಿ ಉಳಿಯಲಿದೆ. ಕರುನಾಡು ಈ ನಷ್ಟದಿಂದ ಚೇತರಿಸಿಕೊಳ್ಳಲು ಇನ್ನು ಹಲವು ದಶಕಗಳೇ ಬೇಕಾಗಬಹುದು.




**2026ರ ಮೇ 23 ಮತ್ತು 24ರಂದು ಬೆಂಗಳೂರು ಉತ್ತರ ಜಿಲ್ಲಾ ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ವರ್ಗದಲ್ಲಿ ಮಾಡಿದ ಸಮಾರೋಪ ನುಡಿಗಳು**



# ಸರ್ಕಾರದ ಯೋಜನೆಗಳು ಮತ್ತು ಸಾಧನೆಗಳ ಸಮರ್ಪಕ ಮಾಹಿತಿಯನ್ನು ತಲುಪಿಸುವುದು ಕಾರ್ಯಕರ್ತರ ಕರ್ತವ್ಯ

**– ನಿತಿನ್ ನಬಿನ್**



ಪ್ರಸನ್ನ ಕುಮಾರ್ ಐಯ್ಯಂಗಾರ್
ಮಾಧ್ಯಮ ಸಂಚಾಲಕರು,
ಬೆಂಗಳೂರು ಉತ್ತರ ಜಿಲ್ಲೆ.

ರಾಷ್ಟ್ರಭಕ್ತಿ ಮತ್ತು ರಾಷ್ಟ್ರೀಯ ಭದ್ರತೆಯನ್ನು ದೇಶದ ಅಭಿವೃದ್ಧಿಯ ಮೂಲ ಆಧಾರಗಳಾಗಿದ್ದು, ಯಾವುದೇ ರಾಷ್ಟ್ರವು ಶಾಂತಿ, ಭದ್ರತೆ ಮತ್ತು ಸ್ಥಿರ ಆಡಳಿತವಿಲ್ಲದೆ ಅಭಿವೃದ್ಧಿ ಸಾಧಿಸಲು ಸಾಧ್ಯವಿಲ್ಲ ಎಂದು ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ನಿತೀನ್ ನಬಿನ್ ತಿಳಿಸಿದರು.

ದೇಶದ ಗಡಿಗಳನ್ನು ಸುರಕ್ಷಿತವಾಗಿಡುವುದು, ಭಯೋತ್ಪಾದನೆ ಮತ್ತು ರಾಷ್ಟ್ರವಿರೋಧಿ ಚಟುವಟಿಕೆಗಳನ್ನು ತಡೆಯುವುದು ಹಾಗೂ ಭದ್ರತಾ ಪಡೆಗಳನ್ನು ಬಲಪಡಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ.  ಬಾಲಾಕೋಟ್ ದಾಳಿ ಉರಿ ದಾಳಿ ಆಪರೇಷನ್ ಸಿಂಧೂರ್‌ಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವುದರ ಜೊತೆಗೆ 31ನೇ ತಾರೀಕು ಮಾರ್ಚ್ 2026 ರಂದು Naxal ಮುಕ್ತ ಭಾರತವೆಂದು ಮಾನ್ಯ ಶ್ರೀ ಅಮಿತ್ ಶಾ ಅವರು ಘೋಷಣೆ ಮಾಡಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ ಗಡಿ ಪ್ರದೇಶಗಳಲ್ಲಿ ರಸ್ತೆ, ಸೇತುವೆ ಮತ್ತು ಇತರೆ ಮೂಲಸೌಕರ್ಯಗಳ ಅಭಿವೃದ್ಧಿಯ ಮೂಲಕ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗಿದೆ ಎಂದರು.

ರಾಷ್ಟ್ರಭಕ್ತಿ ಎಂದರೆ ಕೇವಲ ಘೋಷಣೆಗಳಲ್ಲ, ದೇಶದ ಅಭಿವೃದ್ಧಿ,

ಸ್ವಚ್ಛತೆ, ಕಾನೂನು ಪಾಲನೆ ಮತ್ತು ಸಮಾಜ ಸೇವೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ಪ್ರತಿಯೊಬ್ಬ ನಾಗರೀಕನು ದೇಶದ ಹಿತಾಸಕ್ತಿಯನ್ನೇ ಮೊದಲ ಆದ್ಯತೆಯನ್ನಾಗಿಸಿಕೊಳ್ಳಬೇಕು ಹಾಗೂ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತನ್ನ ಕೊಡುಗೆಯನ್ನು ನೀಡಲೇಬೇಕು, ಬಲಿಷ್ಠ ಭಾರತ ನಿರ್ಮಾಣಕ್ಕೆ ಸುರಕ್ಷಿತ ಗಡಿಗಳು, ಶಕ್ತಿಶಾಲಿ ಆಡಳಿತ ಮತ್ತು ದೇಶಭಕ್ತಿಯ ಮನೋಭಾವ ಅತ್ಯಗತ್ಯ ಎಂದು ಅವರು ಪ್ರತಿಪಾದಿಸಿದರು.

## ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಯೋಗದ ಮಹತ್ವ

ಭಾರತವು ಸಾವಿರಾರು ವರ್ಷಗಳ ಇತಿಹಾಸ, ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿರುವ ರಾಷ್ಟ್ರವಾಗಿದ್ದು, ಅದರ ಬಗ್ಗೆ ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆ ಇರಬೇಕು ಎಂದು ಹೇಳಿದ ಶ್ರೀ ನಿತಿನ್ ನಬಿನ್, ರಾಮಮಂದಿರ, ಕಾಶಿ ವಿಶ್ವನಾಥ ಕಾರಿಡಾರ್ ಮತ್ತು ಸೋಮನಾಥ ದೇವಸ್ಥಾನದ ಪುನರುಜ್ಜೀವನವು ಕೇವಲ ಧಾರ್ಮಿಕ ಯೋಜನೆಗಳಲ್ಲ, ಭಾರತೀಯ ನಾಗರಿಕತೆಯ ಪುನರುತ್ಥಾನದ ಸಂಕೇತಗಳಾಗಿವೆ ಎಂದು ಅವರು ಅಭಿಪ್ರಾಯಪಟ್ಟರು.

ಭಾರತೀಯ ಸಂಸ್ಕೃತಿ ವಿಶ್ವಕ್ಕೆ ಶಾಂತಿ, ಸಹಿಷ್ಣುತೆ ಮತ್ತು ಮಾನವೀಯ ಮೌಲ್ಯಗಳನ್ನು ನೀಡಿದೆ ಎಂದು ಹೇಳಿದರು. ಯೋಗವು ಭಾರತದ ಪ್ರಾಚೀನ ಜ್ಞಾನ ಪರಂಪರೆಯ ಅಮೂಲ್ಯ ಕೊಡುಗೆಯಾಗಿದ್ದು, ಇಂದು ವಿಶ್ವದಾದ್ಯಂತ ಸ್ವೀಕಾರಾರ್ಹತೆಯನ್ನು ಪಡೆದಿದೆ ಎಂದು ಉಲ್ಲೇಖಿಸಿದರು. ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಮೂಲಕ ಯೋಗಕ್ಕೆ ಜಾಗತಿಕ ಮಾನ್ಯತೆ ದೊರೆತಿರುವುದು ಭಾರತದ ಸಾಂಸ್ಕೃತಿಕ ಪ್ರಭಾವವನ್ನು ತೋರಿಸುತ್ತದೆ, ಯುವಜನರು ತಮ್ಮ ಸಂಸ್ಕೃತಿ, ಭಾಷೆ, ಸಂಪ್ರದಾಯಗಳು ಮತ್ತು ಪರಂಪರೆಗಳ ಬಗ್ಗೆ ಅರಿವು ಹೊಂದಿ ಅವುಗಳನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕು, ಸಾಂಸ್ಕೃತಿಕ ಆತ್ಮವಿಶ್ವಾಸವು ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಅಗತ್ಯವಾಗಿದೆ ಎಂದು ಅವರು ತಿಳಿಸಿದರು.

## ತಪ್ಪು ಮಾಹಿತಿ ವಿರುದ್ಧ ಹೋರಾಟ ಮತ್ತು ಸಂಘಟನಾ ಜವಾಬ್ದಾರಿ

ಸಾಮಾಜಿಕ ಮಾಧ್ಯಮಗಳ ಯುಗದಲ್ಲಿ ತಪ್ಪು ಮಾಹಿತಿ, ನಕಲಿ ಸುದ್ದಿಗಳು ಮತ್ತು ದಾರಿತಪ್ಪಿಸುವ ಪ್ರಚಾರಗಳು ಸಮಾಜದಲ್ಲಿ ಗೊಂದಲ ಉಂಟುಮಾಡುವ ಅಪಾಯವನ್ನು ಹೊಂದಿವೆ ಎಂದು ಎಚ್ಚರಿಸಿದ ರಾಷ್ಟ್ರೀಯ ಅಧ್ಯಕ್ಷರು ಇಂತಹ ಸಂದರ್ಭಗಳಲ್ಲಿ ಬಿಜೆಪಿ ಕಾರ್ಯಕರ್ತರು ಕೇವಲ ರಾಜಕೀಯ ಕಾರ್ಯಕರ್ತರಾಗಿ ಮಾತ್ರವಲ್ಲದೆ ಸಮಾಜದಲ್ಲಿ ಸತ್ಯ ಮತ್ತು ನಿಖರ ಮಾಹಿತಿಯನ್ನು ಪ್ರತಿಯೊಬ್ಬರಿಗೂ ತಿಳಿಸುವಂತಹ ಜವಾಬ್ದಾರಿಯುತ ನಾಗರಿಕರಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಸರ್ಕಾರದ ಯೋಜನೆಗಳು ಮತ್ತು ಸಾಧನೆಗಳ ಕುರಿತು ಜನರಿಗೆ ಸರಿಯಾದ ಮಾಹಿತಿಯನ್ನು ತಲುಪಿಸುವುದು ಕಾರ್ಯಕರ್ತರ ಕರ್ತವ್ಯ, ವಿರೋಧ ಪಕ್ಷಗಳ ಟೀಕೆಗಳಿಗೆ ಭಾವನಾತ್ಮಕ ಪ್ರತಿಕ್ರಿಯೆ ನೀಡುವುದಕ್ಕಿಂತ ವಾಸ್ತವಾಂಶಗಳ ಆಧಾರದ ಮೇಲೆ ಉತ್ತರ ನೀಡಬೇಕು ಎಂದು ಸಲಹೆ ನೀಡಿದರು. ಗ್ರಾಮ, ವಾರ್ಡ್ ಮತ್ತು ಬೂತ್ ಮಟ್ಟದಲ್ಲಿ ಜನರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಸರ್ಕಾರದ ಯೋಜನೆಗಳ ಪ್ರಯೋಜನಗಳನ್ನು ಜನರಿಗೆ ತಿಳಿಸುವ ಕಾರ್ಯವನ್ನು ಕೈಗೊಳ್ಳಬೇಕು, ಪಕ್ಷದ ಸಂಘಟನೆ ಬಲವಾಗಿದ್ದರೆ ಜನರ ವಿಶ್ವಾಸ ಹೆಚ್ಚುತ್ತದೆ ಮತ್ತು ರಾಷ್ಟ್ರ ನಿರ್ಮಾಣದ ಕಾರ್ಯಗಳು ಹೆಚ್ಚು ಪರಿಣಾಮಕಾರಿಯಾಗುತ್ತವೆ ಎಂದು ಅವರು ಹೇಳಿದರು.

## ಯುವಜನ ಸಂಪರ್ಕ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅವರ ಪಾತ್ರ

ಯುವಜನತೆ ದೇಶದ ಭವಿಷ್ಯವಾಗಿದ್ದು, ವಿಶೇಷವಾಗಿ ಜನರೇಷನ್ ಘ ಜೊತೆ ಸಂಪರ್ಕ ಬೆಳೆಸುವುದು ಬಿಜೆಪಿ ಸಂಘಟನೆಯ ಪ್ರಮುಖ ಆದ್ಯತೆಯಾಗಿದೆ, ಇಂದಿನ ಯುವಕರು ತಂತ್ರಜ್ಞಾನ, ನವೋದ್ಯಮ ಮತ್ತು ಉದ್ಯಮಶೀಲತೆಯ ಮೂಲಕ ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಹೇಳಿದರು.

ಸ್ಟಾರ್ಟ್‌ಅಪ್‌ಗಳು, ಡಿಜಿಟಲ್ ಆರ್ಥಿಕತೆ ಮತ್ತು ಹೊಸ ಆವಿಷ್ಕಾರಗಳ ಮೂಲಕ ಭಾರತವು ಜಾಗತಿಕ ಮಟ್ಟದಲ್ಲಿ ತನ್ನ ಸ್ಥಾನವನ್ನು ಬಲಪಡಿಸುತ್ತಿದೆ, ಯುವಜನರನ್ನು ಕೇವಲ ರಾಜಕೀಯ ಚಟುವಟಿಕೆಗಳಿಗೆ ಮಾತ್ರ ಸೀಮಿತಗೊಳಿಸದೆ, ಸಾಮಾಜಿಕ ಸೇವೆ, ಪರಿಸರ ಸಂರಕ್ಷಣೆ, ಉದ್ಯಮಶೀಲತೆ ಮತ್ತು ರಾಷ್ಟ್ರ ನಿರ್ಮಾಣದ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಬೇಕು ಎಂದು ಅವರು ಕರೆ ನೀಡಿದರು.

ಮೊದಲ ಬಾರಿಗೆ ಮತದಾನ ಮಾಡುವ ಯುವ ಮತದಾರರೊಂದಿಗೆ ನಿರಂತರ ಸಂವಾದ ನಡೆಸಿ, ಪ್ರಜಾಪ್ರಭುತ್ವದ ಮಹತ್ವವನ್ನು ಅವರಿಗೆ ತಿಳಿಸಬೇಕು, ತಪ್ಪು ಮಾಹಿತಿಯಿಂದ ಯುವಕರನ್ನು ದೂರವಿಟ್ಟು, ಸಕಾರಾತ್ಮಕ ಚಿಂತನೆ ಮತ್ತು ರಾಷ್ಟ್ರೀಯ ಮೌಲ್ಯಗಳತ್ತ ಅವರನ್ನು ಪ್ರೇರೇಪಿಸುವ ಜವಾಬ್ದಾರಿ ಕಾರ್ಯಕರ್ತರ ಮೇಲಿದೆ ಎಂದು ಅವರು ತಿಳಿಸಿದರು. ಯುವಶಕ್ತಿಯ ಸರಿಯಾದ ಬಳಕೆಯಿಂದ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸಬಹುದು ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಸಮಾರೋಪ ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷರಾದ ಶ್ರೀ ಬಿ.ವೈ.ವಿಜಯೇಂದ್ರ, ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಶ್ರೀ ಎಸ್. ಹರೀಶ್ ಮತ್ತಿತರ ನಾಯಕರುಗಳು ಭಾಗವಹಿಸಿದ್ದರು.

ಹಿರಿಯ ಕಾರ್ಯಕರ್ತರ ಪರಿಚಯಮಾಲೆ 38

# ಕುಶಲ ಸಂಘಟಕ ಪದ್ದಣ್ಣ



ದು.ಗು. ಲಕ್ಷ್ಮಣ
ಹಿರಿಯ ಪತ್ರಕರ್ತರು



ಗಿರಿಜಾ ಮೀಸೆ. ಆಜಾನುಬಾಹು. ನೋಡಿದರೆ ಇನ್ನೊಮ್ಮೆ ನೋಡಬೇಕು ಎಂಬ ಆಕರ್ಷಕ ವ್ಯಕ್ತಿತ್ವ. ಜನಸಂಘ, ಬಿಜೆಪಿ ಕುರಿತು ವ್ಯಂಗ್ಯ ,ಲೇವಡಿ ತುಂಬಿದ್ದ ಕಾಲಘಟ್ಟದಲ್ಲಿ ಪಕ್ಷ ಕಟ್ಟಿ ಬೆಳೆಸಲು ಅಹರ್ನಿಶಿ ಪರಿಶ್ರಮಿಸಿದ ವ್ಯಕ್ತಿ ಶಿರಾಳಕೊಪ್ಪ ಪದ್ಮನಾಭ ಭಟ್ (ಪರಿಚಿತರಿಗೆಲ್ಲ ಪದ್ದಣ್ಣ ಎಂದೇ ಖ್ಯಾತರು).

ಇಂಟರ್ಮೀಡಿಯಟ್ ವರೆಗೆ ವಿದ್ಯಾಭ್ಯಾಸ ಮುಗಿಸಿದ ಪದ್ದಣ್ಣ( ಜನನ: 9. 11. 1939) ಚಿಕ್ಕ ವಯಸ್ಸಿನಿಂದಲೇ ಆರ್ ಎಸ್ ಎಸ್ ಸ್ವಯಂಸೇವಕರು. ಶಿರಾಳಕೊಪ್ಪ ಮಂಡಲ ಕಾರ್ಯವಾಹ ಆಗಿ ಸಂಘ ಕಾರ್ಯಕ್ಕೆ ಹೆಗಲುಕೊಟ್ಟವರು. ಜೊತೆಗೆ 1970ರಲ್ಲಿ ಶಿಕಾರಿಪುರ ತಾಲ್ಲೂಕು ಜನಸಂಘದ ಕಾರ್ಯದರ್ಶಿ. ಅನಂತರ ಜಿಲ್ಲಾ ಸಹ ಕಾರ್ಯದರ್ಶಿಯಾಗಿ ಶಿವಮೊಗ್ಗ ಜಿಲ್ಲೆಯ ರಾಜಕೀಯ ಕ್ಷೇತ್ರದಲ್ಲಿ ರಾಷ್ಟ್ರೀಯತೆಯ ಚಿಂತನೆ ಬಿತ್ತಲು ಶ್ರಮಿಸಿದವರು.

ಆಗೆಲ್ಲ ಕಾಂಗ್ರೆಸ್ ಪಕ್ಷದ ಉತ್ಕರ್ಷದ, ವೈಭವದ ಕಾಲ. ಜನ ಸಂಘದ ಕಾರ್ಯಕರ್ತರೆಂದರೆ ಲೇವಡಿ, ತಾತ್ಸಾರ. ಊರೂರಿಗೆ ಪಕ್ಷದ ಕಾರ್ಯ ಬೆಳೆಸಲು ಹೋದರೆ ,ನೀನು ಯಾವೂರ ದಾಸಯ್ಯ ಎಂದು ಕೇಳುವವರೇ ಇರುತ್ತಿರಲಿಲ್ಲ, ಕುಡಿಯಲು ನೀರು ಕೊಡ ಕೊಡುವವರು ಇರಲಿಲ್ಲ. ಇನ್ನು ಊಟ, ತಿಂಡಿ ,ಆತಿಥ್ಯದ ಮಾತೆಲ್ಲಿ? ಹಾಗಾಗಿ ಮನೆಯಿಂದಲೇ ರೊಟ್ಟಿ, ಚಪಾತಿ, ಪಲ್ಯ ಕಟ್ಟಿಸಿಕೊಂಡು ಪಕ್ಷದ ಸಂಘಟನೆಯ ಕೆಲಸಕ್ಕೆ ಹೋಗಬೇಕಿತ್ತು. ಕಾಂಗ್ರೆಸ್ ಕಾರ್ಯಕರ್ತರಿಗಾದರೋ ಊರೂರುಗಳಲ್ಲಿ ಭರ್ಜರಿ ಕಾಫಿ, ತಿಂಡಿ ,ಊಟದ ಔತಣ. ಆದರೆ ಇದಾವುದೂ ಆಗಿನ ಜನಸಂಘದ ಕಾರ್ಯಕರ್ತರ ಉತ್ಸಾಹಕ್ಕೆ ತಣ್ಣೀರೆರಚಲಿಲ್ಲ ಎನ್ನುತ್ತಾರೆ ಪದ್ದಣ್ಣ. ಏಕೆಂದರೆ ಹೃದಯದಲ್ಲೊಂದು ಧ್ಯೇಯ ದೀಪದ ಕಾವಿತ್ತು. ಮೈಮನಗಳಲ್ಲಿ ದೇಶಭಕ್ತಿಯ ಕಸುವಿತ್ತು. ಹತ್ತು ಹನ್ನೆರಡು ಮಂದಿಯ ತಾಲೂಕು ಸಮಿತಿ ರಚಿಸಿ ,ತಿಂಗಳಿಗೊಂದು ಪಕ್ಷದ ಬೈಠಕ್. ಚುನಾವಣೆ ದಿನ ಬರಿದೆ ಟೀ ಕುಡಿದು ಮತಗಟ್ಟೆಯಲ್ಲಿ ಏಜೆಂಟ್ ಕೆಲಸ ನಿರ್ವಹಣೆ. ಶಿಕಾರಿಪುರ ಕ್ಷೇತ್ರದಲ್ಲಿ ಜನಸಂಘದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸುಂದರ ನಾಯಕ ಎನ್ನುವವರಿಗೆ 2800 ಮತಗಳು ದೊರಕಿದಾಗ ಕಾರ್ಯಕರ್ತರಿಗೆ ಖುಷಿಯೋ ಖುಷಿ. ಮೊದಲು ನೂರಿನ್ನೂರು ಮತಗಳು ಬಿದ್ದರೆ ಪುಣ್ಯ !ಹುಣಸೆಮರದ ಮೇಲೆ ಜನ ಸಂಘದ ಬಾವುಟ. ಗೋಡೆ ಮೇಲೆ ದೀಪದ ಗುರುತಿಗೆ ವೋಟು ಕೊಡಿ ಎಂಬ ಪ್ರಚಾರ ಫಲಕ. ಠೇವಣಿ ನಷ್ಟ ಪ್ರತಿ ಸಲದ ಚುನಾವಣೆ ಫಲಿತಾಂಶ ವಾಗಿರುತ್ತಿತ್ತು. ಆದರೆ ಇದರಿಂದ ನಿರಾಶೆ ಆಗಿದ್ದಂತೂ ಇಲ್ಲ ಎಂದು ಪದ್ದಣ್ಣ ಆ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ.

ಸೊರಬದ ಹೆಚ್.ಎಸ್. ಮಂಜಪ್ಪ (ಆರ್ ಎಸ್ ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸ ಬಾಳೆಯವರ ಅಣ್ಣ) ನವರ ಜೊತೆ ಪದ್ದಣ್ಣ ಸಾಗರ, ಸೊರಬ ,ಶಿಕಾರಿಪುರ, ಶಿರಾಳಕೊಪ್ಪ, ಶಿವಮೊಗ್ಗ ,ಹೊಸನಗರ. ..ಹೀಗೆ ಎಲ್ಲೆಡೆ ಸುತ್ತಾಡಿದ್ದಕ್ಕೆ ಲೆಕ್ಕವೇ ಇಲ್ಲ. 1975 ರ ತುರ್ತು ಪರಿಸ್ಥಿತಿಯಲ್ಲಿ ಸತ್ಯಾಗ್ರಹ ಮಾಡಿ ಜೈಲುವಾಸ ಅನುಭವಿಸಿದ ಹೆಗ್ಗಳಿಕೆ ಪದ್ದಣ್ಣ ಅವರದು. 1975ರ ನವೆಂಬರ್ 19ರಂದು ಶಿಕಾರಿಪುರದಲ್ಲಿ ನಡೆದ ಸತ್ಯಾಗ್ರಹಕ್ಕೆ ಪದ್ದಣ್ಣ ಅವರದೇ ಮುಂದಾಳತ್ವ. ಸತ್ಯಾಗ್ರಹಿಗಳ ಮೆರವಣಿಗೆಗೆ ಎದುರಾಗಿ ಕಾಂಗ್ರೆಸ್ ನ ಇಂದಿರಾ ಜಯಂತಿ ಮೆರವಣಿಗೆ ಬರುತ್ತಿತ್ತು. ಪದ್ದಣ್ಣ ತಕ್ಷಣವೇ ಹತ್ತಿರದಲ್ಲಿದ್ದ ಎತ್ತಿನ ಬಂಡಿಯ ಮೇಲೆ ಹತ್ತಿ ಇಂದಿರಾ ಸರ್ವಾಧಿಕಾರದ ವಿರುದ್ಧ ಭಾಷಣ ಆರಂಭಿಸಿದರು. ಇಂದಿರಾ ಜಯಂತಿ ಮೆರವಣಿಗೆಯಲ್ಲಿದ್ದ ಜನರೆಲ್ಲ ಇತ್ತ ಹೊರಳಿದರು. ಆ ಮೆರವಣಿಗೆ ಬಂದಾಯ್ತು. ಪೊಲೀಸರು ಬಂದು ಪದ್ದಣ್ಣನವರನ್ನು ಬಂಧಿಸಿ ಕರೆದುಕೊಂಡು ಹೋದಾಗ ಜನರೆಲ್ಲ ಅವರನ್ನೇ ಹಿಂಬಾಲಿಸಿದರು. ಆಮೇಲೆ ಇಂದಿರಾ ಜಯಂತಿ ಆಚರಿಸಲು ಹತ್ತಿರದ ಪ್ರಾಥಮಿಕ ಶಾಲೆಯಿಂದ,ಪಾಪ ಬಾಡಿಗೆ ಮಕ್ಕಳನ್ನು ಕರೆತರಬೇಕಾಯಿತು!

ಪದ್ದಣ್ಣ 16 ವರ್ಷ ಶಿರಾಳಕೊಪ್ಪ ಪುರಸಭಾ ಸದಸ್ಯರಾಗಿದ್ದರು. ಸರ್ವಾನುಮತದಿಂದ ಆಯ್ಕೆಯಾಗಿ ಪುರಸಭಾ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.ಶಿಕಾರಿಪುರ ಪಿ. ಎಲ್. ಡಿ ಬ್ಯಾಂಕ್‌ನ ಅಧ್ಯಕ್ಷರೂ ಆಗಿದ್ದರು.ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ಪದ್ದಣ್ಣನವರ ತಂದೆ ಡಾ. ಶ್ರೀನಿವಾಸ ಭಟ್ಟರು ಜನಪ್ರಿಯ ವೈದ್ಯರಾಗಿ ಸೇವೆ ಸಲ್ಲಿಸಿದ್ದರು.87ರ ಈ ಇಳಿ ವಯಸ್ಸಲ್ಲೂ ಪದ್ದಣ್ಣ ಸಂಘದ ಶಾಖೆಗೆ ಹೋಗುತ್ತಾರೆ. ಶಿವಮೊಗ್ಗದಲ್ಲಿ ನೆಲೆಸಿರುವ ಅವರು ತಮ್ಮ ನೇತ್ರದಾನ,ದೇಹ ದಾನಗಳಿಗೆ ಅಗತ್ಯವಿರುವ ಸಮ್ಮತಿ ಪತ್ರ ಸಿದ್ಧಪಡಿಸಿ ಇಟ್ಟಿದ್ದಾರೆ.

ಜನ್ನಾಪುರದಲ್ಲಿ ಅಕ್ಕಿ ಗಿರಣಿ ನಡೆಸುತ್ತಿದ್ದ ಅವರು ,ತಮ್ಮ ಪಾಲಿನ ಆಸ್ತಿಯನ್ನು ತಮ್ಮ ಐವರು ಸೋದರರಿಗೆ ಹಂಚಿದ್ದಾರೆ.ಕೇಂದ್ರ ಹಾಗೂ 20ಕ್ಕೂ ಹೆಚ್ಚು ರಾಜ್ಯಗಳಲ್ಲಿ ಬಿಜೆಪಿ ಆಡಳಿತದ ಗದ್ದುಗೆ ಹಿಡಿದಿರುವ ಈ ಸುವರ್ಣ ಕಾಲ ನೋಡಿ, ತಾನು ಹಾಗೂ ತನ್ನಂತಹ ಅದೆಷ್ಟೋ ಕಾರ್ಯಕರ್ತರು ದಶಕಗಳಿಂದ ಬೆವರು ಹರಿಸಿ ಪಕ್ಷ ಬೆಳೆಸಿದ್ದು ಸಾರ್ಥಕವಾಯಿತಲ್ಲ ಎಂಬ ಧನ್ಯತೆ ಅವರದ್ದಾಗಿದೆ.

ಚರ್ಚೆಗೊಂದು ಸಾಲು...

# ಚುನಾವಣೆಯಲ್ಲಿನ ಗೆಲುವು ಜವಾಬ್ದಾರಿ, ಸೋಲು ಸವಾಲು

ಪ್ರಜಾಪ್ರಭುತ್ವದ ಮಹೋತ್ಸವದಲ್ಲಿ ಚುನಾವಣೆಗಳು ಕೇವಲ ಅಂಕಿ-ಅಂಶಗಳ ಆಟವಲ್ಲ, ಅವು ಜನಮಾನಸದ ನಾಡಿಮಿಡಿತ. ರಾಜಕೀಯ ಪಕ್ಷವೊಂದರ ಪಾಲಿಗೆ ಚುನಾವಣೆ ಎನ್ನುವುದು ಕೇವಲ ಅಧಿಕಾರ ಹಿಡಿಯುವ ಮಾರ್ಗವಲ್ಲ, ಬದಲಿಗೆ ಅದೊಂದು ನಿರಂತರ ತಪಸ್ಸು. ಈ ತಪಸ್ಸಿನ ಹಾದಿಯಲ್ಲಿ ಎದುರಾಗುವ ಎರಡು ಪ್ರಮುಖ ಘಟ್ಟಗಳೇ-ಗೆಲುವು ಮತ್ತು ಸೋಲು. ಬಿಜೆಪಿಯಂತಹ ಸೈದ್ಧಾಂತಿಕ ಹಿನ್ನೆಲೆಯುಳ್ಳ ಸಾಂಸ್ಕೃತಿಕ ರಾಷ್ಟ್ರೀಯತೆಯ ಪಕ್ಷಕ್ಕೆ ಗೆಲುವು ಎಂಬುದು ಮೈಮರೆಯುವ ಸಂಭ್ರಮವಲ್ಲ, ಅದೊಂದು ಪರಮ ಜವಾಬ್ದಾರಿ ಮತ್ತು ಸೋಲು ಎಂಬುದು ಕೊನೆಯಲ್ಲ, ಅದೊಂದು ಹೊಸ ಸವಾಲು ಮತ್ತು ಆತ್ಮಾವಲೋಕನಕ್ಕೆ ಸಿಗುವಂತಹ ಒಂದು ಅವಕಾಶ.

ಪ್ರಜಾಪ್ರಭುತ್ವದಲ್ಲಿ ಮತದಾರರೇ ಸಾರ್ವಭೌಮರು. ಅವರು ನೀಡಿದ ಗೆಲುವು ಅಹಂಕಾರ ಪಡುವುದಕ್ಕಲ್ಲ, ಅವರ ನಿರೀಕ್ಷೆಗಳನ್ನು ಈಡೇರಿಸಲು ನಮಗೆ ನೀಡಿದ ಆಜ್ಞೆ ಮತ್ತು ಅವಕಾಶ. ನಮ್ಮ ಸನಾತನ ಸಂಸ್ಕೃತಿಯಲ್ಲಿ ಒಂದು ಮಾತಿದೆ. 'ವಿಲಾಸಾಯ ನ ಭವತಿ ರಾಜಪ್ರಭುತ್ವಂ'. ಎಂದರೆ ರಾಜ್ಯಾಧಿಕಾರ ಎನ್ನುವುದು ಭೋಗಕ್ಕಲ್ಲ, ಅದು ಯೋಗ ಮತ್ತು ತ್ಯಾಗಕ್ಕೆ ಮಾತ್ರ ಸೀಮಿತ.

2014 ರಲ್ಲಿ ಮೊದಲ ಬಾರಿ ಪೂರ್ಣ ಬಹುಮತದೊಂದಿಗೆ ಬಿಜೆಪಿ ಗೆದ್ದು ಕೇಂದ್ರದಲ್ಲಿ ಅಧಿಕಾರ ಹಿಡಿದಾಗ ಶ್ರೀ ನರೇಂದ್ರ ಮೋದಿಯವರು ಸಂಸತ್ತಿನ ಮೆಟ್ಟಿಲುಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಪ್ರವೇಶಿಸಿದರು. ತಮಗೆ ಸಿಕ್ಕ ಗೆಲುವನ್ನು ಅವರು ಅಧಿಕಾರ ಎಂದು ಭಾವಿಸಲಿಲ್ಲ, ಬದಲಿಗೆ ದೇಶದ 140 ಕೋಟಿ ಜನರ ಸೇವೆ ಮಾಡಲು ಸಿಕ್ಕ ಪ್ರಧಾನ ಸೇವಕನ ಜವಾಬ್ದಾರಿ ಎಂದು ಸ್ವೀಕರಿಸಿದರು.

ಹಾಗೆಯೇ ಸೋಲು ಎನ್ನುವುದು ಯಾವುದೇ ಸಜೀವ ಸಂಘಟನೆಗೆ ಅಂತಿಮ ತೀರ್ಪಲ್ಲ. ಸೋತಾಗ ನಿರಾಶರಾಗಿ ಕುಳಿತುಕೊಳ್ಳುವುದು ಧೃತರಾಷ್ಟ್ರನ ಮನಸ್ಥಿತಿಯೇ ಹೊರತು, ಕೃಷ್ಣನ ಗೀತಾ ಬೋಧನೆ ಪಡೆದ ಅರ್ಜುನನ ಮನಸ್ಥಿತಿಯಲ್ಲ. ಸೋಲು ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲು ಪ್ರಕೃತಿ ನೀಡುವ ಅತ್ಯುತ್ತಮ ಪಾಠ. ಬಿರುಗಾಳಿಗೆ ಸಿಕ್ಕ ಕಮಲದ ದಳಗಳು ಸ್ವಲ್ಪ ಮುದುಡಬಹುದು, ಆದರೆ ಕೆಸರಿನಲ್ಲಿಯೇ ಹುಟ್ಟಿ ಸೂರ್ಯನ ಕಡೆಗೆ ಮುಖ ಮಾಡುವ ಅದರ ಸಹಜ ಗುಣ ಬದಲಾಗುವುದಿಲ್ಲ, ಬದಲಾಗಲೂ ಬಾರದು.

ಅಟಲ್ ಬಿಹಾರಿ ವಾಜಪೇಯಿ ಮತ್ತು ಲಾಲ್ ಕೃಷ್ಣ ಅಡ್ವಾಣಿಯವರ ಕಾಲವನ್ನು ನೆನಪಿಸಿಕೊಳ್ಳಿ. ಕೇವಲ 2 ಲೋಕಸಭಾ ಸ್ಥಾನಗಳಿಗೆ ಕುಸಿದಿದ್ದಾಗ ಇಡೀ ದೇಶ ನೋಡಿ ನಕ್ಕಿತ್ತು. ಆದರೆ ಅಟಲ್ ಜೀ 'ನ ದೈನ್ಯಂ, ನ ಪಲಾಯನಂ' ಎಂದು ಕಾರ್ಯಕರ್ತರಲ್ಲಿ ಆತ್ಮ ಸ್ಥೈರ್ಯವನ್ನು ತುಂಬಿದರು. ಸಂಸತ್ತಿನಲ್ಲಿ ಸಿಂಹಗರ್ಜನೆ ಮಾಡಿದರು. 'ಸೂರ್ಯ ಮೂಡುವುದು ಎಷ್ಟು ಸತ್ಯವೋ, ಕಮಲ ಅರಳುವುದು ಅಷ್ಟೇ ಸತ್ಯ' ಎಂದರು. ಆ ಸೋಲನ್ನು ಒಂದು ಸವಾಲಾಗಿ ಸ್ವೀಕರಿಸಿದ ಲಕ್ಷಾಂತರ ಕಾರ್ಯಕರ್ತರು ಹಗಲಿರುಳು ಶ್ರಮಿಸಿದರು. ಅದರ ಫಲವೇ ಇಂದು ದೇಶಾದ್ಯಂತ ಬಿಜೆಪಿ ಬಲಿಷ್ಠತೆ ಪಸರಿಸಿದೆ.

ಗೆದ್ದಾಗ ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವಂತಹ ಜವಾಬ್ದಾರಿ ಪ್ರತಿಯೊಬ್ಬ ಕಾರ್ಯಕರ್ತನ ಮೇಲಿರುತ್ತದೆ. ಸೋತಾಗ ಜನರ ವಿಶ್ವಾಸವನ್ನು ಮರಳಿ ಗಳಿಸುವ, ವಿರೋಧ ಪಕ್ಷವಾಗಿ ಆಡಳಿತ ಪಕ್ಷದ ಜನವಿರೋಧಿ ನೀತಿಗಳ ವಿರುದ್ಧ ಹೋರಾಡುವ ಸವಾಲುಗಳು ಕಾರ್ಯಕರ್ತನ ಮುಂದಿರುತ್ತದೆ. ರಾಜಕೀಯ ಎನ್ನುವುದು ಕೇವಲ ಅಧಿಕಾರವನ್ನು ಪಡೆಯುವ ಹಪಾಹಪಿತನವಲ್ಲ, ಅದು ಒಂದು ಸೇವೆಯ ಮಾಧ್ಯಮ. ಕಮಲ ಪಥದಲ್ಲಿ ಸಾಗುವಾಗ ಗೆಲುವಿನ ಅಹಂಕಾರ ಇರಬಾರದು ಹಾಗೆಯೇ ಸೋಲಿನ ನಿರಾಶೆಯೂ ಪಡಬಾರದು.

ರಾಜಕೀಯ ಗೆಲುವು ಸಾರ್ಥಕವಾಗುವುದು ಸಮಾಜದ ಕೊನೆಯ ಸಾಲಿನಲ್ಲಿ ನಿಂತಿರುವ ಅತ್ಯಂತ ಬಡವನ ಮುಖದಲ್ಲಿ ನಗು ಮೂಡಿದಾಗ ಮಾತ್ರ. 'ಅಧಿಕಾರ ಎಂಬುದು ವೈಭವಕ್ಕಲ್ಲ, ಅದು ಸಮಾಜದ ಕಟ್ಟಕಡೆಯ ವ್ಯಕ್ತಿಯ ಸಬಲೀಕರಣಕ್ಕೆ ಬಳಸುವ ಸಾಧನ' ಎನ್ನುವ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಮಾತು, 'ನಾವು ಶೂನ್ಯದಿಂದ ಈ ಸಾಮ್ರಾಜ್ಯವನ್ನು ಕಟ್ಟಿದ್ದೇವೆ. ಸೋಲು ನಮಗೆ ಹೊಸದಲ್ಲ, ಗೆಲುವು ನಮಗೆ ಅಂತಿಮವಲ್ಲ. ಜನಾದೇಶವನ್ನು ಗೌರವಿಸಿ, ಜನರ ಮಧ್ಯದಲ್ಲೇ ಇದ್ದು ಅವರ ಸುಖ-ದುಃಖಗಳಲ್ಲಿ ಭಾಗಿಯಾಗುವುದೇ ನಮ್ಮ ಹಾದಿ' ಎನ್ನುವ ಶ್ರೀ ಬಿ.ಎಸ್. ಯಡಿಯೂರಪ್ಪನವರ ನುಡಿಗಳೂ ನಮ್ಮ ಧ್ಯೇಯ ಪಥದಲ್ಲಿ ಬೆಳಕು ನೀಡಿವ ದಾರಿದೀಪಗಳು.

**ಮುಂದಿನ ಸಂಚಿಕೆಯ ಚರ್ಚೆಗೊಂದು ಸಾಲು**

**ಆರಾಧಿಸು ಎಂದು ಅಪೇಕ್ಷೆ ಪಡುವುದು ನಾಯಕತ್ವ,**
**ಅನುಸರಿಸು ಎಂದು ಅಪೇಕ್ಷಿಸುವುದು ನೇತೃತ್ವ**



### ಮಾಸದ ಮಾಧುರ್ಯ 110ನೇ ಕಾರ್ಯಕ್ರಮದಲ್ಲಿ ಶ್ರೀ ಜಿ.ಎಸ್. ಹೆಗಡೆ, ಸಪ್ತಕ, ಬೆಂಗಳೂರು ಇವರ ಸಹಯೋಗದಲ್ಲಿ

# ಸಂಗೀತ ಸಂಜೆ



ಮಾಸದ ಮಾಧುರ್ಯದ109ನೇ ಕಂತಿನಲ್ಲಿ ಸಪ್ತಕ ಸಂಗೀತ ಸಂಸ್ಥೆಯ ಸಹಯೋಗದಲ್ಲಿ 'ಸಂಗೀತ ಸಂಜೆ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀಯುತ ಜಿ.ಎಸ್. ಹೆಗಡೆಯವರು ಕರ್ನಾಟಕ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸುತ್ತಲೇ 'ಸಪ್ತಕ' ಸಂಗೀತ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ಇವರ ಕುಟುಂಬವೇ ಕಲಾ ಕುಟುಂಬ. ಕು. ಸಂಗೀತ ರವರು ಹಿಂದುಸ್ತಾನಿ ಸಂಗೀತ ಹಾಗೂ ಭಕ್ತಿಗೀತೆಯಿಂದ ಆಗಮಿಸಿದ್ದ ಎಲ್ಲಾ ಕಲಾಭಿಮಾನಿಗಳ ಮನ ಮುದಗೊಳಿಸುವ ಸಾರ್ಥಕ ಕ್ಷಣಕ್ಕೆ ಸಾಕ್ಷಿಯಾದರು. ಈ ಕಲಾ ಪ್ರತಿಭೆಯನ್ನು ಹಳ್ಳಿಯಿಂದ ಕರೆತಂದು ಕಲಾಪ್ರೇಕ್ಷಕರಿಗೆ ಪರಿಚಯಿಸಿದ್ದು ಶ್ರೀ ಜಿ.ಎಸ್. ಹೆಗಡೆಯವರು. ಇಂತಹ ಅನೇಕ ಪ್ರತಿಭೆಗಳಿಗೆ ಆಧಾರಸ್ತಂಭವಾಗಿ ನಿಂತಿರುವ ಇವರು ನಿಜಕ್ಕೂ ಅಭಿನಂದನಾರ್ಹರು.

ಶ್ರೀಕೌಶಿಕ್ ಭಟ್ ರವರು ತಬಲ ಹಾಗೂ ಶ್ರೀ ವಿಘ್ನೇಶ್ ಭಾಗವತ್ ಹಾರ್ಮೋನಿಯಂ ಮತ್ತು ಶ್ರೀ ಸಾತ್ವಿಕ್ ಹೆಗಡೆಯವರು ತಾಳದಲ್ಲಿ ಸಂಗೀತ ಸಂಜೆಗೆ ಸಾಥ್ ನೀಡಿ ಹೊಸ ಮೆರಗನ್ನು ನೀಡಿದರು.

ಈ ಕಾರ್ಯಕ್ರಮದ ಇನ್ನೊಂದು ವಿಶೇಷ ಸಂಗತಿಯೆಂದರೆ 'ಸಪ್ತಕ' ಸಂಗೀತ ಸಂಸ್ಥೆಯ ಸ್ಥಾಪಕರಾದ ಶ್ರೀ ಜಿ.ಎಸ್. ಹೆಗಡೆಯವರಿಗೆ 75 ವರ್ಷದ ಸಂಭ್ರಮ ಹಾಗೂ ಸಪ್ತಕ ಸಂಸ್ಥೆಯ ಸುವರ್ಣ ಮಹೋತ್ಸವ ವರ್ಷ. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮಾಜಿ ಉಪಮುಖ್ಯಮಂತ್ರಿ ಹಾಗೂ ಹಾಲಿ ಶಾಸಕರಾದ ಡಾ. ಅಶ್ವತ್ಥನಾರಾಯಣ ರವರು ಶ್ರೀ ಜಿ.ಎಸ್. ಹೆಗಡೆ ದಂಪತಿಗಳನ್ನು ಶ್ರೀಕೃಷ್ಣನ ಮೂರ್ತಿ, ಅಭಿನಂದನಾ ಪತ್ರವನ್ನು ಹಾಗೂ ಫಲತಾಂಬೂಲವನ್ನು ನೀಡಿ ಸನ್ಮಾನಿಸಿ ಶತಾಯುಷಿಗಳಾಗಿರಿ ಎಂದು ಅಭಿನಂದನಾ ಮಾತುಗಳನ್ನಾಡಿದರು. ಶ್ರೀ ದಾಮೋದರ ನಾಯ್ಕರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು.



ಮನ್ ಕಿ ಬಾತ್

# ಜನ ಶಕ್ತಿಯ ಮೂಲಕ ವಿಕಸಿತ ಭಾರತದತ್ತ

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 'ಮನ್ ಕಿ ಬಾತ್' ಕಾರ್ಯಕ್ರಮದ 134ನೇ ಸಂಚಿಕೆಯಲ್ಲಿ ಸಮಾಜಸೇವೆ, ಜಲ ಸಂರಕ್ಷಣೆ, ಆರೋಗ್ಯ, ಕ್ರೀಡಾ ಸಾಧನೆಗಳು ಹಾಗೂ ಸಾಂಸ್ಕೃತಿಕ ಪರಂಪರೆಯ ಮಹತ್ವದ ಕುರಿತು ಮಾತನಾಡಿದರು. ಯುವಜನತೆಯ ಸೃಜನಶೀಲತೆ ಮತ್ತು ನವೋದ್ಯಮಗಳ ಮಹತ್ವವನ್ನೂ ಒತ್ತಿ ಹೇಳಿದರು. ದೇಶದ ವಿವಿಧ ಭಾಗಗಳ ಯುವಕರು ವಿಜ್ಞಾನ, ತಂತ್ರಜ್ಞಾನ, ಕೃಷಿ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರಗಳ ಮೂಲಕ ಸಮಾಜದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಅವರು ತಿಳಿಸಿದರು. ಡಿಜಿಟಲ್ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಜನಸಾಮಾನ್ಯರ ಜೀವನವನ್ನು ಸುಲಭಗೊಳಿಸುವ ಪ್ರಯತ್ನಗಳು ದೇಶದ ಅಭಿವೃದ್ಧಿಗೆ ಹೊಸ ವೇಗವನ್ನು ನೀಡುತ್ತಿವೆ ಎಂದರು. ಹೊಸ ಆಲೋಚನೆಗಳು, ಸ್ವಾವಲಂಬನೆ ಮತ್ತು ಜನರ ಸಕ್ರಿಯ ಭಾಗವಹಿಸುವಿಕೆಯ ಮೂಲಕ ಭಾರತವು ವಿಶ್ವದ ಮುಂಚೂಣಿ ರಾಷ್ಟ್ರವಾಗಿ ಹೊರಹೊಮ್ಮುವ ಸಾಮರ್ಥ್ಯ ಹೊಂದಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ರಾಷ್ಟ್ರ ನಿರ್ಮಾಣದಲ್ಲಿ ಪ್ರತಿಯೊಬ್ಬ ನಾಗರಿಕನ ಪಾತ್ರವನ್ನು ನೆನಪಿಸಿದ ಅವರು ಸಮಾಜಸೇವೆ, ರಾಷ್ಟ್ರ ನಿರ್ಮಾಣ ಹಾಗೂ ಸಮಾಜದ ಒಳಿತಿಗಾಗಿ ನಿಸ್ವಾರ್ಥವಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳು ಮತ್ತು ಸಂಘಟನೆಗಳ ಸೇವೆಯನ್ನು ಶ್ಲಾಘಿಸಿದರು. ದೇಶದ ವಿವಿಧ ಭಾಗಗಳಲ್ಲಿ ಜನರು ಸ್ವಯಂಪ್ರೇರಿತವಾಗಿ ಕೈಗೊಳ್ಳುತ್ತಿರುವ ಸಾಮಾಜಿಕ ಕಾರ್ಯಗಳು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರುತ್ತಿವೆ, ಜನಸೇವೆಯ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿರುವವರ ಕಾರ್ಯಗಳು ಇತರರಿಗೂ ಸ್ಫೂರ್ತಿಯಾಗಬೇಕು ಎಂದು ಕರೆ ನೀಡಿದರು.

**ಜಲ ಸಂರಕ್ಷಣೆ :** ಬೇಸಿಗೆಯ ತೀವ್ರತೆಯ ಹಿನ್ನೆಲೆಯಲ್ಲಿ ನೀರಿನ ಸಂರಕ್ಷಣೆ ಕುರಿತು ವಿಶೇಷವಾಗಿ ಪ್ರಸ್ತಾಪಿಸಿದ ಪ್ರಧಾನಿ, ಪ್ರತಿಯೊಬ್ಬ ನಾಗರಿಕನೂ ನೀರನ್ನು ಜವಾಬ್ದಾರಿಯುತವಾಗಿ ಬಳಸಬೇಕು ಎಂದು ಹೇಳಿದರು. ಮಳೆನೀರು ಸಂಗ್ರಹಣೆ, ಕೆರೆಗಳ ಪುನಶ್ಚೇತನ, ನೀರಿನ ಮಿತ ಬಳಕೆ ಹಾಗೂ ಸ್ಥಳೀಯ ಮಟ್ಟದಲ್ಲಿ ಜಲ ಸಂರಕ್ಷಣಾ ಅಭಿಯಾನಗಳಲ್ಲಿ ಭಾಗವಹಿಸುವಂತೆ ತಿಳಿಸಿದರು ಹಾಗೂ ಭವಿಷ್ಯದ ಪೀಳಿಗೆಗಾಗಿ ಪ್ರತಿ ಹನಿ ನೀರನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಅವರು ತಿಳಿಸಿದರು.

**ಆರೋಗ್ಯ ಮತ್ತು ಉಷ್ಣ ಅಲೆಯ ಕುರಿತು ಜಾಗೃತಿ :** ದೇಶದ ಹಲವೆಡೆ ಉಷ್ಣ ಅಲೆ ಪರಿಸ್ಥಿತಿ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವಂತೆ ಪ್ರಧಾನಿ ಅವರು ಸಲಹೆ ನೀಡಿದರು. ಸಾಕಷ್ಟು ನೀರು ಕುಡಿಯುವುದು, ಬಿಸಿಲಿನಲ್ಲಿ ಅನಗತ್ಯವಾಗಿ ಸಂಚರಿಸುವುದನ್ನು ತಪ್ಪಿಸುವುದು ಹಾಗೂ ಹಿರಿಯ ನಾಗರಿಕರು ಮತ್ತು ಮಕ್ಕಳ ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸುವಂತೆ ಸೂಚಿಸಿದರು.

**ಕ್ರೀಡಾ ಸಾಧನೆಗಳಿಗೆ ಅಭಿನಂದನೆ :** ಭಾರತೀಯ ಯುವ ಅಥ್ಲೀಟ್‌ಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧಿಸುತ್ತಿರುವ ಯಶಸ್ಸನ್ನು ಪ್ರಧಾನಮಂತ್ರಿಗಳು ಶ್ಲಾಘಿಸಿದರು. ಯುವಕರ ಪರಿಶ್ರಮ, ಶಿಸ್ತು ಮತ್ತು ಆತ್ಮವಿಶ್ವಾಸವು ಭಾರತದ ಕ್ರೀಡಾ ಕ್ಷೇತ್ರಕ್ಕೆ ಹೊಸ ದಿಕ್ಕು ನೀಡುತ್ತಿದೆ, ಕ್ರೀಡೆಯು ದೈಹಿಕ ಆರೋಗ್ಯದ ಜೊತೆಗೆ ರಾಷ್ಟ್ರೀಯ ಹೆಮ್ಮೆಯನ್ನು ಹೆಚ್ಚಿಸುವ ಶಕ್ತಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ವೋಕಲ್ ಫಾರ್ ಲೋಕಲ್ :** ಪ್ರಧಾನಿ ಅವರು ಸ್ಥಳೀಯ ಉತ್ಪನ್ನಗಳಿಗೆ ಉತ್ತೇಜನ ನೀಡುವ **'ವೋಕಲ್ ಫಾರ್ ಲೋಕಲ್'** ಅಭಿಯಾನದ ಮಹತ್ವವನ್ನು ಉಲ್ಲೇಖಿಸಿ, ಸ್ವದೇಶಿ ಉತ್ಪನ್ನಗಳ ಬಳಕೆಯಿಂದ ಸ್ಥಳೀಯ ಉದ್ಯಮಿಗಳು, ಕರಕುಶಲ ಕಲಾವಿದರು ಮತ್ತು ಸಣ್ಣ ವ್ಯಾಪಾರಿಗಳಿಗೆ ಆರ್ಥಿಕ ಬಲ ಸಿಗುತ್ತದೆ ಎಂದು ಹೇಳಿದರು. ಆತ್ಮನಿರ್ಭರ ಭಾರತದ ಕನಸನ್ನು ಸಾಕಾರಗೊಳಿಸಲು ಎಲ್ಲರೂ ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು.

ವಿಕಸಿತ ಭಾರತ ನಿರ್ಮಾಣದ ಗುರಿ ಸಾಧಿಸಲು ಪ್ರತಿಯೊಬ್ಬ ನಾಗರಿಕನು ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಕೊಡುಗೆಯನ್ನು ನೀಡಬೇಕು. ಸೇವಾ ಮನೋಭಾವ, ಪರಿಸರ ಸಂರಕ್ಷಣೆ, ಆರೋಗ್ಯಕರ ಜೀವನಶೈಲಿ ಮತ್ತು ರಾಷ್ಟ್ರೀಯ ಏಕತೆಯ ಮೂಲಕ ಬಲಿಷ್ಠ, ಆತ್ಮನಿರ್ಭರ ಹಾಗೂ ಸಮೃದ್ಧ ಭಾರತವನ್ನು ನಿರ್ಮಿಸಬಹುದು ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.



ಉಡುಪಿ



ಮಂಡ್ಯ




ಮಧುಗಿರಿ




ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ನಿತಿನ್ ನಬಿನ್ ಮತ್ತು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಹಾಗೂ ರಾಜ್ಯ ಉಸ್ತುವಾರಿಗಳಾದ ಡಾ. ರಾಧಾ ಮೋಹನ್‌ದಾಸ್ ಅಗ್ರವಾಲ್ ರವರೊಂದಿಗೆ ಜಗನ್ನಾಥ ಭವನದ ಸಿಬ್ಬಂದಿಗಳು

ಸೃಷ್ಟಿ



ಕಾಲೇ ವರ್ಷತು ಪರ್ಜನ್ಯಃ

# ಬೊಟ್ಟು ಮಾಡಿ ತೋರಿಸುವ ಕೃಪಾಚಾರ್ಯರಂತಹ ಪ್ರಜ್ಞರ ಅವಶ್ಯಕತೆ

ಇತಿಹಾಸ ಮತ್ತು ಪುರಾಣಗಳು ಕೇವಲ ಕಥೆಗಳಲ್ಲ. ಅವು ಸಾರ್ವಕಾಲಿಕ ಸತ್ಯವನ್ನು ಸಾರುವ ದಿಕ್ಸೂಚಿಗಳು. ಅದರಲ್ಲೂ ಮಹಾಭಾರತವಂತೂ ಇಂದಿನ ಸಮಾಜದ ಪ್ರಸ್ತುತತೆಯಾಗಿದೆ. ಮಹಾಭಾರತದ ಭೀಷ್ಮ, ದ್ರೋಣ, ಕರ್ಣರ ಅಬ್ಬರದ ನಡುವೆ ಅಷ್ಟಾಗಿ ಚರ್ಚೆಗೆ ಬಾರದ, ಆದರೆ ಅತ್ಯಂತ ಪ್ರಮುಖವಾದ ವ್ಯಕ್ತಿತ್ವ ಆಚಾರ್ಯ ಕೃಪ. ಕೃಪಾಚಾರ್ಯರು ಕೇವಲ ಬಿಲ್ಲು ವಿದ್ಯಾ ಚತುರರಲ್ಲ, ಅವರು ಅಪ್ರತಿಮ ಶಿವಭಕ್ತರು ಮತ್ತು ದ್ರೋಣಾಚಾರ್ಯರಿಗಿಂತಲೂ ಹೆಚ್ಚಿನ ಸ್ಥಿತಪ್ರಜ್ಞತೆಯನ್ನು ಮೈಗೂಡಿಸಿಕೊಂಡಿದ್ದ ಮಹಾಮುನಿ.

ಕೃಪಾಚಾರ್ಯರಿಗೆ ಪಾಂಡವರು ಮತ್ತು ಕೌರವರು ಇಬ್ಬರೂ ಸಮಾನರಾಗಿದ್ದರು. ಇಬ್ಬರ ಹಿತವನ್ನೂ ಬಯಸುವ ದೊಡ್ಡ ಮನಸ್ಸು ಅವರದಾಗಿತ್ತು. ಕೌರವರು ತಪ್ಪು ಹೆಜ್ಜೆ ಇಟ್ಟಾಗಲೆಲ್ಲಾ ಅವರನ್ನು ತಿದ್ದಲು, ತಪ್ಪುಗಳನ್ನು ತಪ್ಪಿಸಲು ಕೃಪಾಚಾರ್ಯರು ಜೀವಮಾನವಿಡೀ ಶ್ರಮಿಸಿದರು. ಮಹಾಭಾರತ ಯುದ್ಧದಿಂದ ಇಡೀ ಜಗತ್ತೇ ನಾಶವಾಗುತ್ತದೆ ಎಂಬುದನ್ನು ಮುಂಚಿತವಾಗಿಯೇ ಅರಿತಿದ್ದ ಅವರು, ಯುದ್ಧವನ್ನು ತಡೆಯಲು ನಿರಂತರ ಪ್ರಯತ್ನ ಮಾಡಿದರು.

ಮಹಾಭಾರತ ಯುದ್ಧದಲ್ಲಿ ಕೌರವರ ಸೋಲಿಗೆ ಪ್ರಮುಖ ಕಾರಣ-ಸರಿಯಾದ ಶಕ್ತಿಯನ್ನು ಸರಿಯಾದ ಸಮಯದಲ್ಲಿ ಬಳಸಿಕೊಳ್ಳದಿರುವುದು. ಸಂಧಾನದ ಪ್ರಯತ್ನಗಳಿಗೆ ಮನ್ನಣೆ ನೀಡದಿರುವುದು. ಪಾಂಡವರಿಗೆ ಅರ್ಧ ರಾಜ್ಯವನ್ನು ಹಂಚಿಕೊಡಬೇಕು ಎಂದು ಧೃತರಾಷ್ಟ್ರನಿಗೆ ಕೃಪಾಚಾರ್ಯರು ಕಟು ಸತ್ಯವನ್ನು ಹೇಳಿದ್ದರು. ಆದರೆ ಕೌರವರು ಅಹಂಕಾರದಿಂದ ಅದನ್ನು ನಿರಾಕರಿಸಿದರು.

ಕೌರವರು ಪಾಂಡವರನ್ನು ಅವಮಾನಿಸಲು ಹೊರಟಾಗ ಮತ್ತು ವಿರಾಟನಗರದ ಗೋಗ್ರಹಣಕ್ಕೆ ಸೈನ್ಯದೊಂದಿಗೆ ನಿಂತಾಗ ಕೃಪಾಚಾರ್ಯರು ಅಪಶಕುನದ ಮಾತುಗಳ ಮೂಲಕ ಅದನ್ನು ತಡೆಯಲು ಯತ್ನಿಸಿದರು. ಆದರೆ ದುರ್ಯೋಧನ ಅವರ ಮಾತನ್ನು ನಿರ್ಲಕ್ಷಿಸಿದ. ಮಹಾಭಾರತ ಯುದ್ಧದಲ್ಲಿ ಸಂದರ್ಭದಲ್ಲಿ ಕೃಪಾಚಾರ್ಯರಿಗೆ ಸೇನಾಧಿಪತಿ ಪಟ್ಟ ನಿರ್ವಹಿಸುವ ಸಾಮರ್ಥ್ಯವಿದ್ದರು, ಕೌರವರು ಅವರಿಗೆ ಸೇನಾಧಿಪತಿ ಪಟ್ಟ ನೀಡಲಿಲ್ಲ.

ಆದರೆ ಕೃಪಾಚಾರ್ಯರು ಮಾತ್ರ ಎಲ್ಲಿಯೂ ಪ್ರಜ್ಞೆ ತಪ್ಪದೆ ತಮ್ಮ ಪ್ರಬುದ್ಧತೆಯಿಂದ ತನ್ನ ಕರ್ತವ್ಯವನ್ನು ನಿರ್ವಹಿಸುವ ಮೂಲಕ ಪ್ರಜ್ಞರಾದರು. ಕೃಪಾಚಾರ್ಯರ ಈ ದೃಷ್ಟಾಂತದಿಂದ ಇಂದಿನ ರಾಜಕೀಯ ಪಕ್ಷಗಳು ಮತ್ತು ಕಾರ್ಯಕರ್ತರು ಮೂರು ಪಾಠವನ್ನು ಅರಿತುಕೊಳ್ಳಬಹುದು. ಪಕ್ಷದಲ್ಲಿ ದಶಕಗಳ ಕಾಲ ತಪಸ್ಸಿನಂತೆ ಕೆಲಸ ಮಾಡಿದ, ಪ್ರಜ್ಞತೆ ಹೊಂದಿದ ಹಿರಿಯ ನಾಯಕರ ಮಾರ್ಗದರ್ಶನದ ಧ್ವನಿಯನ್ನು ಎಂದೂ ಕಡೆಗಣಿಸಬಾರದು. ಸದಾಕಾಲ ಚುನಾವಣಾ ರಾಜಕೀಯದ ಗದ್ದಲದಲ್ಲೂ ವೈಚಾರಿಕ ಹಿನ್ನೆಲೆಯುಳ್ಳ ಹಿರಿಯರ ಸಲಹೆಗಳು ಪಕ್ಷಕ್ಕೆ ಶ್ರೀರಕ್ಷೆ. ಅಧಿಕಾರದ ಮದ ಅಥವಾ ಅಂಧಾಭಿಮಾನದಿಂದ ತೆಗೆದುಕೊಳ್ಳುವ ತಪ್ಪು ನಿರ್ಧಾರಗಳು ಸಂಘಟನೆಗೆ ಧಕ್ಕೆ ತರುತ್ತವೆ. ಕೃಪಾಚಾರ್ಯರು ಕೌರವರ ತಪ್ಪುಗಳನ್ನು ತಿದ್ದಲು ಹೋದಾಗ ಅವರನ್ನು ಕೌರವರು ಅಪನಂಬಿಕೆಯಿಂದ ನೋಡಿದರು. ಇಂದಿನ ರಾಜಕೀಯದಲ್ಲೂ ಪ್ರಾಮಾಣಿಕ ವಿಮರ್ಶೆಯನ್ನು ಅಪನಂಬಿಕೆ  ಅಥವಾ ಬಂಡಾಯ ಎಂದು ನೋಡದೆ, ಆತ್ಮಾವಲೋಕನದ ಅವಕಾಶವಾಗಿ ಬಳಸಿಕೊಳ್ಳಬೇಕು.

ಯಾವುದೇ ಒಂದು ರಾಜಕೀಯ ಪಕ್ಷ ಅಥವಾ ಸಂಘಟನೆ ದೀರ್ಘಕಾಲ ಉಳಿಯಬೇಕಾದರೆ, ಅಲ್ಲಿ ಕೃಪಾಚಾರ್ಯರಂತಹ ನಿಷ್ಪಕ್ಷಪಾತ ಶಕ್ತಿಗಳಿಗೆ ಗೌರವ ಸಿಗಬೇಕು. ದುರ್ಯೋಧನನಂತೆ ಅಹಂಕಾರದಿಂದ ಹಿರಿಯರ ಸಾಮರ್ಥ್ಯವನ್ನು ಬಳಸಿಕೊಳ್ಳದೆ ಹೋದರೆ ಹಿನ್ನಡೆ ಖಾಯಂ. ರಾಜಕೀಯದಲ್ಲಿ ಅಧಿಕಾರ ಅಥವಾ ಪಕ್ಷದ ಹಿತದ ಜೊತೆಗೆ ರಾಷ್ಟ್ರ ಹಿತ ಮತ್ತು ಜನ ಹಿತ ಮುಖ್ಯವಾಗುತ್ತದೆ. ರಾಜಕೀಯ ಸಂಘಟನೆಗಳಲ್ಲೂ ನಿಷ್ಪಕ್ಷಪಾತ, ದೂರದೃಷ್ಟಿಯ ಮತ್ತು ತಪ್ಪುಗಳನ್ನು ಧೈರ್ಯವಾಗಿ ಬೆಟ್ಟು ಮಾಡಿ ತೋರಿಸುವ ಕೃಪಾಚಾರ್ಯರಂತಹ ಹಿರಿಯ ಮಾರ್ಗದರ್ಶಕರು ಯಾವಾಗಲೂ ಇರಬೇಕು. ಪಕ್ಷದ ಆಂತರಿಕ ಶಿಸ್ತು ಮತ್ತು ಸರಿ-ತಪ್ಪುಗಳ ವಿವೇಚನೆಗೆ ಇಂತಹ ಪ್ರಜ್ಞತೆ ಅತ್ಯಗತ್ಯ. ರಾಜಕೀಯದಲ್ಲಿ ನಾಯಕನಾದವನಿಗೆ ಕಿವಿಮಾತು ಕೇಳುವ ತಾಳ್ಮೆ ಇರಬೇಕು. ಕೌರವರ ಸಭೆಯಲ್ಲಿ ಕೃಪಾಚಾರ್ಯರಂತಹ ಸಮರ ಭೈರವರಿದ್ದರೂ, ಸುಯೋಧನ ಅವರ ಸಾಮರ್ಥ್ಯ ಮತ್ತು ಸಲಹೆಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಿಲ್ಲ. ಇದರ ಪರಿಣಾಮವೇ ಕೌರವರ ವಂಶನಾಶ.

– ಸ್ವಯಂಭೂ

KAMALA PATHA Monthly in Kannada

RNI No.:KARKAN/2023/84034 REGISTERED NEWSPAPER UNDER No. KRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026

KAMALA PATHA – Printed and Published by H.S. GOPINATH on behalf of SAMAGRA VIKASA TRUST. Printed at RASHTROTTHANA MUDRANALAYA, No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: B. V. PRAKASH (Bidare Prakash)